'ಕೊಟ್ಟೂರು ಗ್ರಾಮ ಅಧ್ಯಯನ'

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಳಿಗಾಗಿ
ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ

ಸಂಶೋಧಕರು
ಬಸವರಾಜ .ಎ.ಕೆ.

ಮಾರ್ಗದರ್ಶಕರು
ಡಾ. ಸ.ಚಿ. ರಮೇಶ್
ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವ ವಿದ್ಯಾಲಯ –ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೦೮

300

‘ಕೊಟ್ಟೂರು ಗ್ರಾಮ ಅಧ್ಯಯನ’

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಳಿಗಾಗಿ
ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ

ಸಂಶೋಧಕರು
ಬಸವರಾಜ .ಎ.ಕೆ.

ಮಾರ್ಗದರ್ಶಕರು
ಡಾ. ಸ.ಚಿ. ರಮೇಶ್
ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವ ವಿದ್ಯಾಲಯ –ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೦೨–೨೦೦೩

ದೃಢೀಕರಣ ಪತ್ರ

ಶ್ರೀ **ಬಸವರಾಜ.ಎ.ಕೆ.** ಇವರು **'ಕೊಟ್ಟೂರು ಗ್ರಾಮ ಅಧ್ಯಯನ'** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ್ದಾರೆ. ಕನ್ನಡ ವಿಶ್ವ ವಿದ್ಯಾಲಯ ಹಂಪಿ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. (ಮಾಸ್ಟರ್ ಆಫ್ ಫಿಲಾಸಫಿ) ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢಿಕರಿಸುತ್ತೇನೆ.

ದಿನಾಂಕ : ೦೯-೧೦-೨೦೦೮
ಸ್ಥಳ : ವಿದ್ಯಾರಣ್ಯ

(ಡಾ॥ ಸ.ಚಿ. ರಮೇಶ್)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩೨೭೬

ಪ್ರಮಾಣ ಪತ್ರ

ಬಸವರಾಜ.ಎ.ಕೆ. ಆದ ನಾನು **'ಕೊಟ್ಟೂರು ಗ್ರಾಮ ಅಧ್ಯಯನ'** ಎಂಬ ಶೀರ್ಷಿಕೆಯ ಈ ಸಂಪ್ರಬಂದವನ್ನು ಎಂ.ಫಿಲ್. (ಮಾಸ್ಟರ್ ಆಫ್ ಫಿಲಾಸಫಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು **ಡಾ॥ ಸ.ಚಿ.ರಮೇಶ್** ಅವರ ಮಾರ್ಗದರ್ಶನದಲ್ಲಿ ಸಿದ್ದ ಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧ ಅಥವಾ ಅದರ ಯಾವುದೇ ಭಾಗವನ್ನು ಹಿಂದೆ ಯಾವುದೇ ಪದವಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣಕರಿಸುತ್ತೇನೆ.

ದಿನಾಂಕ : ೦೯-೧೦-೨೦೦೮

ಸ್ಥಳ : ವಿದ್ಯಾರಣ್ಯ

(ಬಸವರಾಜ.ಎ.ಕೆ.)

ಸಂಶೋಧಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ವಿದ್ಯಾರಣ್ಯ – ೫೮೩೨೭೬

ಕೃತಜ್ಞತೆಗಳು :

- ಕನ್ನಡ ವಿಶ್ವ ವಿದ್ಯಾಲಯದಲ್ಲಿ ಎಂ.ಫಿಲ್ ಅಧ್ಯಯನಕ್ಕಾಗಿ ಅವಕಾಶ ಮಾಡಿಕೊಟ್ಟ ಡಾ॥ ಎ. ಮುರಿಗಪ್ಪ ಹಾಗೂ ಕುಲಸಚಿವರಾದ ಡಾ॥ ಹಿ.ಚಿ.ಬೋರಲಿಂಗಯ್ಯ ಹಾಗೂ ನಿರ್ದೇಶಕರಾದ ಡಾ॥ ಪಾಂಡುರಂಗ ಬಾಬು ಅವರಿಗೆ

- ಎಂ. ಫಿಲ್ ಸಂಶೋಧನೆಗೆ ಮಾರ್ಗದರ್ಶನ ಮಾಡಿದ ಪ್ರೀತಿಯ ಗುರುಗಳಾದ ಡಾ॥ ಸ.ಚಿ. ರಮೇಶ್, ಜಾನಪದ ವಿಭಾಗದ ಮುಖ್ಯಸ್ಥರಾದ ಡಾ॥ ಹೆಬ್ಬಾಲೆ.ಕೆ. ನಾಗೇಶ್, ಪ್ರಾಧ್ಯಾಪಕರಾದ ಡಾ॥ ಮಂಜುನಾಥ ಬೇವಿನಕಟ್ಟಿ, ಅಧ್ಯಾಪಕರಾದ ಡಾ॥ ಮೋಗಳ್ಳಿ ಗಣೇಶ್, ಡಾ॥ ಹರಿಶ್ಚಂದ್ರ ದಿಗ್ಗಂಗಿಕರ್, ಡಾ॥ ಸಿ.ಟಿ ಗರುಪ್ರಸಾದ ಅವರಿಗೆ ಹಾಗೂ ವಿಭಾಗದ ಬಸವರಾಜ ಮತ್ತು ನಭಿ ಅವರಿಗೆ

- ಅಧ್ಯಯನಕ್ಕೆ ಪ್ರೀತಿಯಿಂದ ಕಳುಹಿಸಿ ಕಷ್ಟ ಸುಖ ಸಹಿಸಿ ಕೊಂಡ ಪೂಜ್ಯ ತಂದೆ ಮಾಯಪ್ಪ, ತಾಯಿ ಮರಿಯಮ್ಮ, ಸಂಶೋಧನೆಯ ಉದ್ದಕ್ಕೂ ಸಂಪೂರ್ಣ ಬೆಂಬಲ ನೀಡಿದ ನನ್ನ ಪ್ರೀತಿಯ ಮಡದಿಯಾದ ಸಾವಿತ್ರ ಬಸವರಾಜ, ತಮ್ಮನಾದ ನಾಗರಾಜ, ತಂಗಿಯರಾದ ರೇಣುಕ ಮತ್ತು ದುರುಗಮ್ಮ ಅವರಿಗೆ.

- ಸಂಶೋಧನೆಯ ಸಂದರ್ಭದಲ್ಲಿ ಬುದ್ಧಿಯಲ್ಲಿ ಹಂಚಿಕೆದಾರರಾಗಿ ಸದಾ ಓದುಗನನ್ನಾಗಿ ಮಾಡಿದ ಗೆಳೆಯರಾದ ಅರುಣ್‌ಕುಮಾರ್ ಜೋಳದ ಕೂಡ್ಲಿಗಿ, ಗುರುರಾಜ, ಮಲ್ಲಿಕಾರ್ಜುನ, ಕೊಟ್ರೇಶ್. ಎಚ್, ಬಸವರಾಜ ಜಿ, ಮಂಗಳಾ ಬಿ.ಎನ್, ಅಂಜಲಿ, ಕೃಷ್ಣವೇಣಿ, ರಾಮು, ಲಿಂಗಣ್ಣ, ಕುಮಾರ್, ಜಗದೀಶ್ ಹಾಗೂ ಎ.ಡಿ. ಬಸವರಾಜ್ ಅವರಿಗೆ.

- ಸಂಶೋಧನೆಯುದ್ಧಕ್ಕೂ ಓದು ಮತ್ತು ಅಧ್ಯಯನದಲ್ಲಿ ಕಾಳಜಿವಹಿಸಿ ಸೂಕ್ತ ನಿದರ್ಶನ ನೀಡಿದ ಪಿ.ಎಂ ಬಸವಲಿಂಗಯ್ಯ, ಸಿ.ಎಚ್.ಎಮ್. ಕೊಟ್ರಯ್ಯ, ರುದ್ರಮುನಿ ಅಯ್ಯ, ಡಾ ॥ ಹಿರೇಮಠ, ಪೂಜಾರ್ ಕೊಟ್ರಪ್ಪ, ಎಚ್.ಎಸ್. ಶಿವಪ್ರಕಾಶ, ಸಿದ್ದನಗೌಡ, ತ್ರಿಲೋಕಿಕರ್ ಹಾಗೂ ಕೊಟ್ಟೂರಿನ ಸಹಾಯ ಹಸ್ತ ನೀಡಿದ ಎಲ್ಲಾ ಜನಪದರಿಗೆ.

* ಸಂಶೋಧನೆಗೆ ಸಹಕರಿಸಿದ ಕೊಟ್ಟೂರಿನ ಮುಖಂಡರಾದ ಬಿ.ಎಸ್.ವೀರಭದ್ರಪ್ಪ ಹಾಗೂ ಮಕ್ಕಳು, ಎಂ.ಎಂ.ಜೆ. ಸ್ವರೂಪಾನಂದ ಹಾಗೂ ತಮ್ಮಂದಿರು, ಕುಂ.ವಿ. ಕವಿಗಳು, ಅಗಡಿ ಮಂಜುನಾಥ, ಹಿ.ಮ. ಬಸವರಾಜ, ತೆಗ್ಗಿನಕೇರಿ ಕೊಟ್ರೇಶ್, ಚೌಡಪ್ಪ ಶಿಕ್ಷಕರು, ಮರಿಸ್ವಾಮಿ, ಕುಬೇರಪ್ಪ, ಹೆಚ್. ಕೊಟ್ರೇಶ್, ಪೋಲೀಸ್ ಇಲಾಖೆ, ರೆವೆನ್ಯೂ ವಿಭಾಗ, ಕೃಷಿಮಾರುಕಟ್ಟೆ ಅಧಿಕಾರಿಗಳು, ಹಾಗೂ ಶ್ರೀ ಕೊಟ್ಟೂರೇಶ್ವರ ಆಡಳಿತ ಅಧಿಕಾರಿಗಳು ಅವರಿಗೆ.

* ಬಾಲ್ಯದಿಂದಲೂ ಸಹಕರಿಸಿದ ನನ್ನೂರಿನವರಾದ ಶ್ರೀ ಡಾ॥ ಸಾವಜ್ಜಿ ಭೀಮನಗೌಡ ಹಾಗೂ ಸಹೋದರರು, ಬಿ. ಮಾರುತಿ ಕೊಟ್ರೇಶಪ್ಪ, ನಾಗರಕಟ್ಟೆಯ ಎಲ್ಲಾ ಹಿರಿಯರಿಗೆ ಹಾಗೂ ಮಿತ್ರರಿಗೆ.

* ಸಂಶೋಧನೆಗೆ ಪೂರಕವಾಗಿ ಪುಸ್ತಕಗಳನ್ನು ಒದಗಿಸಿದ ಗ್ರಂಥಾಲಯದ ಸಿಬ್ಬಂಧಿಯವರಿಗೆ, ಅಂದವಾಗಿ ಡಿ.ಟಿ.ಪಿ ಮಾಡಿದ ಸ್ನೇಹಿತನಾದ ಹೆಚ್. ವಿರೇಶ್ ಮತ್ತು ಕಾವ್ಯಾಂಜಲಿ ಕಂಪ್ಯೂಟರ್ಸ್ ಕೊಟ್ಟೂರು, ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಿತ್ರರಿಗೆ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಬಸವರಾಜ.ಎ.ಕೆ.
ನಾಗರಕಟ್ಟೆ.



ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ

ಕೊಟ್ಟೂರು ಗ್ರಾಮ ಅಧ್ಯಯನ

ವಿಷಯ ಸೂಚಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಪ್ರಸ್ತಾವನೆ :

ವಿವಿಧ ಕಾಡು ಮೇಡುಗಳಲ್ಲಿ ಅಲೆಮಾರಿಯಾಗಿ ಆರಂಭಿಸಿದ ಮಾನವನ ಜೀವನವು ಕಾಲ ಕ್ರಮೇಣ ವಿವಿಧ ಮಜಲುಗಳಾಗಿ ವಾಸಿಸುವ ನಾಗರಿಕ ಹಂತವನ್ನು ತಲುಪಿತು. ಈ ಹಂತದಲ್ಲಿ ಜಗತ್ತಿನ ಅನೇಕ ನಾಗರೀಕತೆಗಳು, ಬುಡಕಟ್ಟುಗಳು ಬೆಳೆದು ಬಂದವು. ಇಲ್ಲಿಂದಲೇ ವ್ಯವಸ್ಥಿತವಾದ ಜೀವನ ಆರಂಭವಾಯಿತು. ಮುಂದಿನ ಹಂತದಲ್ಲಿ ತಮ್ಮ ತಮ್ಮ ಗುಂಪನ್ನು ಒಂದೆಡೆ ಸೇರಿಸಿ ಅನೇಕ ಸಮುದಾಯಗಳು ನೆಲೆನಿಂತವು. ಈ ನೆಲೆಯಲ್ಲಿಯೇ ಗುರುತಿಸಬಹುದಾದಂತಹ ಹೆಸರನ್ನು ನೀಡಲಾಯಿತು. ಇದೇ ಮುಂದೇ ಕಾಲ ಕ್ರಮೇಣ ಊರು, ಗ್ರಾಮ, ಹಳ್ಳಿ, ಹಟ್ಟಿ, ಕಟ್ಟೆ, ಪುರ, ಹೀಗೆ ಅನೇಕ ಹೆಸರುಗಳಿಂದ ವಾಸದ ನೆಲೆಗಳು ಆರಂಭವಾದವು. ತಮ್ಮದೇ ಆದಂತಹ ಮನೆ ಗುಡಿಸಲುಗಳು ರಚನೆಯಾಗಿ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ **'ಗ್ರಾಮ ಸಮಾಜ'** ಎಂಬ ಪರಿಕಲ್ಪನೆಯು ಮೂಡತೊಡಗಿತು. ಅಲೆಮಾರಿ ಜೀವನ ಸಂಸ್ಕೃತಿಯಿಂದ ಪಲ್ಲಟಗೊಂಡ ಮಾನವ ಸಮುದಾಯವು ಈ ಬಗೆಯ ಗ್ರಾಮ ಸಮಾಜದಲ್ಲಿ ಬದುಕಿದ್ದೇ ಜಗತ್ತಿನ ವಿಕಾಸಕ್ಕೆ ಮಹಾಮಾರ್ಗವಾಯಿತೆಂಬುದನ್ನು ಗಮನಿಸಬೇಕು. ಈ ಮೂಲಕ ಆಯಾ ಜನಾಂಗದ ಸಂಸ್ಕೃತಿಯು ಒಂದೊಂದು ನೆಲೆಯಲ್ಲಿ ಬೆಳೆಯುತ್ತಾ ಬಂದಿತು. ಇದೇ ಇಂದಿಗೂ ನಾಗರೀಕವೆಂದು ಕರೆಯಲ್ಪಡುವ ಆಧುನಿಕ ಹಾಗೂ ಆಧುನಿಕೋತ್ತರ ಜೀವನಕ್ಕೆ ಭದ್ರ ತಳಹದಿಯೆಂದು ಹೇಳಬಹುದು.

ಸಂಸ್ಕೃತಿಗಳ ಬೆಳವಣಿಗೆಯು ಬಹುಮುಖ್ಯವಾಗಿ ಬೆಳೆದು ಬಂದದ್ದು, ಮೌಖಿಕ ಪರಂಪರೆಯಡಿಯಲ್ಲಿ ಅಕ್ಷರಸ್ಥವಲ್ಲದ ಸಮುದಾಯದ ಬದುಕಿಗೆ ಮೌಖಿಕ ಸಂಪತ್ತು ತನ್ನ ಒಡಲಲ್ಲಿ ಅಪಾರವಾದ ಸಂಸ್ಕೃತಿಯ ಎಳೆಗಳನ್ನು ಸಮಾಜದ ಉನ್ನತಿಗಾಗಿ ಅಡಗಿಸಿಟ್ಟುಕೊಂಡಿದೆ. ಪರಂಪರೆಯ ಗರ್ಭದಿಂದಲೇ ಒಟ್ಟು ಜಗತ್ತಿನ ಅಥವಾ ಪ್ರಾದೇಶಿಕವಾಗಿ ಎಲ್ಲೆಯನ್ನು ಗುರುತಿಸಿಕೊಂಡು ಅಧ್ಯಯನ ಮಾಡುವಾಗ ಕನ್ನಡ

ಸಂಸ್ಕೃತಿಯ ಬೇರುಗಳು ಅನಾವರಣಗೊಳ್ಳುತ್ತವೆನ್ನುವುದು ಸರ್ವಕಾಲಿಕ ಸತ್ಯವಾಗಿದೆ. ನಗರ ಸಂಸ್ಕೃತಿಯೆಂದು ಕರೆಯಿಸಿಕೊಳ್ಳುವಲ್ಲಿಯು ಕೂಡ ಇದರ ಹಿಂದೆ **'ಗ್ರಾಮ ಸಮಾಜ'** ಎಂಬ ಪರಿಕಲ್ಪನೆಯ ಅಗಾಧವಾದ ಸೆಲೆಗಳಿವೆ. ಗ್ರಾಮ ಸಮುದಾಯ ಸಮಾಜದ ಮುಂದುವರೆದ ಜೀವನ ಸಂಸ್ಕೃತಿ ಕಾಲಾಂತರದಲ್ಲಿ ಅನೇಕ ಕಾಲ ಘಟ್ಟಗಳಲ್ಲಿ ಉಂಟಾದ ಮಾನವನ ಬದುಕಿನ ಸ್ಥಿತ್ಯಂತರಗಳು ತಿಳಿಯುತ್ತವೆ. ಈ ಬಗೆಯ ಸ್ಥಿತ್ಯಂತರಗಳು ಇಂದಿನ ಗ್ರಾಮ ಸಮಾಜದ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಕುತೂಹಲದಿಂದ ಅಧ್ಯಯನ ಮಾಡುವಂತೆ ಪ್ರೇರೆಪಿಸುತ್ತವೆ.

ಆಧುನಿಕ ಜಗತ್ತಿನಲ್ಲಿ ವೈಜ್ಞಾನಿಕ, ವೈಚಾರಿಕ ಹಾಗೂ ಜಾಗತೀಕರಣದಂತಹ ವಿಷಯಗಳು ಪ್ರಮುಖವಾಗಿ ಚರ್ಚೆಗೆ ಒಳಪಡುತ್ತವೆ. ಇಂತಹ ಪ್ರಕ್ರಿಯೆಗಳಿಂದ ಚರಿತ್ರೆಯನ್ನು ನಿರೂಪಿಸುವ ಜನ ಜೀವನವನ್ನು ಚಿತ್ರಿಸುವ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಐತಿಹಾಸಿಕ ವಿಚಾರಗಳು ಇಂದು ಕ್ರಮೇಣವಾಗಿ ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿವೆ.

ಈ ವರೆಗೆ ನಡೆದಂತಹ ಸಂಶೋಧನೆಗಳು ತಲಸ್ಪರ್ಶಿ ಅಧ್ಯಯನಗಳಾದರೂ ತಳಮಟ್ಟದ ಚರಿತ್ರೆಯನ್ನು ಬೆಳಕಿಗೆ ತರುವಲ್ಲಿ ವಿಫಲವಾಗಿವೆ ಎನಿಸುತ್ತದೆ. ಅಷ್ಟೊಂದು ವಿಶಾಲವಾಗಿದೆ ಈ ಗ್ರಾಮ ಅಧ್ಯಯನದ ಕ್ಷೇತ್ರ. ಒಂದು ಗ್ರಾಮ, ಸಮಾಜ, ಧರ್ಮ, ದೇವಾಲಯಗಳನ್ನು ಕುರಿತು ಸಮಗ್ರವಾಗಿ ಸಂಶೋಧನೆ ಕೈಗೊಂಡು ಅವುಗಳ ಮಹತ್ವವನ್ನು ತಿಳಿಸಲು ಪ್ರಯತ್ನಿಸಿದರು ಮರೆಯಾದ ಸಂಗತಿಗಳು ಹಾಗೆಯೇ ಸೂಪ್ತವಾಗಿರುವುವು.

ಅಧ್ಯಯನದ ಉದ್ದೇಶ ಮತ್ತು ಸ್ವರೂಪ :–

ಆಧುನಿಕವಾಗಿ ಒಂದು ನಾಡಿನ ಭೌಗೋಳಿಕ ಎಲ್ಲೆಯನ್ನು ಗ್ರಹಿಕೆಯಲ್ಲಿರಿಸಿಕೊಂಡು ಸಂಸ್ಕೃತಿಯ ಅಧ್ಯಯನದಲ್ಲಿ ತೊಡಗುವಾಗ ಇನ್ನಿತರ ಮೂಲಾಧಾರಗಳನ್ನು ಗಮನಿಸಿದಂತೆ ಗ್ರಾಮೀಣ ಪರಿಸರ ಅಥವಾ ಪ್ರತ್ಯೇಕವಾಗಿ ಒಂದೊಂದು ಹಳ್ಳಿಯನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಆಧುನಿಕತೆಯೊಳಗೆ ಸಿಲುಕಿ ಅನೇಕ ಗ್ರಾಮಗಳ ಮೌಲಿಕತೆ ಕ್ಷೀಣಿಸುತ್ತದೆ. ಆದುದರಿಂದ ಒಂದು ಹಳ್ಳಿಯಲ್ಲಿ ದೊರೆಯುವ ಜಾನಪದ ಪರಂಪರೆಯ ಹಾಡು, ಕಥೆ, ಒಗಟು, ಗಾದೆ ಮುಂತಾದ ಸಾಹಿತ್ಯದ ಜೊತೆ–ಜೊತೆಗೆ ಅಲ್ಲಿನ ಗ್ರಾಮ್ಯ ಪರಿಸರ ಸಾಮಾಜಿಕ ಜೀವನ ವಿಧಾನ ವಿಶೇಷವಾಗಿ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಈ ಕಾರಣದಿಂದ ಗ್ರಾಮಗಳ ಅಧ್ಯಯನ ಅಗತ್ಯವಿದೆ.

ಮಾನವನು ಮಾನಸಿಕ ಹಾಗೂ ಬೌದ್ಧಿಕವಾಗಿ ಬೆಳೆದಂತೆ ಅವನಲ್ಲಾಗುವ ಏರು–ಪೇರುಗಳಿಗೆ ಅನೇಕ ಕಾರಣಗಳಿರುತ್ತವೆ. ಏನೇ ಇದ್ದರೂ ಸಮಕಾಲೀನ ಕಾಲಘಟ್ಟದಲ್ಲಿ ಅವನಲ್ಲಾಗುವ ಸಾಮಾಜಿಕ ಮಾರ್ಪಾಟಿನಿಂದ ಸಾಂಸ್ಕೃತಿಕವಾಗಿ ಮತ್ತು ಚಾರಿತ್ರಿಕವಾಗಿ ದಾಖಲೆಗಳು ಖಚಿತವಾಗಿ ಲಭ್ಯವಾಗುತ್ತವೆ. ಈ ನಡುವೆ ಗ್ರಾಮಗಳ ಹಿನ್ನೆಲೆಯಲ್ಲಿ ಜಾನಪದಸಂಸ್ಕೃತಿ, ಸಾಮಾಜಿಕ ಕ್ಷೇತ್ರಗಳ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳ ಮಿತಿಗಳೆಂದರೆ ಮಾಹಿತಿಗಳ ಸಂಗ್ರಹ, ವರ್ಗೀಕರಣ ವಿಶ್ಲೇಷಣೆ ಅಷ್ಟೇ. ಈ ಕೊರತೆಯನ್ನು ತುಂಬುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಒಂದು ಗ್ರಾಮವನ್ನು ಒಂದು ಸಂಸ್ಕೃತಿಯೆಂದು ಭಾವಿಸಬೇಕು. ಅದೊಂದು ಪುಟ್ಟ ಜಗತ್ತೇ ಆಗಿರುತ್ತದೆ. ಆ ಜಗತ್ತಿನಲ್ಲಿ ತನ್ನದೇಯಾದ ಮಿತಿಯಲ್ಲಿ ಸಾಂಸ್ಕೃತಿಕ ಚೌಕಟ್ಟನ್ನು ಒದಗಿಸಿ ಕೊಡುತ್ತದೆ. ಬಹುಮುಖ್ಯವಾಗಿ ಕನ್ನಡ ಸಂಸ್ಕೃತಿಯ ಅಧ್ಯಯನದಲ್ಲಿ ಒಂದು ಗ್ರಾಮದ ಅಧ್ಯಯನ ಮಾಡುವ ಮೂಲಕ ಇಡಿಯಾದ ಸಂಸ್ಕೃತಿಯ ಪ್ರಾತಿನಿಧಿಕ ಅಂಶಗಳನ್ನು ಒಂದು ಭೌಗೋಳಿಕ ಮಿತಿಯ ಪುಟ್ಟ ಜಗತ್ತೆನ್ನಬಹುದಾದ 'ಹಳ್ಳಿ'ಯು ಒದಗಿಸಿಕೊಡುತ್ತದೆ.

ಭಾರತ ಹಳ್ಳಿಗಳ ದೇಶ. ಇವತ್ತಿಗೂ ಕೂಡ ಶೇಕಡ ೭೫ ರಷ್ಟು ಜನ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ ಕೇವಲ ಹಳ್ಳಿಗಳಷ್ಟೇ ಅಲ್ಲ, ಇಂದಿನ ವ್ಯವಸ್ಥೆಯಲ್ಲಿ ಎಲ್ಲಾ ಹಳ್ಳಿಗಳು ಒಂದು ರೀತಿಯ ನಗರಗಳಾಗುವ ಆಸೆಯಲ್ಲಿವೆ. ಮುಂದಿನ ದಿನಗಳಲ್ಲಿ ಸಂಸ್ಕೃತಿ ಕೆಳಗುಂದಿ, ಭೋಗಿಸುವ ಸಿಮೆಂಟ್ ಸಂಸ್ಕೃತಿ ಎಲ್ಲಾ ಕಡೆಗೂ ಆವರಿಸಿಕೊಳ್ಳುತ್ತಿದೆ. ಹಳ್ಳಿಗಳಲ್ಲಿದ್ದ ಕಲೆ, ಕುಶಲಕಲೆಗಳು ಮತ್ತು ಅವುಗಳ ಸ್ವಾವಲಂಬನತ್ವಗಳನ್ನು ಕೈಗಾರಿಕೆಗಳು ನುಂಗಿಹಾಕುತ್ತವೆ. ರಾಜಕಾರಣ ದೆಹಲಿಯಿಂದ ಹಳ್ಳಿಗೆ ಸುಲಭವಾಗಿ ಮುಟ್ಟುತ್ತಿದೆ. ಇವತ್ತಿನ ಆಧುನಿಕ ಸೌಲಭ್ಯಗಳಾದ ಸಿನಿಮಾ, ದೂರದರ್ಶನ, ವೃತ್ತ ಪತ್ರಿಕೆಗಳು ಹಾಗೂ ಗಣಕಯಂತ್ರಗಳು ತಮ್ಮ ಪಾಡಿಗೆ ಇದ್ದಂತಹ ಕಲೆಗಳ ಮೇಲೆ ಪ್ರಭಾವ ಬೀರುತ್ತಿವೆ. ಗಿಡಮೂಲಿಕೆಗಳ ಔಷಧಿ ಮಾಯವಾಗಿ, ಇಂಗ್ಲೀಷ್ ಮೆಡಿಷನ್ ಬಂದಿವೆ. ಹೀಗೆ ಆಗಿರುವ ಮತ್ತು ಆಗುತ್ತಿರುವ ಬದಲಾವಣೆ ಕುರಿತು ಕೊಟ್ಟೂರು ಗ್ರಾಮದ ಮೇಲೆ ಪ್ರಭಾವ ಹೇಗಿದೆ? ಪ್ರಭಾವಗಳಿಂದ ಪರಿವರ್ತನೆಯಾದ ಗ್ರಾಮದ ಒಳಿತು-ಕೆಡುಕುಗಳೇನು? ಮತ್ತು ಇವೆಲ್ಲವುಗಳ ಕಾರಣವಾಗಿ ಒಂದು ಜೀವಂತವಾಗಿದ್ದ ಸಾಂಸ್ಕೃತಿಕ ಕಲೆ ಕ್ರಮೇಣ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಹೀಗೆ ಸಮಕಾಲೀನ ಕಾಲಘಟ್ಟದಲ್ಲಿ ಆಗುತ್ತಿರುವ ಬದಲಾವಣೆಯ ಹಿನ್ನೆಲೆಯಲ್ಲಿ ಕೊಟ್ಟೂರು ಗ್ರಾಮವನ್ನು ಸೂಕ್ಷ್ಮವಾಗಿ ಅವಲೋಕಿಸುವ ಪ್ರಯತ್ನ ನನ್ನದಾಗಿದೆ.

ಪ್ರಸ್ತುತ ಅಧ್ಯಯನವು ಪ್ರಾದೇಶಿಕ, ಸ್ಥಳೀಯ ಅಧ್ಯಯನ ಕುರಿತದ್ದು, ಕೊಟ್ಟೂರು ಪ್ರದೇಶದಲ್ಲಿ ಕಣ್ಮರೆಯಾಗಿರುವ ಜಾನಪದ ಅಂಶಗಳನ್ನು ಗುರುತಿಸುವ ಹಾಗೂ ವಿಶ್ಲೇಷಿಸುವ ಪ್ರಯತ್ನವಿದೆ. ಹೀಗೆ ಈ ಮಹತ್ವದ ಉದ್ದೇಶವನ್ನು ಇಟ್ಟುಕೊಂಡು 'ಕೊಟ್ಟೂರು ಗ್ರಾಮ ಅಧ್ಯಯನ' ಎಂಬ ಶೀರ್ಷಿಕೆಯನ್ನು ಈ ಪ್ರಬಂಧಕ್ಕೆ ನೀಡಲಾಗಿದೆ. ಪ್ರಸ್ತುತ ಅಧ್ಯಯನವನ್ನು ಇಲ್ಲಿಯ ಪಂಚಮಠಗಳ ಶೈವ ಪರಂಪರೆಗೆ ಕೇಂದ್ರಿಕರಿಸಿ ವಿಷಯ ಸಂಗ್ರಹಣೆಯನ್ನು ಕ್ಷೇತ್ರಕಾರ್ಯದಿಂದ ದೊರೆತ ಆಕರಗಳಿಂದ ಇಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ತಿಳಿಸುವ ಗುರಿಯಿದೆ. ಕೊಟ್ಟೂರು ಗ್ರಾಮದ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಸಂಗತಿಗಳನ್ನು ಮಾತ್ರ ಈ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಉಳಿದಂತೆ

ಕೊಟ್ಟೂರು ಸುತ್ತಮುತ್ತಲಿನ ಹಳ್ಳಿಗಳ ಅಧ್ಯಯನವಾಗಲಿ, ಸಂಸ್ಕೃತಿಯನ್ನಾಗಲಿ ಶೋಧಿಸುವ ಪ್ರಯತ್ನ ಮಾಡಿಲ್ಲ, ಏಕೆಂದರೆ ನನ್ನ ವಿಷಯ ವ್ಯಾಪ್ತಿಗೆ ಅನುಗುಣವಾಗಿ ಇವುಗಳನ್ನು ಬಿಟ್ಟಿದ್ದೇನೆ.

ಈ ದೃಷ್ಟಿಯಿಂದಲೇ ಗ್ರಾಮಗಳ ಅಧ್ಯಯನ ಮಹತ್ವದ್ದೆಂದು ಭಾವಿಸಬೇಕು. ಕನ್ನಡ ನಾಡಿನಲ್ಲಿ ಗ್ರಾಮಗಳ ಅಧ್ಯಯನ ಅಷ್ಟಾಗಿ ನಡೆದಿಲ್ಲ. ಆದಕಾರಣ ಇಲ್ಲಿ ಒಂದು ಗ್ರಾಮದ ಜನಪದ ಅಧ್ಯಯನದ ಮೂಲಕ ಅದನ್ನು ನೋಡಿ ಮೌಖಿಕ ಪರಂಪರೆಯ ಶ್ರೇಷ್ಠತೆಯನ್ನು ಸಂಸ್ಕೃತಿಗೆ ಹೀಗೆ ಆಕರವಾಗಿ ಬಳಸಬಹುದೆಂಬ ಒಳನೋಟಗಳಕಡೆಗೆ ಇಲ್ಲಿನ ಅಧ್ಯಯನ ಕೇಂದ್ರಿಕೃತವಾಗಿರುತ್ತದೆ. ಜಾನಪದೀಯ ಶಿಸ್ತಿನ ಮೂಲಕ ಒಂದು ಗ್ರಾಮದ ಸಮಗ್ರ ಅಭ್ಯಾಸದಿಂದ ಪ್ರಾದೇಶಿಕ ಸಂಸ್ಕೃತಿಯ ಚರಿತ್ರೆಯನ್ನು ಅಲ್ಲಿನ ವೈಶಿಷ್ಟ್ಯತೆಯನ್ನು ಹೇಳುವ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ :-

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಪ್ರಸಿದ್ಧ ಹೋಬಳಿ ಕೇಂದ್ರವೂ ಮತ್ತು ಬಳ್ಳಾರಿಯ ಬೆಡಗು ಎಂದೇ ಪ್ರಖ್ಯಾತವಾದ ಮತ್ತು ಶ್ರೀಕ್ಷೇತ್ರವೆಂದೇ ಪ್ರಸಿದ್ಧಿಯಾದ 'ಕೊಟ್ಟೂರು' ಬಹುಪುರಾತನ ಐತಿಹ್ಯವನ್ನು ಒಳಗೊಂಡಿದೆ. ಇಲ್ಲಿ ಕಂಡುಬರುವ ಪಂಚಮಠಗಳು, ಗುರುಬಸವನ ರಥೋತ್ಸವ, ಕಾರ್ತಿಕೋತ್ಸವ ಹಾಗೂ ದೊಡ್ಡದಾದ ಕೆರೆ, ಭವ್ಯ ಸ್ವರೂಪದ್ದಾಗಿದ್ದು ಇದುವರೆಗೂ ಇವುಗಳ ಚರಿತ್ರೆಯನ್ನು ಕೆಲಪತ್ರಿಕೆಗಳು ಸಂಕ್ಷಿಪ್ತವಾಗಿ ತಿಳಿಸಿದ್ದುಂಟು, ಆದರೆ ಸುದೀರ್ಘ ಸ್ವರೂಪದಲ್ಲಿ ಇದರ ಬೆಳವಣಿಗೆ ಕಾರ್ಯಆಗಿರಲಿಲ್ಲ. ಹೀಗಾಗಿ ಕೊಟ್ಟೂರಿನ ಚರಿತ್ರೆಯನ್ನು ಐತಿಹ್ಯ, ಪುರಾಣ, ಕಥೆ ಹಾಗೂ ಶಾಸನಗಳ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಈ ಸಂಪ್ರಬಂಧದಲ್ಲಿ ಮಾಡಲಾಗಿದೆ. ಪ್ರಸ್ತುತ ಸಂಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ.

ಈ ಸಂಪ್ರಬಂಧದ ಮೊದಲನೆ ಅಧ್ಯಾಯನದಲ್ಲಿ ಗ್ರಾಮ ಅಧ್ಯಾಯನದ ಉದ್ದೇಶ ಮತ್ತು ಸ್ವರೂಪವನ್ನು ಕುರಿತು ಹೆಚ್ಚು ವಿಷಯವನ್ನು ಕೊಡಲಾಗಿದೆ. ಈ ಅಧ್ಯಾಯನದಲ್ಲಿ ಗ್ರಾಮಗಳ ಅವನತಿ ಹಾಗೂ ನಗರಗಳ ಪ್ರಭಾವ ಎಂಬ ವಿಷಯದ ಮೇಲೆ ದೀರ್ಘ ಚರ್ಚೆ ಮಾಡಲಾಗಿದೆ.

ಅಧ್ಯಾಯ ಎರಡರಲ್ಲಿ ಕೊಟ್ಟೂರಿನ ಭೌಗೋಳಿಕ ಎಲ್ಲೆ ಹಾಗೂ ಕೊಟ್ಟೂರು ಪದದ ಪರಿಕಲ್ಪನೆಯನ್ನು ಐತಿಹ್ಯ, ಪುರಾಣ ಹಾಗೂ ಶಾಸನಗಳ ಆಧಾರಗಳ ಹಿನ್ನೆಲೆಯಲ್ಲಿ ಸುದೀರ್ಘವಾಗಿ ಪದನಿಷ್ಪತ್ತಿಯ ಬಗ್ಗೆ ತಿಳಿಸಲಾಗಿದೆ. ಕೊಟ್ಟೂರಿನ ಪಂಚಮಠಗಳ ಬೆಳವಣಿಗೆಯಲ್ಲಿ ಕೊಟ್ಟೂರು ಎಂಬ ಪದದ ಪರದೆಯನ್ನು ಗುರುತಿಸಲಾಗಿದೆ. ಹಾಗೂ ಕೊಟ್ಟೂರು ಎಂಬ ಹೆಸರು ಹೇಗೆ ಬಂತು ಎಂಬುದರ ಬಗ್ಗೆ ಇರುವ ಎಲ್ಲಾ ಮೂಲಾಧಾರಗಳನ್ನು ಈ ಅಧ್ಯಾಯನದಲ್ಲಿ ನಿರೂಪಿಸಲಾಗಿದೆ. ಅಲ್ಲದೆ ಈ ಪುರದಲ್ಲಿ ಬರುವ ಪ್ರಾಗೈತಿಹಾಸಿಕ ನೆಲೆಗಳ ಪರಿಚಯ ಮತ್ತು ಕುರುಹುಗಳನ್ನು ಗುರುತಿಸಿ, ತದಾನಂತರದಲ್ಲಿ ಈ ಪ್ರದೇಶವು ಬ್ರಿಟೀಷರ ಕಾಲದಲ್ಲಿ ವ್ಯಾಪಾರಕೇಂದ್ರವಾದ ಬಗೆ ಹಾಗೂ ಆಧುನಿಕತೆಯ ಪ್ರಭಾವವನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಕೊಟ್ಟೂರಿನ ಜನಪದರ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಂಶಗಳ ಜೊತೆಗೆ ಅಲ್ಲಿನ ಜನರ ಬದುಕು ಹೇಗೆ ಕೆಲ ಹಂತಗಳಲ್ಲಿ ರಚನೆಗೊಂಡಿದೆ ಎಂಬುದರ ಬಗ್ಗೆ ತಿಳಿಸಲಾಗುತ್ತದೆ. ಹಾಗೆಯೇ ಈ ವಿವಿಧ ಘಟ್ಟಗಳಲ್ಲಿ ಅಲ್ಲಿನ ಜನಪದರು ತಮ್ಮ ಆಸೆ-ಆಕಾಂಕ್ಷಿಗಳನ್ನು ಸಂಪ್ರದಾಯಗಳನ್ನು, ಆಚರಣೆಗಳನ್ನು ಹಾಗೂ ನಂಬಿಕೆಗಳನ್ನು ಹೇಗೆ ಬೆಳಸಿಕೊಂಡು ಬಂದಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆ ನೀಡಲಾಗುತ್ತದೆ.

ಸಂಪ್ರಬಂಧದ ಪ್ರಮುಖ ಅಧ್ಯಾಯನಗಳಾದ ನಾಲ್ಕು ಮತ್ತು ಐದನೇ ಅಧ್ಯಾಯನಗಳಲ್ಲಿ ಕೊಟ್ಟೂರಿನ ಪಂಚಮಠಗಳ ಸ್ಥಾಪನೆ, ಸ್ಥಾಪನೆಗೆ ಹಿನ್ನೆಲೆ, ಹಿನ್ನೆಲೆಗೆ ಕಾರಣ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಪೂರ್ಣವಾಗಿ ತಿಳಿಸಲಾಗಿದೆ, ಅಲ್ಲದೆ ಆ ಮಠಗಳ ಆಚರಣೆ, ಪ್ರಜಾವಿಧಾನ ಹಾಗೂ ಪ್ರಮುಖ ಹಬ್ಬಗಳಲ್ಲಿನ ಆಚರಣೆಗಳ

ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಹಾಗೆಯೇ ಶ್ರೀಕೊಟ್ಟೂರೇಶ್ವರನ ರಥೋತ್ಸವ ಹಾಗೂ ಕಾರ್ತಿಕೋತ್ಸವಗಳ ವೈಭವ, ಕಾರಣ, ಹಿನ್ನೆಲೆಯನ್ನು ಕುರಿತು ಸ್ಪಷ್ಟ ಮಾಹಿತಿಯನ್ನು ನೀಡಲಾಗುತ್ತದೆ.

ಕೊನೆಯ ಆರು ಮತ್ತು ಏಳನೇ ಅಧ್ಯಾಯಗಳಲ್ಲಿ ನಗರೀಕರಣ ಪ್ರಭಾವದಿಂದ ಕೊಟ್ಟೂರು ಹೇಗೆ ಬದಲಾಗಿದೆ, ಅದಕ್ಕೆ ಕಾರಣ, ಪ್ರಭಾವಗಳನ್ನು ಎಳೆ-ಎಳೆಯಾಗಿ ಸಂಶೋಧನೆ ಮಾಡಲಾಗಿದೆ. ಇಂದಿನ ದಿನಗಳಲ್ಲಿ 'ಕೊಟ್ಟೂರು' ಹೇಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆ ನೀಡಲಾಗಿದೆ. ಒಟ್ಟಾರೆಯಾಗಿ ಕೊಟ್ಟೂರಿನ ಅಧ್ಯಯನಕ್ಕೆ ಮರೆಯಾದ ಇನ್ನೂ ಅನೇಕ ಅಥವಾ ಪೂರಕವಾದ ಆಕರ ಅಂಶಗಳು ಇಲ್ಲಿ ಗಣನೀಯವಾದ ಅಂಶವನ್ನು ಪ್ರತಿಬಿಂಬಿಸುತ್ತಾ ಮುಂದೆ-ಮುಂದೆ ಸಾಗುತ್ತವೆ.



ಅಧ್ಯಾಯ : ಎರಡು

ಕೊಟ್ಟೂರಿನ ಭೌಗೋಳಿಕ ಮತ್ತು ಐತಿಹಾಸಿಕ ಸಂಕ್ಷಿಪ್ತತೆ.

೨:೧. ಭೌಗೋಳಿಕ ಪರಿಸರ :

ಧರ್ಮದ ರಕ್ಷಣೆಗಾಗಿ, ಲೋಕ ಕಲ್ಯಾಣಕ್ಕಾಗಿ, ಪುರಾತನ ಆಚಾರ್ಯರು, ಶರಣರು, ಸಂತರು ಇತ್ಯಾದಿ ಯೋಗಿಗಳು, ಭಾರತದ ನಾನಾ ಭಾಗಗಳಲ್ಲಿ ಪಾದಯಾತ್ರೆ ಮಾಡಿ, ವೀರಶೈವ ಸಂಸ್ಕೃತಿಯನ್ನು ನೆಲೆಗೊಳಿಸಿ ಐಕ್ಯವಾದ ಮಹತ್ವದ ಸ್ಥಳಗಳೇ ಇಂದು ನಮಗೆ ದೇವಾಲಯಗಳಾಗಿ, ಶರಣರ ಗದ್ದುಗೆ ಮಠಗಳಾಗಿ, ಪವಿತ್ರ ಪುಣ್ಯ ಕ್ಷೇತ್ರಗಳಾಗಿ ಕಂಗೊಳಿಸುತ್ತಿವೆ. ಇಂತಹ ಪುಣ್ಯ ಕ್ಷೇತ್ರವು

ಜಾತಿ ಹೀನನ ಮನೆಯ। ಜ್ಯೋತಿ
ತಾಹೀನವೇ। ಜಾತಿ ವಿಜಾತಿ ಎನಬೇಡ
ದೇವನೊಲಿದಾತನೇ। ಜಾತ। ಸರ್ವಜ್ಞ

ಎಂಬ ಕನ್ನಡ ನಾಡಿನ ಕವಿಯ ಜೀತೇಂದ್ರೀಯ ಚೈತನ್ಯವನ್ನು ಇಂದಿಗೂ ಭಕ್ತರ ಹೃದಯದಲ್ಲಿ ತುಂಬುತ್ತಾ ವಿವೇಕಯುಕ್ತ ವೈಚಾರಿಕತೆಯ ಆಚರಣೆಗಳುಳ್ಳ ಕ್ಷೇತ್ರವೇ ಕೊಟ್ಟೂರು. ಶ್ರೀ ಗುರು ಕೊಟ್ಟೂರೇಶ್ವರರ ಪುಣ್ಯಕ್ಷೇತ್ರ.

ಈ ಪುಣ್ಯಕ್ಷೇತ್ರ ಕೊಟ್ಟೂರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಪಶ್ಚಿಮ ದಿಕ್ಕಿಗೆ ಬರುತ್ತದೆ. ಇದು ಕೂಡ್ಲಿಗಿ ತಾಲೂಕಿನ ಪ್ರಸಿದ್ಧ ಹೋಬಳಿ ಕೇಂದ್ರವು ಹೌದು. ಈ ಹೋಬಳಿಗೆ ಸುಮಾರು ೪೨ ಹಳ್ಳಿಗಳು ಸೇರ್ಪಡೆಯಾಗುತ್ತವೆ. ಇದು ಪ್ರಮುಖ ಶೈಕ್ಷಣಿಕ, ಐತಿಹಾಸಿಕ, ಧಾರ್ಮಿಕ ಹಾಗೂ ವಾಣಿಜ್ಯ ಕೇಂದ್ರವಾಗಿದೆ. ೨೦೦೧ನೇ ಜನಗಣತಿಯ ಪ್ರಕಾರ ೨೨.೬೮೬ ಜನಸಂಖ್ಯೆ ಇದ್ದು, ೧೧.೮೧೧ ಗಂಡು, ೧೦.೮೭೫ ಹೆಣ್ಣುಗಳ ಸಂಖ್ಯೆ ಇದೆ. ಕೊಟ್ಟೂರು ತಾಲೂಕಿನ ಅತೀದೊಡ್ಡ ಪಟ್ಟಣವು ಹೌದು. ಇದು ಬಳ್ಳಾರಿಯ ನೈಋತ್ಯ ಭಾಗದಲ್ಲಿದ್ದು, ಸಮುದ್ರ ಮಟ್ಟದಿಂದ ೫೨೪ ಮೀಟರ್‌ಗಳ ಎತ್ತರದಲ್ಲಿದೆ.

ಸಾಮಾನ್ಯವಾಗಿ ಸಮತಟ್ಟಾದ ಭೂಮಿಯನ್ನು ಹೊಂದಿದ್ದು ಕೃಷಿಗೆ ಯೋಗ್ಯವಾದ ಕೆಂಪು ಮಸಾರಿ ಹಾಗೂ ಕಪ್ಪು ಮಣ್ಣಿನಿಂದ ಕೂಡಿದೆ. ಊರಿನ ಪೂರ್ವಕ್ಕೆ ಜಾಜಿಕಲ್ಲು

ಗುಡ್ಡದ ಸಾಲು ಇದ್ದು ಮಧ್ಯಭಾಗದಲ್ಲಿ 'ಚಿರಬಿ' ಕಾದಿಟ್ಟ ಅರಣ್ಯ ಉತ್ತರದಿಂದ ದಕ್ಷಿಣಕ್ಕೆ ಹಬ್ಬಿದೆ. ದಕ್ಷಿಣದಲ್ಲಿ ಸುಮಾರು ೫೦ ವರ್ಷಗಳ ಇತಿಹಾಸವಿರುವ ದೊಡ್ಡಕೆರೆ ಇದೆ. ಇದು ಕೊಟ್ಟೂರು ಕೆರೆ ಎಂದೇ ಪ್ರಸಿದ್ದವಾಗಿದೆ. ಪಶ್ಚಿಮದಲ್ಲಿ ಚಿನ್ನೋಬನಹಳ್ಳಿ ತೊರೆ ಹಾಗೂ ದೊಡ್ಡ ಹಗರಿಗಳಿದ್ದು, ಮಧ್ಯಭಾಗದಲ್ಲಿ ಹರಿಯುವ ಚಿಕ್ಕ ಹಗರಿ ಮತ್ತು ನೂರಾರು ಕೊಳವೆಬಾವಿಗಳಿವೆ. ಉತ್ತರಕ್ಕೆ ಸುಮಾರು ೩೫ ಕಿ.ಮೀ ದೂರದಲ್ಲಿ ತುಂಗಾಭದ್ರ ನದಿ ಇದೆ. ಈ ನದಿಯಿಂದ ಈಗ ಕುಡಿಯುವ ನೀರಿನ ವ್ಯವಸ್ಥೆ ಆಗಿದೆ. ಈ ಪ್ರದೇಶವು ಅತೀ ಕಡಿಮೆ ಮಳೆ ಮತ್ತು ಒಣ ಹವೆಯಿಂದ ಕೂಡಿದ್ದು ದಿನದ ಗರಿಷ್ಟ ಉಷ್ಣಾಂಶ ೪೩ ಡಿಗ್ರಿ ಸೆಂಟಿಗ್ರೇಡ್‌ಗಳ ವರೆಗೂ ಹೋಗುವುದುಂಟು.

ಕೂಡ್ಲಿಗಿ–ಹರಿಹರ, ರಾಜ್ಯ ಹೆದ್ದಾರಿಯ ಮೇಲಿರುವ ಕೊಟ್ಟೂರಿಗೆ ದೇಶದೆಲ್ಲೆಡೆಗೆ ಸಂಚರಿಸಬಹುದಾದ ಸಂಚಾರಿಯೋಗ್ಯ ಸರ್ವಋತು ರಸ್ತೆಗಳಿವೆ. ಇಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವಿದೆ. ಕೊಟ್ಟೂರಿನಿಂದ ಹೊಸಪೇಟೆವರೆಗೆ ಬ್ರಾಡ್‌ಗೇಜ್ ರೈಲು ಮಾರ್ಗವಿದ್ದು, ಈ ರೈಲುಮಾರ್ಗವನ್ನು ಹರಿಹರದವರೆಗೆ ವಿಸ್ತರಿಸಲಾಗಿದೆ. ಇದರಿಂದ ಇಡೀ ರಾಷ್ಟ್ರದ ರೈಲುಜಾಲದೊಂದಿಗೆ ಸಂಪರ್ಕಿಸಲು ಸಾಧ್ಯವಿದೆ. ಆದುದರಿಂದಾಗಿ ಇಲ್ಲಿಯ ಭಾಗದ ವ್ಯಾಪಾರೋಧ್ಯಮಗಳು ಹೆಚ್ಚುವ ಸಾಧ್ಯತೆಗಳಿವೆ.

ಬಳ್ಳಾರಿ ಜಿಲ್ಲೆಯ ಕೆಲವೇ ಕೈಗಾರಿಕಾ ಪಟ್ಟಣಗಳಲ್ಲಿ ಕೊಟ್ಟೂರು ಮಹತ್ವದ ಸ್ಥಾನವನ್ನು ಹೊಂದಿದೆ. ಶೇಂಗಾ, ನೆಲಗಡಲೆ, ಹತ್ತಿ ಅರಳೆಗಳ ವ್ಯಾಪಾರ ವಹಿವಾಟು ಹಾಗೂ ನೂಲಿನ ಉದ್ದಿಮೆಯಲ್ಲಿ ಜಿಲ್ಲೆಯಲ್ಲಿಯೇ ದ್ವಿತೀಯ ಸ್ಥಾನದಲ್ಲಿದೆ. ಇಲ್ಲಿ ಒಂದು ನೂಲು ತೆಗೆಯುವ ಮತ್ತು ಎರಡು ಪ್ರಸ್ಸಿಂಗ್ ಮತ್ತು ಒಂಬತ್ತು ಜಿನ್ನಿಂಗ್ ಮಿಲ್ಲುಗಳಿದ್ದು ಹಾಗೂ ಶೇಂಗಾಎಣ್ಣೆ ಮತ್ತು ಹಿಂಡಿ ತೆಗೆಯುವ ಕಾರ್ಖಾನೆಗಳಿವೆ. ಎಣ್ಣೆ ಬೀಜಗಳು ಹಾಗೂ ಖಾದ್ಯ ತೈಲಗಳ ಉತ್ಪಾದನೆಯಲ್ಲಿ ಕೊಟ್ಟೂರು ಜಿಲ್ಲೆಯಲ್ಲಿಯೇ ತೃತೀಯ ಸ್ಥಾನದಲ್ಲಿದೆ. ಪ್ರಸ್ತುತ ಖಾದ್ಯಾ ತೈಲಗಳು ಮೂರು ಘಟಕಗಳಿದ್ದು ಈ ಉದ್ದಿಮೆಯ ಬೆಳವಣಿಗೆಗೆ ಅಪಾರ ಅವಕಾಶವಿದೆ. ಹಲವು ಶತಮಾನಗಳಿಂದಲೂ ಕೊಟ್ಟೂರು ಕೈಮಗ್ಗ ಉದ್ದೀಮೆಗೆ ಪ್ರಸಿದ್ಧವಾಗಿದೆ.

ಈ ಭಾಗದ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಇಲ್ಲಿ ವೃತ್ತ, ಅರಕ್ಷಕ ನಿರೀಕ್ಷಕರು ಹಾಗೂ ಉಪ ಅರಕ್ಷಕ ನಿರೀಕ್ಷಕರ ಕಛೇರಿಗಳು ಕಾರ್ಯ ನಿರ್ವಹಿಸುತ್ತವೆ.

ಅರಕ್ಷಕ ಠಾಣೆ ಕೋಷ್ಟಕ

ಸ್ಥಾಪನೆ : ೧೯೧೧ ಕ್ರಿ.ಶ

ವಿಸ್ತೀರ್ಣ : ೩೨೦ ಚ.ಕಿ.ಮೀ

ಒಟ್ಟು ಹಳ್ಳಿಗಳು : ೪೯

ಉಪಠಾಣೆ : ಉಜ್ಜಿನಿ

ಠಾಣೆಗೆ : ೨೭ ಹಳ್ಳಿಗಳು

ಉಪಠಾಣೆಗೆ : ೨೨ ಹಳ್ಳಿಗಳು

ಜನಸಂಖ್ಯೆ : ಒಂದು ಲಕ್ಷ (೨೦೦೧ನೇ ಜನಗಣತಿ ಪ್ರಕಾರ)

ಒಟ್ಟು ಮಂಜೂರಾದ ಸಿಬ್ಬಂಧಿ : ೨ ಪಿ.ಎಸ್.ಐ.
೨ ಎ.ಎಸ್.ಐ
೧೧ ಹೆಡ್ ಕಾನ್ಸೆಟೆಬಲ್
೨೭ ಪೊಲೀಸ್
೦೨ ಮಹಿಳಾ ಹೆಡ್ ಕಾನ್ಸೆಟೆಬಲ್
೦೬ ಮಹಿಳಾ ಪೊಲೀಸ್

ಹಾಲಿ ಇರುವ ಸಿಬ್ಬಂದಿ : ೦೨ ಪಿ.ಎಸ್.ಐ.
೦೨ ಎ.ಎಸ್.ಐ
೧೧ ಹೆಡ್ ಕಾನ್ಸೆಟೆಬಲ್
೧೯ ಪೊಲೀಸ್
೦೧ ಮಹಿಳಾ ಹೆಡ್ ಕಾನ್ಸೆಟೆಬಲ್
೦೪ ಮಹಿಳಾ ಪೊಲೀಸ್

ಹಾಲಿ ಇರುವ ಪಿ.ಎಸ್.ಐ. : **ಗಿರೀಶ್.ಬಿ.ವಿ.** (ಕಾನೂನು ಮತ್ತು ಸುವ್ಯವಸ್ಥೆ)
: **ಸೋಮಶೇಖರ್.ಜಿ.,ಪಿ.ಎಸ್.ಐ.** (ಅಪರಾಧ ವಿಭಾಗ)

ಒಟ್ಟಾರೆಯಾಗಿ ೨೦೦೧ನೇ ಜನಗಣತಿ ಪ್ರಕಾರ ಕೊಟ್ಟೂರಿನ ವ್ಯಾಪ್ತಿ ೩೫೨೫.೯೦ ಹೆಕ್ಟೇರ್‌ಗಳೆಂದು, ೨೨೬೮೬ ಜನಸಂಖ್ಯೆ ಎಂದೂ, ೬೦೧೯ ಮನೆಗಳೆಂದು, ೩೩೦೮ ನಿವೇಶನಗಳೆಂದು ಹಾಗೂ ೩೦ ವಾರ್ಡ್‌ಗಳಲ್ಲಿ ಹಂಚಿಕೆ ಮಾಡಲಾಗಿದೆ. ಅಲ್ಲದೆ ೪೨ ಕೊಳವೆಬಾವಿಗಳು ಸಹ ಕೊಟ್ಟೂರಿನ ಜನತೆಗಾಗಿಯೇ ಬಳಕೆಯಾಗುತ್ತವೆ. ೨೫-೧೧-೧೯೯೫ ರಂದು ಪುರಸಭೆ ಸ್ಥಾಪನೆಯಾಗಿದೆ. ಇದರ ಹಾಲಿ ಅಧ್ಯಕ್ಷರು ಕಾಮಶೆಟ್ಟಿ ಕೊಟ್ರೇಶ್ ಹಾಗೂ ೧೯ ಸದಸ್ಯರನ್ನು ಒಳಗೊಂಡು ಒಬ್ಬ ಮುಖ್ಯಾಧಿಕಾರಿಯಾದ ಬಿ.ಎಂ.ಎಸ್.ವೀರಯ್ಯ ಅವರು ಸಹ ಕಾರ್ಯನಿರ್ವಹಿಸುತ್ತಿದ್ದಾರೆ.

ಕೊಟ್ಟೂರಿನಲ್ಲಿ ಸಮುದಾಯ ಆರೋಗ್ಯ ಕೇಂದ್ರ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಕಾರ್ಪೋರೇಶನ್ ಬ್ಯಾಂಕ್, ತಾಲೂಕು ಅಭಿವೃದ್ಧಿ ಬ್ಯಾಂಕ್, ತಾಲೂಕು ಕೈಗಾರಿಕ ಸಹಕಾರ ಸಂಘ, ಕರ್ನಾಟಕ ಉಗ್ರಾಣ ನಿಗಮದ ಕಛೇರಿಗಳು, ಪ್ರಗತಿ ಗ್ರಾಮೀಣ ಬ್ಯಾಂಕ್ ಹಾಗೂ ಮೈಸೂರು ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತವೆ.

ಒಟ್ಟಾರೆಯಾಗಿ ಕೊಟ್ಟೂರು ಭೌಗೋಳಿಕ ಪರಿಸರವು ಕೇವಲ ನೈಸರ್ಗಿಕ ಸ್ಥಿತಿಗತಿಗೆ ಸೀಮಿತವಾಗಿರದೆ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ, ಆಡಳಿತ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗನುಗುಣವಾಗಿ ರಚಿಸಲ್ಪಟ್ಟಿದೆ ಎಂದು ಹೇಳಬಹುದು.

೨:೨. ಐತಿಹ್ಯ ಪುರಾಣ ಮೂಲ :

ಕೊಟ್ಟೂರು ಇಲ್ಲವೆ ಕೊಟೂರು ಎಂಬ ಹೆಸರಿನ ಊರುಗಳು ದಕ್ಷಿಣ ಭಾರತದಲ್ಲಿ ಬಹಳಷ್ಟಿವೆ. ಆದರೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿಗೆ ಸೇರಿದ ಕೊಟ್ಟೂರು ಒಂದು ಪ್ರಾಚೀನ ಪಟ್ಟಣವಾಗಿದ್ದು, ಜಾಗೃತ ಸ್ಥಳವಾಗಿ ಶಿವಭಕ್ತರ ಮನಸ್ಸನ್ನು ಆಕರ್ಷಿಸುವಂತಾಗಿದೆ. ಈ ನಾಡಿನ ಜನರಿಗೆ ಕೊಟ್ಟೂರು ಎಂದಾಕ್ಷಣ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ನೆನಪಿಗೆ ಬರುವುದು ಸಮಾನ್ಯ. ಈ ಕೊಟ್ಟೂರು ಸ್ಥಳನಾಮ ವಿಚಾರವನ್ನು ಕುರಿತು ಯೋಚಿಸುವುದಾದರೆ ಇಲ್ಲಿನ ಜನರ ವಾಡಿಕೆಯಂತೆ ಪ್ರಾಚೀನ ಕಾಲದಿಂದಲೂ ಇಲ್ಲಿ ದಾನ, ಧರ್ಮ ಹೆಚ್ಚಾಗಿತ್ತು ಎಂತಲೂ, ಕೊಡುವ ದಾನಿಗಳ ಊರು -> ಕೊಟ್ಟಊರು -> ಕೊಟ್ಟೂರು ಎನ್ನುವ ಪ್ರತೀತಿ ಇದೆ.

ಶ್ರೀ ಗುರುಕೊಟ್ಟೂರೇಶ್ವರ ಸ್ವಾಮಿ ದಾನಿಗಳಿಗೆ ನೀಡಿದ ವರಗಳು ಕೊಟ್ಟವರಗಳು>ಕೊಟ್ಟೂರು ಎಂದಾಯಿತು ಎಂಬ ಮತ್ತೊಂದು ಪ್ರತೀತಿ ಇದೆ.

ಕ್ರಿ.ಶ. ೧೯೩೮ರ ಬಸವಲಿಂಗ ಕವಿಯ ವಿರಚಿತ 'ಶ್ರೀ ಕೊಟ್ಟೂರುಬಸವೇಶ್ವರ ಚಾರಿತ್ರ್ಯ' ಎಂಬ ಪುರಾಣ ಗ್ರಂಥದಲ್ಲಿ 'ಶಿಖಾಪುರ' ಎಂಬ ಹೆಸರಿನಿಂದ ಕರೆಯುತ್ತಾರೆ. ಆತನು ಹೀಗೆ ಕರೆಯಲು ಕಾರಣವೇನೆಂಬುದಕ್ಕೆ ಸರಿಯಾದ ಆಧಾರಗಳು ಸಿಕ್ಕಿಲ್ಲ. ಭೌಗೋಳಿಕವಾಗಿ ಪುರಾಣದ ಈ ಹೆಸರಿಗೆ ಹೊಂದಾಣಿಕೆ ಇಲ್ಲ.

ಐತಿಹಾಸಿಕವಾಗಿ ಅವಲೋಕಿಸಿದರೆ ಕೊಟ್ಟೂರು ನೊಳಂಬವಾಡಿಯ ಮಧ್ಯದಲ್ಲಿರುವ ಒಂದು ಸಾಂಸ್ಕೃತಿಕ ಪಟ್ಟಣ. ಈಗಿನ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಹರಿಹರ ಮತ್ತು ಅನಂತಪುರ ಭಾಗಗಳನ್ನು ಸೇರಿಸಿ ನೊಳಂಬವಾಡಿ ಎಂದು ಕರೆಯಲಾಗುತ್ತಿತ್ತು. ಇದರ ರಾಜಧಾನಿ ಉಚ್ಚಂಗಿದುರ್ಗ. ಈ ಭಾಗದಲ್ಲಿ ಹೆಚ್ಚಾಗಿ ಜೈನರಾಜರೇ ಆಳಿದ್ದಾರೆ. ಪ್ರಾರಂಭದಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿಯ ಚಾಲುಕ್ಯರ ಕಾಲದಲ್ಲಿಯೂ ಇಲ್ಲಿ ಜೈನಧರ್ಮವಿತ್ತು. ರಾಷ್ಟ್ರಕೂಟ ಮತ್ತು ಹೊಯ್ಸಳರ ಕಾಲದಲ್ಲಿಯೂ ಈ ಭಾಗದಲ್ಲಿ ಜೈನಧರ್ಮ ಪ್ರಧಾನವಾಗಿತ್ತು. ಈ ಭಾಗದ ಪ್ರಾಚೀನ ಪಟ್ಟಣಗಳಾದ ಕೋಗಳಿ, ಹಡಗಲಿ, ಮಸಲವಾಡ, ಉಜ್ಜನಿ, ಕೊಟ್ಟೂರು, ಬಾಗಳಿ ಮುಂತಾದವು ಜೈನಧರ್ಮದ ಕೇಂದ್ರಗಳಾಗಿದ್ದವು. ಬಹುತೇಕ ಕೇಂದ್ರಗಳಲ್ಲಿ ಜೈನ ಯಕ್ಷಣಿಯರನ್ನು ಗ್ರಾಮದೇವತೆ ಎಂದು ಆರಾಧಿಸುತ್ತಿದ್ದರು. ಜೈನ ಯಕ್ಷಿಣಿಯಲ್ಲಿ 'ಕೊಟ್ಟವ್ವೆ' ಒಬ್ಬ ಯಕ್ಷಣಿ. ಈ ಯಕ್ಷಣಿ ಆ ಕಾಲದಲ್ಲಿ ಕೊಟ್ಟೂರಿನ ಗ್ರಾಮದೇವತೆ. ಜೈನಯಕ್ಷಿಣಿ ಕೊಟ್ಟವ್ವೆ>ಕೊಟ್ರವ್ವೆ>ಕೊಟ್ರಮ್ಮ>ಕೊಟ್ಟೂರು ಎಂದಾಗಿದೆ. ಈ ಪದ ನಿಷ್ಪತ್ತಿಗೆ **ಶಿವರಾಮ ಕಾರಂತರು** ತಮ್ಮ ಕೃತಿಗಳಲ್ಲಿ ಹೀಗೆ ಹೇಳುತ್ತಾರೆ **"ಅನೇಕ ಹಳ್ಳಿಗಳಲ್ಲಿ ಅಲ್ಲದೇ ಮಲೆನಾಡಿನ ಗ್ರಾಮಗಳಲ್ಲಿ 'ಕೊಟ್ಟವ್ವೆ' ಎಂಬ ಗ್ರಾಮದೇವತೆ ಈಗಲೂ ಇವೆ"** ಎಂಬ ಹೇಳಿಕೆ ಪುಷ್ಟಿಕೊಡುತ್ತದೆ.

ಈಗಲೂ ಸಹ ಕೊಟ್ರಮ್ಮನ ಗುಡಿಯೆಂದೂ, ರೇಣುಕೆಯ ಗುಡಿಯೆಂದೂ, ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಈ ದೇವಸ್ಥಾನದ ಸುತ್ತ ಗ್ರಾಮವಿತ್ತು, ಈ ಗ್ರಾಮ ಯಾವುದೋ ಮಾರಕ ರೋಗಕ್ಕೆ ತುತ್ತಾಗಿ ಜನರು ಸ್ಥಳಾಂತರ ಹೊಂದಿ ಕೊಟ್ರವ್ವೆಯ

ಗುಡಿಯಿಂದ ಪಶ್ಚಿಮಕ್ಕೆ ಸ್ವಲ್ಪದೂರದಲ್ಲಿ ಹೊಸ ಊರನ್ನು ಕಟ್ಟಿ ಅದಕ್ಕೆ ಗ್ರಾಮದೇವತೆಯ ಹೆಸರನ್ನು ಇಟ್ಟಿರಬೇಕು ಅದೇ ಈಗಿನ ಕೊಟ್ಟೂರು ಎಂದು ಗುರುತಿಸಲು ಕೋಟೆಯ ಭಾಗವೆಂದು ಗುರುತಿಸಬಹುದಾಗಿದೆ.

ಕೊಟ್ಟೂರು ಸ್ಥಳನಾಮದ ವಿಚಾರವಾಗಿ ಇನ್ನೊಂದು ರೀತಿಯ ವಿವೇಚನೆಯೂ ಇದೆ. ಎಷ್ಟೋ ಸ್ಥಳನಾಮಗಳು ಸ್ವಭಾಷೆ ಇಲ್ಲವೇ ಪರಭಾಷೆಗಳಿಂದ ನಿಷ್ಪತ್ತಿಯಾಗಿರುವುದನ್ನು ಕಾಣುತ್ತೇವೆ. ಹಾಗೆಯೇ ಕೊಟ್ಟೂರು ತೆಲುಗು ಭಾಷೆಯ ಪ್ರಭಾವದಿಂದ ನಿಷ್ಪತ್ತಿಯಾಗಿರಬೇಕು ಎಂಬುದು ಒಂದು ವಿವೇಚನೆ. ಕೊಟ್ಟೂರಿನ ಹೆಸರು ಅದು ನಿರ್ಮಿತವಾದ ಕಾಲದಿಂದಲೂ ಕೊಟ್ಟೂರು ಎಂದೇ ಪ್ರಚಲಿತವಾಗಿದೆ ಎಂದು ಅನೇಕ ಶಾಸನಗಳಿಂದ ವಿದಿತವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳು ತೆಲುಗು ಮಾಧ್ಯಮವಾಗಿದ್ದುವು ಎಂದು ಶ್ರೀ **ಬೀಚೀ** ಯವರು ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ. ಈಗಲೂ ಬಳ್ಳಾರಿ, ಶಿರಗುಪ್ಪ, ಸಂಡೂರು, ಹೊಸಪೇಟೆ, ಕೂಡ್ಲಿಗಿ ತಾಲೂಕುಗಳಲ್ಲಿ ತೆಲುಗು ವ್ಯಾಮೋಹಿಗಳು ಕಂಡು ಬರುತ್ತಾರೆ. ಹೀಗಿದ್ದಾಗ ಬಳ್ಳಾರಿ ಜಿಲ್ಲೆಯ ಎಷ್ಟೋ ಊರುಗಳ ಹೆಸರುಗಳು ತೆಲುಗು ಪದವನ್ನು ಧರಿಸಿಕೊಂಡು ಬಂದಿರುವುದರಲ್ಲಿ ಸಂಶಯವೇ ಇಲ್ಲ.

ಪ್ರಸ್ತುತವಾಗಿ **'ಕೊಟ್ಟೂರು'** ಎಂಬ ಹೆಸರು ತೆಲುಗು ಪದವನ್ನು ಗುರುತಿಸಿಕೊಂಡು ನಾಮಕರಣವಾಗಿರಬೇಕೆಂಬುದೇ ನನ್ನ ಅಭಿಪ್ರಾಯವಾಗಿದೆ. ತೆಲುಗಿನಲ್ಲಿ **'ಕೊಟ್'** ಎಂದರೆ **'ಮಳಿಗಿ', 'ಅಂಗಡಿ'** ಎಂದು ಅರ್ಥ. ಈಗಲೂ ಆಂಧ್ರದ ಅನಂತಪುರ ಜಿಲ್ಲೆಯಲ್ಲಿ ಕಿರಾಣಿ ಅಂಗಡಿಗೆ **'ಕಿರಾಣಿಕೊಟ್ಟು'** ಎಂದು ಬಳಸುತ್ತಾರೆ. **'ಕಿರಾಣಿಕೊಟ್ಟು'** ಎಂಬ ಶಬ್ದ ಆಂಧ್ರದ ಒಂದು ಪ್ರಾದೇಶಿಕ ಭಾಷೆಯಲ್ಲಿ ಬಳಕೆಯಾಗುತ್ತಿದೆ. ಕೊಟ್ಟೂಗಳನ್ನು ಹೆಚ್ಚಾಗಿ ಹೊಂದಿದ ಊರೇ **'ಕೊಟ್ಟೂರು'** ಎಂದು ಹೆಸರು ಪಡೆದಿರಬೇಕು. **'ಕೊಟ್ಟು'** (ಅಂಗಡಿ, ಮಳಿಗೆ) ಗಳಿಂದ ತುಂಬಿದ ಊರು ಅಂದರೆ ಕೊಟ್ಟ+ಊರು>ಕೊಟ್ಟೂರು ಎಂಬ ಹೆಸರು ಬಂದಿರುವುದು ಸಮಂಜಸವಾಗಿದೆ ಎಂದೆನಿಸುತ್ತದೆ.

ಸುಮಾರು ವರ್ಷಗಳ ಹಿಂದೆ ಕೊಟ್ಟೂರು ವ್ಯಾಪಾರದ ವಿಷಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿಯೇ ದ್ವಿತೀಯ ಸ್ಥಾನಪಡೆದಿತ್ತು. ಇಲ್ಲಿನ ವ್ಯಾಪಾರದ ಹಿರಿಮೆಯನ್ನು ಗಮನಿಸಿಯೇ ಬ್ರಿಟೀಷ್ ಆಳ್ವಿಕೆಯ ಕಾಲದಲ್ಲಿ ಅಂದರೆ ೧೯೦೪ ರಲ್ಲಿ ಹೊಸಪೇಟೆಯಿಂದ ಕೊಟ್ಟೂರಿಗಾಗಿ ವಿಶೇಷ ರೈಲು ವ್ಯವಸ್ಥೆ ಮಾಡಿದ್ದಾರೆ. ಈಗಲೂ ಕೊಟ್ಟೂರಿನಲ್ಲಿ ಹಳೆಯ ಕಾಲದ ಹತ್ತಿಜಿನ್ನುಗಳು, ಮಿಲ್ಲುಗಳು ಇವೆ. ಅಲ್ಲದೆ ಕೊಟ್ಟೂರು ದಲ್ಲಾಳಿ ವ್ಯಾಪಾರಿಗಳಿಂದ, ನೇಕಾರರಿಂದ, ಜವಳಿವ್ಯಾಪಾರಿಗಳಿಂದ ತುಂಬಿದ ಊರಾಗಿದೆ. ಜವಳಿವ್ಯಾಪಾರದ ದೃಷ್ಟಿಯಿಂದ ಆಂಧ್ರಕ್ಕೆ ಸೇರಿದ ರಾಯದುರ್ಗದ ಸಂಪರ್ಕ ಹೆಚ್ಚಾಗಿದೆ. ಇಲ್ಲಿ ತಯಾರಾದ ಕೈಮಗ್ಗದ ಸೀರೆಗಳು, ಬಟ್ಟೆಗಳು ಕರ್ನಾಟಕದ ಎಲ್ಲಾ ಭಾಗಗಳಿಗೂ ಹೂಗುತ್ತಿವೆ. ಅಲ್ಲದೆ **'ಒಂದು ಕಲ್ಲನ್ನು ಎಸೆದರೆ ಅದು ಮಿರ್ಚಿ ಅಂಗಡಿಯ ಮೇಲೆ ಇಲ್ಲವೆ ಕೊಟ್ರೇಶಿ ಎನ್ನುವರ ಹೆಸರಿನ ಮನೆಯಮೇಲೆ ಬೀಳುತ್ತದೆ'** ಎನ್ನುವ ನಾಣ್ನುಡಿಯು ಇಲ್ಲಿನ ವ್ಯಾಪಾರಕ್ಕೆ ಪುಷ್ಟಿ ನೀಡುತ್ತೆದೆ. ಹೀಗೆ ಈ ಊರು ಆದಿಕಾಲದಿಂದಲೂ ವ್ಯಾಪಾರ ಕೇಂದ್ರವಾಗಿರುವುದರಿಂದ, ಅಲ್ಲದೆ ತೆಲುಗು ಭಾಷೆಯ ಪ್ರಭಾವದಿಂದ ಈ ಊರಿಗೆ **'ಕೊಟ್ಟೂರು'** ಎಂಬ ಹೆಸರು ಬಂದಿರಬೇಕು.

೨:೩. ಶಾಸನ ಮೂಲ :-

ಕೊಟ್ಟೂರು ಚಾರಿತ್ರಿಕವಾಗಿ, ಧಾರ್ಮಿಕವಾಗಿ ಇಂದಿಗೂ ಕರ್ನಾಟಕದಲ್ಲಿ ಗುರುತಿಸಿಕೊಳ್ಳುತ್ತಿದೆ. ಸಾಂಸ್ಕೃತಿಕ ಮಹತ್ವವನ್ನು ಅದು ಹೊಂದಿದೆ. ಹತ್ತು ಹಲವು ಆಳರಸರ ಸಂದರ್ಭದಲ್ಲಿ ಬೇರೆ ಬೇರೆ ತೆರನಾಗಿ ಅದು ಗುರುತಿಸಿ ಕೊಂಡಿದೆ. ಅಂತಹ ಉಲ್ಲೇಖಗಳ ಒಂದು ಸಿಂಹಾವಲೋಕನವನ್ನು ಶಾಸನಗಳಲ್ಲಿ ಹುಡುಕಬಹುದು ನೊಳಂಬವಾಡಿ ೩೨೦೦೦, ಕೋಗಳಿ ಐನೂರರ ನಾಡಿನ ಉಪವಿಭಾಗವಾಗಿ ಕೊಟ್ಟೂರು ೧೨ರ ಮೊದಲ ಉಲ್ಲೇಖ ಸಿಗುತ್ತದೆ. ಒಟ್ಟು ೨೫ ಶಾಸನಗಳಲ್ಲಿ ಕೊಟ್ಟೂರು ವರ್ಣರಂಜನೀಯವಾಗಿ ಉಲ್ಲೇಖಗೊಂಡಿದೆ. ಕರ್ನಾಟಕದ ಶಾಸನ ಪರಂಪರೆಯಲ್ಲಿ ಕೊಟ್ಟೂರಿನ ಉಲ್ಲೇಖ ಇನ್ನೂ ಹಲವೆಡೆ ಸಿಗಬಹುದಾದರೂ ಅಧ್ಯಯನದ ಮಿತಿಗಳನ್ನಿಟ್ಟುಕೊಂಡು ಇಪ್ಪತ್ತೈದು ವಿಶಿಷ್ಟ ಶಾಸನಗಳಲ್ಲಿಯೆ ಕೆಲವು ಮಹತ್ವದ ಉಲ್ಲೇಖವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

೧. **'ಕೊಟ್ಟೂರು'** ಗ್ರಾಮ ನಾಮವನ್ನು ಉಲ್ಲೇಖಿಸಿದ ಮೊದಲ ಶಾಸನವೆಂದರೆ ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕು ತೆಲಗಿ ಗ್ರಾಮದಲ್ಲಿರುವ ಕ್ರಿ.ಶ.೧೦೩೨ ಒಂದು ಶಾಸನವು ಚಾಲುಕ್ಯ ಅರಸ ಜಗದೇಕಮಲ್ಲ ಜಯಸಿಂಘದೇವನ ಮಹಾ ಸಾಮಂತ ಜಗದೇಕಮಲ್ಲ ನೊಳಂಬ ಪಲ್ಲವನು ಆಳುತ್ತಿದ್ದಾಗ ತೆಲಗಿಯವರೊಡೆಯ ಕಣ್ಣಿಮಯ್ಯನು ಕರೀಗೌಡನಿಗೆ ಕೋಲಾರ ಶಂಕರ ನಾರಾಯಣ ದೇವರ ಸನ್ನಿಧಿಯಲ್ಲಿ ಭೂಮಿಯನ್ನು ದತ್ತಿಕೊಟ್ಟಿರುವುದಾಗಿ ತಿಳಿಸುತ್ತದೆ. ಈ ಶಾಸನದಲ್ಲಿ **'ಕೊಟ್ಟೂರು'** ಎಂಬ ಹೆಸರು ಬಳಕೆಯಾಗಿರುವುದನ್ನು ನಾವು ಕಾಣಬಹುದು.

ಸ್ವಸ್ತಿ ಸಮಸ್ತ ಭುವನಾಶ್ರಯ ....

. . . . . . **ಕೊಟ್ಟೂರ ಗವುಂಡ**

೨. ಕೊಟ್ಟೂರು ಗ್ರಾಮ ಗದ್ದಿಕಲ್ಲೇಶ್ವರ ಗುಡಿಯಲ್ಲಿರುವ ಕ್ರಿ.ಶ.೧೧೧೨ರ ಶಾಸನವು ಚಾಲುಕ್ಯರ ಅರಸ ತ್ರಿಭುವನಮಲ್ಲ ಪಾಂಡ್ಯ ದೇವನು ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದಾಗ ಕದಂಬ ವಂಶದ ಘಟ್ಟಿಯರಸನು ಕೋಗಳಿ ೫೦೦ಕ್ಕೆ ಒಡೆಯನಾಗಿದ್ದನೆಂದೂ ಹಾಗೂ ಕೊಟ್ಟೂರು ಮೂಲಸ್ಥಾನದ ಶ್ರೀರಾಮೇಶ್ವರ ದೇವರ ತೋಟ, ಒಂದು ಗುಣ, ಹಾಗೂ ಕೋಟೆಯಲ್ಲಿರುವ ನಾಲ್ಕು ಮನೆಗಳನ್ನು ದತ್ತಿ ಕೊಟ್ಟಿರುವುದಾಗಿ ತಿಳಿಸುತ್ತದೆ.

'ಕೊಟ್ಟೂರು ತೆಂಕಣ ಪೊಲಿದ ನೇರಲಿಕೆರ ಯಮನಾಕೆರೆಯ।

ಕೆಳಗಣ ಗದ್ದೆಯವಂ। ಮರೆಯೂರ ಸೀಮೆಯಿಂ।

ಈ ಮೇಲಿನ ಶಾಸನದ ಪ್ರಕಾರ ಕೊಟ್ಟೂರಿನಲ್ಲಿರುವ ಶ್ರೀ ಗದ್ದಿಕಲ್ಲೇಶ್ವರ ಗುಡಿಯು ಶ್ರೀರಾಮೇಶ್ವರ ಗುಡಿಯೆಂದು ತಿಳಿದು ಬರುತ್ತದೆ. ಹಾಗೂ ಕೊಟ್ಟೂರು ಎಂಬ ಹೆಸರು ಬಳಕೆಯಲ್ಲಿತ್ತು ಎಂಬುದನ್ನು ತಿಳಿಸುತ್ತದೆ.

೩. ಬಳ್ಳಾರಿ ಜಿಲ್ಲೆ ಹಗರಿ ಬೊಮ್ಮನಹಳ್ಳಿ ತಾಲೂಕು ಅಂಬಳಿ ಗ್ರಾಮದಲ್ಲಿರುವ ಕ್ರಿ.ಶ. ೧೧೧೯ರ ಈ ಶಾಸನವು ಚಾಲುಕ್ಯರ ಅರಸ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿ ೧೯೦೦ಚಂದನು ಆಳುತ್ತಿದ್ದಾಗ **ಕದಂಬವಂಶದ ಘಟ್ಟಿದೇವರಸು ಕೊಟ್ಟರೊಳು ಸು.** . . . . . . ಎಂಬುದಾಗಿ ಮುಂದುವರೆಯುತ್ತದೆ. **ಶ್ರಮನ್**

ಮಹಾಮಂಡಳೇಶ್ವರ ಘಟ್ಟಿದೇವರಸರು ಕೊಟ್ಟೂರೊಳು. . . . . ಈ ಶಾಸನದ ಪ್ರಕಾರ ಸುಮಾರು ಕ್ರಿ.ಶ.೧೧೯೯ ರಲ್ಲಿಯೇ **'ಕೊಟ್ಟೂರು'** ಎಂಬ ಹೆಸರು ಸ್ಪಷ್ಟವಾಗಿ ಬಳಕೆಯಲ್ಲಿತ್ತು ಎಂಬುದನ್ನು ತಿಳಿಸಿಕೊಡುತ್ತದೆ.

೪. ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಹನಸಿ ಗ್ರಾಮದಲ್ಲಿರುವ ಕ್ರಿ.ಶ.೧೧೧೧ರ ಒಂದು ಶಾಸನವು ಅರಸ ತ್ರಿಭುವನ ಮಲ್ಲ ಪಾಂಡಿತ್ಯ ದೇವನು ನೊಳಂಬವಾಡಿ ೨೯೦೦೦ ವನ್ನು ಆಳುತ್ತಿದ್ದಾಗ **ಕೊಗಳಿ ೫೦೦ ಹತ್ತಿರದ ಹನಸಿಯ ಶ್ರೀ ಪರಶುರಾಮೇಶ್ವರ ದೇವರ ಸೇವೆಗೆ ಭೂಮಿಯನ್ನು ದತ್ತಿ ಪಶ್ಚಿಮದ ಭಾಗಕ್ಕೆ ಕೊಟ್ಟೂರ ಪೆರ್ವಟ್ಟೆ** . . . . . ಇಲ್ಲಿಯೂ 'ಕೊಟ್ಟೂರು' ಎಂಬ ಹೆಸರಿನ ಉಲ್ಲೇಖವನ್ನು ಕಾಣಬಹುದಾಗಿದೆ.

೫. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕು ಬೆಣ್ಣಿಹಳ್ಳಿ ಗ್ರಾಮದ ಪಂಪಾಪತಿ ಗುಡಿಯಲ್ಲಿರುವ ಕ್ರಿ.ಶ.೧೧೪೯ರ ಶಾಸನವು ಎರಡನೆ ಜಗದೇಕಮಲ್ಲ, ಮಹಾಮಂಡಳೇಶ್ವರ, ವೀರಪಾಂಡ್ಯ ದೇವನು ಉಚ್ಚಂಗಿ ರಾಜಧಾನಿಯಿಂದ ನೊಳಂಬವಾಡಿ ೨೯೦೦ ವನ್ನು ಆಳುತ್ತಿದ್ದಾಗ ಕದಂಬ ವಂಶದ ನಾಚಿದೇವರಸನು ಕೊಟ್ಟೂರು ೧೨, ಕೋಗಳಿ ೫೦೦ನ್ನು ಕೊಟ್ಟೂರು ಮುಖ್ಯಪಟ್ಟಣ ದಿಂದ ಆಳಿದನೆಂದು ತಿಳಿಸುತ್ತದೆ. ಅಂದರೆ ಈ ಮೊದಲು ಕೋಗಳಿ ೫೦೦ರ ಉಪವಿಭಾಗದ ಒಂದು ಹಳ್ಳಿಯೋಗಿದ್ದು ಕೊಟ್ಟೂರು ಈಗ ಮುಖ್ಯ ಪಟ್ಟಣವಾಗಿ ಪರಿವರ್ತನೆಗೊಂಡು ಮುಂದುವರೆದಿರುವುದನ್ನು ಕಾಣಬಹುದಾಗಿದೆ.

೬. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಬಾಗಳಿ ಗ್ರಾಮದಲ್ಲಿರುವ ಕ್ರಿ.ಶ. ೧೨೧೨ರ ಈ ಶಾಸನವು ಮಹಾಮಂಡಳೇಶ್ವರ ಕೊಟ್ಟೂರು-ನಾಚಿದೇವನ ಮೊಮ್ಮಗನಾದ ಶ್ರೀ ವೀರಜಗದಾಳ ಎಂಬ ದೆವರಸನು ಬಾಗಳಿ ಕಲ್ಲೇಶ್ವರ ದೇವರ ಸೇವೆಗೆ ಭೂಮಿಯನ್ನು ದತ್ತಿ ಕೊಟ್ಟಿರುವುದಾಗಿ ತಿಳಿಸುತ್ತದೆ. ಈ ಶಾಸನದಲ್ಲಿಯೂ **'ಕೊಟ್ಟೂರು'** ಪದದ ಬಳಕೆಯನ್ನು ನೋಡಬಹುದಾಗಿದೆ.

೭. ಕೋಗಳಿ ಗ್ರಾಮದಲ್ಲಿರುವ ಕ್ರಿ.ಶ. ೧೨೭೫ರ ಈ ಶಾಸನವು ಯಾದವ ನಾರಾಯಣ ಚಕ್ರವರ್ತಿ ಶ್ರೀ ರಾಮನಾಥದೇವನು ಕೋಗಳಿ ೫೦೦ನ್ನು ಆಳುತ್ತಿದ್ದಾಗ

ಕೋಗಳಿಯ ಚನ್ನಪಾರ್ಶ್ವದೇವರ ಸೇವೆಗೆ ಕೊಟ್ಟೂರಿನ ಕೆಲವು ಜೈನ ಭಕ್ತರು ಹಾಗೂ ಹಿತರರು ಹಣವನ್ನು ದತ್ತಿ ಕೊಟ್ಟಿರುವುದಾಗಿ ತಿಳಿಸುತ್ತದೆ.

ಈ ಶಾಸನದಲ್ಲಿ ಕೊಟ್ಟೂರಿನ ಕೆಲವು ಜೈನ ಭಕ್ತರ ಹೆಸರುಗಳನ್ನು ನಮೂಧಿಸಿರುವುದು ಕಂಡು ಬರುತ್ತದೆ. ಹಾಗೂ **'ಕೊಟ್ಟೂರು'** ಎಂಬ ಹೆಸರು ಬಳಕೆಯಾಗಿರುವುದನ್ನು ಸಹ ಕಾಣಬಹುದಾಗಿದೆ.

೮. ಹರಪನಹಳ್ಳಿ ತಾಲೂಕು ರಾಜಭವನ ಹಳ್ಳಿಯಲ್ಲಿರುವ ಕ್ರಿ.ಶ.೧೪೮೯ರ ಈ ಶಾಸನವು ವೀರ ಪ್ರತಾಪ ದೇವರಾಯನ ವಿಜಯ ನಗರಿಯನ್ನು ಆಳುತ್ತಿದ್ದಾಗ ಲಕ್ಕಪ್ಪನ ಮಗ ಹರಿಯಾಣನು ಪಾಂಡ್ಯ ನಾಡಿನ ನೊಣಬನ ಅರಸೀಕೇರಿಯನ್ನು ಆಳುತ್ತಿದ್ದನೆಂದೂ ತಿಳಿಸುತ್ತದೆ. ಈ ಶಾಸದಲ್ಲಿಯೂ ಸಹ **'ಕೊಟ್ಟೂರು'** ಎಂಬ ಪದ ಬಳಕೆಯಾಗಿದೆ.

೯. ಹರಪನಹಳ್ಳಿ ತಾಲೂಕಿನ ಹಗರನೂರು ಗ್ರಾಮದಲ್ಲಿರುವ ಕ್ರಿ.ಶ.೧೫೪೭ರ ಶಾಸನವು ಸದಾಶಿವ ಮಹಾರಾಯರು ಬಸವಪ್ಪ ನಾಯಕರ ಮಗ ಕೃಷ್ಣಪ್ಪನಾಯಕನಿಗೆ ಕೊಟ್ಟೂರು ಸೀಮೆಯಲ್ಲಿರುವ ರಂಗಾಪುರ ಸ್ಥಳದ ಅಮರಗೆರೆ ಎಂಬ ಹಳ್ಳಿಯನ್ನು ದತ್ತಿಕೊಟ್ಟುದುದಾಗಿ ತಿಳಿಸುತ್ತದೆ. ಇಲ್ಲಿಯೂ ಸಹ ಕೊಟ್ಟೂರಿನ ಉಲ್ಲೇಖವನ್ನು ಕಾಣಬಹುದು.

೧೦. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕು ಮೈದೂರು ಗ್ರಾಮದಲ್ಲಿರುವ ಕ್ರಿ.ಶ. ೧೫೪೮ರ ಒಂದು ಶಾಸನವು ಸದಾಶಿವ ರಾಯನು ಕೊಟ್ಟೂರ ಸೀಮೆಯ **'ಮೈಡೂರು'** ಗ್ರಾಮದ ಹಡಪದ ಜನಾಂಗದವರು ಕಡ್ಡಾಯವಾಗಿ ಕಪ್ಪಕಾಣಿಕೆ ಕಟ್ಟುವುದನ್ನು ವಿನಾಯ್ತಿ ಮಾಡಿರುವುದಾಗಿ ತಿಳಿಸಿದೆ. ಈ ಶಾಸನದ ಪ್ರಕಾರ ಸುಮಾರು ೧೯ನೇ ಶತಮಾನದ ಕಾಲದಲ್ಲಿ ಮೈಡೂರು ಗ್ರಾಮವು ಕೊಟ್ಟೂರು ಸೀಮೆಯ ಆಡಳಿತಕ್ಕೆ ಒಳಪಟ್ಟಿತ್ತು ಎಂದು ತಿಳಿಯಬಹುದಾಗಿದೆ.

೧೧. ಹರಪನಹಳ್ಳಿ ತಾಲೂಕು ಬಾಗಳಿ ಗ್ರಾಮದಲ್ಲಿರುವ ಕ್ರಿ.ಶ. ೧೫೫೧ರ ಶಾಸನವು ಸದಾಶಿವ ಮಹಾರಾಯನು ವಿದ್ಯಾನಗರಿಯನ್ನು ಆಳುತ್ತಿದ್ದಾಗ ಹಡಪದ ಕೃಷ್ಣಪ್ಪ ನಾಯಕನಿಗೆ ಕೊಟ್ಟಿರುವ ಕೊಟ್ಟೂರು ಸೀಮೆಯ ಬಾಗಳಿಯ ಕುರುಬ

ಜನಾಂಗದವರು ಕಡ್ಡಾಯವಾಗಿ ಕುರಿ ತೆರಿಗೆ ಕಟ್ಟುವುದನ್ನು ವಿನಾಯ್ತಿ ಮಾಡಿರುವುದನ್ನು ತಿಳಿಸುತ್ತದೆ.

೧೨. ಹಡಗಲಿ ತಾಲೂಕು ಸೋಗಿ ಗ್ರಾಮದಲ್ಲಿರುವ ಕ್ರಿ.ಶ.೧೫೯೯ರ ಶಾಸನವು ಶ್ರೀ ಕೃಷ್ಣರಾಯ ಮಹಾರಾಯನ ರಾಜ್ಯಾಡಳಿತ ಕಾಲದಲ್ಲಿ ಆತನ ಅನುಯಾಯಿ ಇಮ್ಮಡಿ ಬಸವಪ್ಪ ಒಡೆಯರ ತಾಯಿ ಪಾರ್ವತಮ್ಮನವರ ಇಚ್ಛಾನುಸಾರ ಕೊಟ್ಟೂರು ಪ್ರಧಾನ ಅರುಹ ತಿಮ್ಮಣ್ಣ ನಾಯಕನು ಹಣಾಯಕಪುರ ಎಂಬ ಹಳ್ಳಿಯನ್ನು ಸೋಗಿಯ ಕಲ್ಲಿನಾಥ ದೇವರ ಸೇವೆಗೆಂದು ದತ್ತಿ ಕೊಟ್ಟಿರುವುದಾಗಿ ತಿಳಿಸುತ್ತದೆ. ಈ ಶಾಸನದ ಪ್ರಕಾರ ಸುಮಾರು ೧೯ನೇ ಶತಮಾನದಲ್ಲಿಯೇ ಕೊಟ್ಟೂರಿಗೆ ಪ್ರಧಾನ ಎಂಬ ಆಡಳಿತಗಾರನಿದ್ದನೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

೧೩. ಹರಪನಹಳ್ಳಿ ತಾಲೂಕು ಗುಡಿಹಳ್ಳಿ ಗ್ರಾಮದಲ್ಲಿರುವ ಕ್ರಿ.ಶ.೧೫೨೭ರ ಈ ಶಾಸನವು ಶ್ರೀ ಕೃಷ್ಣ ದೇವರಾಯನು ವಿಜಯ ನಗರವನ್ನು ಆಳುತ್ತಿದ್ದಾಗ ಚಿನ್ನಭಂಡಾರದ ತಿಮ್ಮರಸನ ಪುತ್ರ ರಾಯಸ್ತದ ನಾರಾಯಣಪ್ಪನು ನೊಳಂಬವಾಡಿ ೨೯೦೦ದ ಅರಸಿಕೆರೆಯನ್ನು ಆಳುತ್ತಿದ್ದಾಗ ಅರಸಿಕೆರೆ ಕೊಟ್ಟೂರು ಸೀಮೆಗೆ ಸೇರಿತ್ತೆಂದು ತಿಳಿಸುತ್ತದೆ. ಅಲ್ಲದೆ ನಾರಾಯಪ್ಪನ ಅನುಯಾಯಿ ನಾಗರಸಯ್ಯನು ಕೊಟ್ಟೂರು ಸೀಮೆಗೆ ಪಾರುಪತ್ತೇದಾರನಾಗಿದ್ದನೆಂದು ತಿಳಿಸುತ್ತದೆ. ಅಂದರೆ ಈ ಶಾಸನದ ಪ್ರಕಾರ ಈ ವೇಳೆಗಾಗಲೇ ಕೊಟ್ಟೂರು **'ಕೊಟ್ಟೂರು ಸೀಮೆ'**ಯಾಗಿ ಪರಿವರ್ತನೆಗೊಂಡು ಮುಂದುವರಿದಿರುವುದುದನ್ನು ನಾವು ಗಮನಿಸ ಬಹುದು.

ಹೀಗೆ ಕೋಗಳಿ ೫೦೦ರ ಉಪವಿಭಾಗಗಳಾದ ಕೊಟ್ಟೂರು ಪಲ್ಲವರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ನೊಳಂಬರು, ಹೊಯ್ಸಳರು, ಕದಂಬರು ಹಾಗೂ ವಿಜಯ ನಗರದ ಅರಸರ ಆಳ್ವಿಕೆಗೆ ಒಳಪಟ್ಟಿರುವುದನ್ನು ಕಾಣುತ್ತೇವೆ. ಸುಮಾರು ೧೧ನೇ ಶತಮಾನದ ಕಾಲದಿಂದಲೇ ಕೊಟ್ಟೂರು ಎಂಬ ಹೆಸರು ಸ್ಪಷ್ಟವಾಗಿ ಬಳಕೆಯಲ್ಲಿತ್ತು ಎಂಬುದನ್ನು ಕಾಣುತ್ತೇವೆ. ಕೊಟ್ಟೂರಿಗೆ ಕೊಟ್ಟೂರೇಶ್ವರ ಸ್ವಾಮಿಗಳು ಎಂಬ ಶರಣರು ಬರುವುದಕ್ಕಿಂತ ಮುಂಚಿತವಾಗಿಯೇ ಕೊಟ್ಟೂರು ಎಂಬ ಹೆಸರು ಬಳಕೆಯಲ್ಲಿತ್ತು ಎಂಬುದನ್ನು ಮೇಲಿನ ಶಾಸನಗಳು ಸ್ಪಷ್ಟಪಡಿಸುತ್ತವೆ.

ಸುಮಾರು ೧೧ನೇ ಶತಮಾನದಿಂದಲೇ ಕೊಟ್ಟೂರು ಪ್ರಾಚೀನ ಅರಸರಿಗೆ ಮುಖ್ಯ ಪಟ್ಟಣವಾಗಿ, ಸರ್ವಜನಾಂಗದವರ ಆಳ್ವಿಕೆಗೆ ಒಳಪಟ್ಟು ಸರ್ವಧರ್ಮ ಸಮನ್ವಯ ನೀತಿಯನ್ನು ಬಾಲ ಪ್ರವಾಹದಲ್ಲಿ ಕಾಪಾಡಿಕೊಂಡು ಬಂದಿರುವುದು ನಮಗೆ ತಿಳಿಯುತ್ತದೆ. ಪ್ರಾಚೀನ ಕಾಲದ ಧಾರ್ಮಿಕ ಸಂಪ್ರದಾಯಗಳು ಕೊಟ್ಟೂರಿನಲ್ಲಿ ಇಂದಿಗೂ ಕಂಗೊಳಿಸುತ್ತಾ ಆಚರಣೆಯಲ್ಲಿರುವುದನ್ನು ಕಾಣುತ್ತೇವೆ.

ಕಾಲವೆಂಬುದು ವಿಸ್ಮೃತಿಯ ಮಾಹಾಗುಹೆ. ಕಾಲನ ದವಡೆಗೆ ಮೂಢರ ಕೈಗೆ ಹೊಳೆ-ನದಿಗಳು ಹಾವಳಿಗಳಿಗೆ ಸಿಲುಕಿ ಅನೇಕ ಶಾಸನಗಳು ಹಾಳಾಗಿವೆ ಆದರೂ ಸಹ ನಮ್ಮ ನಾಡೆಂಬ ವಿಶಾಲ ಕುಟುಂಬದ ನೂರಾರು ತಲೆಮಾರುಗಳ ವೈಭವೋಪೇತ ಪರಂಪರೆಯನ್ನು ವಿಶಾದಗೊಳಿಸಿ ನಮ್ಮ ಜನಾಂಗದ ಕಣ್ಮರೆಯಾದ ಭವ್ಯ ಜೀವನದ ಬೆಳಕಿನ ಬೊಕ್ಕಸವನ್ನು ನಮಗೆ ಪುನಃ ದಯಪಾಲಿಸಿ ಸಂಸ್ಕೃತಿಯ ಹಾಗೂ ನಾಗರಿಕತೆಯಕಣಜಗಳಂತೆ ಪರಿಶೋಭಿಸುತ್ತಿರುವ ಈ ಶಾಸನಗಳನ್ನು ನಾವು ನಮ್ಮ ದೇಶದ ಅಪೂರ್ವ ಸಂಪತ್ತು ಹಾಗೂ ಅಮೂಲ್ಯ ನಿಧಿಯೆಂದು ಭಾವಿಸಿ ಸಂಗ್ರಹ ಮತ್ತು ರಕ್ಷಣೆಯ ಕಾರ್ಯದಲ್ಲಿ ನಿರತರಾದರೆ ಇನ್ನೂ ಹೆಚ್ಚಿನ ಉಪಯುಕ್ತ ಚಾರಿತ್ರಿಕ ಆಧಾರಗಳು ಲಭಿಸುವುದರಲ್ಲಿ ಸಂದೇಹವಿಲ್ಲ.

ಅಡಿ ಟಿಪ್ಪಣಿಗಳು :

೧. ಕೊಟ್ಟೂರು ಗ್ರಾಮದ ಭೌಗೋಳಿಕ ಪರಿಸರದ ಬಗ್ಗೆ ಕೊಟ್ಟೂರು ಹೋಬಳಿಯ ಕಂದಾಯ ಪರಿವೀಕ್ಷಕರಿಂದ ಮಾಹಿತಿ ಪಡೆಯಲಾಗಿದೆ.

೨. ಎಂ.ಶರಣಪ್ಪ-೧೯೯೬ ಲೇಖನ-ಕೊಟ್ಟೂರು ಸ್ಥಳನಾಮ ವಿಚಾರ, ಪತ್ರಿಕೆ : **'ವಿದ್ಯಾಶಿಖರ'** **'ಸ್ಮರಣ ಸಂಚಿಕೆ'**, ಪ್ರಕಾಶನ ಕೊಟ್ಟೂರೇಶ್ವರ ಮಹಾವಿದ್ಯಾಲಯ ಕೊಟ್ಟೂರು, ಪುಟಸಂಖ್ಯೆ ೨೯-೩೧.

೩. ಡಾ॥ ಆರ್.ಸಿ.ಹಿರೇಮಠ-೨೦೦೧, ಕೃತಿ- **'ಕೊಟ್ಟೂರು ಬಸವೇಶ್ವರ ಚಾರಿತ್ರ್ಯ'** , ಪ್ರಕಾಶನ - ಶ್ರೀ ಕೊಟ್ಟೂರೇಶ್ವರ ಕಲ್ಯಾಣ ಮಂಟಪ ಸಮಿತಿ (ರಿ) ಶ್ರೀ ಕ್ಷೇತ್ರ ಕೊಟ್ಟೂರು, ಪುಟ ಸಂಖ್ಯೆ ೧೬-೧೮.

೪. ಸಿ.ಹೆಚ್.ಎಂ.ಕೊಟ್ರಯ್ಯ, ೨೦೦೮, ಲೇಖನ- **'ಶಾಸನಗಳಲ್ಲಿ ಕೊಟ್ಟೂರು'**, ಕೃತಿ - ಪರಿಪೂರ್ಣ ಪ್ರಕಾಶನ- ಪ್ರಣಾವ ಪ್ರತಿಷ್ಠಾನ. ಪುಟಸಂಖ್ಯೆ ೮೧-೮೬.

ಅಧ್ಯಾಯ: ಮೂರು

ಕೊಟ್ಟೂರಿನ ಜನಪದ ನೆಲೆಗಳು

೩:೧ ಸಾಮಾಜಿಕ ವ್ಯವಸ್ಥೆ :

ಮಾನವ ತನ್ನ ಹುಟ್ಟಿನಿಂದಲೇ ಸಮೂಹ ಜೀವಿಯಾಗಿ ಬದುಕಲಾರಂಭಿಸಿದ ಏಕೆಂದರೆ ಮಾನವ ಒಬ್ಬಂಟಿಯಾಗಿ ಬದುಕಲು ಅಸಾಧ್ಯವೆಂದು ಅರಿತು ಸಂಘಜೀವಿಯಾಗಿ ಜೀವಿಸಲು ಆರಂಭಿಸಿದ ಹುಟ್ಟಿದ ಮಗುವು ಆಯಾ ಸಮಾಜವನ್ನು ಆಶ್ರಯಿಸುತ್ತದೆ. ಹಾಗೇ ಆ ಸಮಾಜದಲ್ಲಿ ಬೆಳೆದು ಅದರ ನೀತಿ ನಿಯಮಗಳಲ್ಲಿ ಭಾಗಿಯಾಗುತ್ತದೆ. ಈ ಕಾರಣಕ್ಕಾಗಿಯೇ ಖ್ಯಾತ ತಜ್ಞರಾದ **ಅರಿಸ್ಟಾಟಲ್** ರವರು **"ಮಾನವ ಸಂಘಜೀವಿ", "ಸಮಾಜ ಜೀವಿ"** ಎಂದು ಹೇಳಿರುವುದು ಇಲ್ಲಿ ಗಮನಾರ್ಹವಾದ ಅಂಶವಾಗಿದೆ. ಹೀಗೆ ಸಮಾಜದಲ್ಲಿ ಬದುಕುವ ಜನರು ತಮ್ಮದೇ ಆದ ಸಂಸ್ಕೃತಿಯನ್ನು ಮತ್ತು ಚೌಕಟ್ಟನ್ನು ಸೃಷ್ಟಿಸಿ ಕೊಂಡಿದ್ದಾರೆ.

ಈ ಸಮಾಜಿಕ ವ್ಯವಸ್ಥೆಯಲ್ಲಿ ಕುಟುಂಬಕ್ಕೆ ಪ್ರಥಮ ಆದ್ಯತೆ ದೊರೆಯುತ್ತದೆ. ಕುಟುಂಬ ವ್ಯವಸ್ಥೆಯಲ್ಲಿ ಕುಟುಂಬದ ಸದಸ್ಯರ ಜೀವನ ರೀತಿ ಮುಖ್ಯವೆನಿಸುತ್ತದೆ. ತರುವಾಯ ಉದ್ಯೋಗ ಪರಿಗಣಿಸಲ್ಪಡುತ್ತದೆ. ಭಾರತದಂತ ದೇಶದಲ್ಲಿ ಕೃಷಿಯು ಪ್ರಧಾನ ಉದ್ಯೋಗವಾಗಿರುವಂತೆಯೇ ಅದಕ್ಕೆ ಹೊಂದಿಕೊಂಡು ಬೇರೆ ಬೇರೆ ವೃತ್ತಿಗಳು ಸೃಷ್ಟಿಗೊಂಡಿವೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮುಖ್ಯವಾದರೆ ಕಂಬಾರಿಕೆ, ಬಡಿಗತನ, ಕುಂಬಾರಿಕೆ ಮುಂತಾದವುಗಳು ಕೃಷಿಯನ್ನವಲಂಬಿಸಿ ಬೆಳೆದ ವೃತ್ತಿಗಳೆನಿಸುತ್ತವೆ. ಈ ಉದ್ಯೋಗಗಳು ಭೌತಿಕ ಬದುಕಿಗೆ ಆಸರೆಯಾಗಿದ್ದರೆ ದೇವರು-ಧರ್ಮಗಳಂತ ಭಾವುಕ ನಂಬಿಕೆಗಳ ಹಿನ್ನೆಲೆಯಲ್ಲಿ ಅನೇಕ ಸಂಪ್ರದಾಯ ಆಚರಣೆಗಳು ರೂಢಿಗೊಳಗಾಗುತ್ತವೆ. ಈ ಅಂಶಗಳನ್ನು ದಾಟಿಕೊಂಡು ಸಾಮಾಜಿಕ ಜೀವನದ ವ್ಯವಸ್ಥಿತ ನಡೆಗೆ ಒಂದು ನೀತಿ ಸಂಹಿತೆ ಬೇಕೆಂದು ಆಡಳಿತಾತ್ಮಕ ವಿಧಾನವೊಂದು ಹಳ್ಳಿ ಬದುಕಿನ ದೈನಂದಿನ ಜೀವನಕ್ಕೆ ಅವಶ್ಯವೆನಿಸುತ್ತದೆ.

ಈ ಬಗೆಯ ಸಮಾಜ ರಚನೆಯ ಹಿನ್ನೆಲೆಯಲ್ಲಿ ಕೊಟ್ಟೂರಿನ ಸಮಾಜಿಕ ವ್ಯವಸ್ಥೆಯನ್ನು ಮುಖ್ಯವಾಗಿ ಮೂರು ಭಾಗಗಳಿಂದ ನೋಡಬಹುದಾಗಿದೆ.

ಅ. ಕುಟುಂಬ ವ್ಯವಸ್ಥೆ.

ಬ. ಉದ್ಯೋಗ ವ್ಯವಸ್ಥೆ.

ಕ. ವರ್ಣ ವ್ಯವಸ್ಥೆ.

ಕೊಟ್ಟೂರು ಕುಟುಂಬ ವ್ಯವಸ್ಥೆ ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಂತೆಯೇ ಇದೆ. ತರುವಾಯದ ಹಂತದಲ್ಲಿ ಕೊಟ್ಟೂರಿನ ಮುಖ್ಯ ಉದ್ಯೋಗ ವೆನಿಸಿದ ವ್ಯಾಪಾರವನ್ನು ವಿವರಿಸಿ ಕೊಟ್ಟೂರಿಗೆ ವಿಶಿಷ್ಟವಾದ ನಂಟು ಬಿಡಿಸುವ ಉದ್ಯೋಗವನ್ನು ಮುಖ್ಯವಲ್ಲದಿದ್ದರೂ ಉಲ್ಲೇಖಿಸಬೇಕಾಗುತ್ತದೆ. ಮೂರನೆಯ ಹಂತದಲ್ಲಿ ಉದ್ಯೋಗ ವ್ಯವಸ್ಥೆಯನ್ನು ಅನುಸರಿಸಿಯೇ ವರ್ಣವ್ಯವಸ್ಥೆಯನ್ನು ವಿಂಗಡಿಸಿ ವಿಶ್ಲೇಷಿಸಬೇಕಾಗುತ್ತದೆ. ಇಲ್ಲಿ ಮುಖ್ಯ ಉದ್ಯೋಗ ವ್ಯಾಪಾರವನ್ನು ಆಶ್ರಯಿಸಿದ ವರ್ಣಗಳು ಒಂದು ಗುಂಪಾದರೆ, ಒಕ್ಕಲುತನವನ್ನಾಶ್ರಯಿಸಿದ ಇತರ ವರ್ಣಗಳು ಎರಡನೆಯ ಗುಂಪಾಗುತ್ತವೆ. ಪ್ರತಿಯೊಂದು ಜಾತಿಯನ್ನು ನೊಡುವಾಗ ಅವರಲ್ಲಿಯ ಒಳಪಂಗಡಗಳು ಅವರ ದೇವರು, ಸಂಪ್ರದಾಯ, ಮತಾಚರಣೆ ಹೀಗೆ ಅನುಷಂಗಿಕವಾಗಿ ಬರುವ ಅನೇಕ ವಿಷಯಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಅ. ಕುಟುಂಬದ ವ್ಯವಸ್ಥೆ :

ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬವೆನ್ನುವುದು ಒಂದು ಪ್ರಮುಖವಾದ ಘಟಕ. ಗ್ರಾಮ ಜೀವನದಲ್ಲಿ ಕುಟುಂಬ ಸಂಸ್ಕೃತಿ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುತ್ತದೆ. ಒಂದು ಕುಟುಂಬದಲ್ಲಿನ ವ್ಯಕ್ತಿ–ವ್ಯಕ್ತಿಗಳ ಸಂಬಂಧ, ಇವರು ವಾಸಿಸುವ ಮನೆ, ಪ್ರೀತಿಸುವ ದನಕರು, ಮಾಡುವ ಊಟ, ಧರಿಸುವ ಉಡುಗೆ ಇವೆಲ್ಲವುಗಳ ನಿರೂಪಣೆ ಕುಟುಂಬದ ಹಿನ್ನೆಲೆಯಲ್ಲಿಯೇ ಒಂದು ಸಮಾಜದ ಒಪ್ಪಂದದ ಸಮೀಕ್ಷೆಯಲ್ಲಿ ಅಭ್ಯಾಸ ಯೋಗ್ಯವೆನಿಸುತ್ತದೆ.

ನಮ್ಮ ದೇಶದ ಬಹುತೇಕ ಹಳ್ಳಿಗಳಲ್ಲಿರುವಂತೆ ಕೊಟ್ಟೂರಿನಲ್ಲಿಯೂ ಪಿತೃ ಪ್ರಧಾನವಾದ ಕುಟುಂಬ ಪದ್ಧತಿಯೇ ಇದೆ. ತಂದೆ ಮನೆಯ ಹಿರಿಯನಾದರೆ ಅವನ ಹೆಂಡತಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಎಲ್ಲ ಅವನಿಗೆ ಅನುವರ್ತಿಗಳಾಗಿ ನಡೆದು ಕೊಳ್ಳುತ್ತಾರೆ. ಕುಟುಂಬದ ಅಸ್ತಿತ್ವ ಇವನ ಹಿರಿತನದಲ್ಲೇ ಗುರುತಿಸಲ್ಪಡುತ್ತದೆ. ಕುಟುಂಬ ಅವಿಭಕ್ತ-ವಿಭಕ್ತ ಯಾವುದೇ ಇರಲಿ, ತಂದೆಯ ತರುವಾಯ ಅವನ ಹಿರಿಯ ಮಗನಿಗೆ ಆ ಪಟ್ಟ ಹೋಗುತ್ತದೆ. ಅವಿಭಕ್ತ ಕುಟುಂಬಗಳು ಹೆಚ್ಚಾಗಿದ್ದ ಕಾಲವೊಂದಿತ್ತು. ಮುಂಚಿನ ರೀತಿ ಈಗ ಉಳಿದಿಲ್ಲ. ಅವಿಭಕ್ತ ಕುಟುಂಬಗಳು ಕರಗುತ್ತಿವೆ. ಆದರೆ ಹೊತ್ತು-ವೇಳೆ ಬಂದಾಗ ಅಣ್ಣ, ತಮ್ಮಂದಿರು ಒಬ್ಬರಿಗೊಬ್ಬರು ಆಗುತ್ತಾರೆ. ಅವಿಭಕ್ತ ಕುಟುಂಬಗಳು ಕರಗುತ್ತಿದ್ದರೂ ತಂದೆ-ತಾಯಿಗಳಿಗೆ ಅನಾಥ ಪ್ರಜ್ಞೆ ಕಾಡುವುದಿಲ್ಲ. ಮಕ್ಕಳು ಬೇರೆಯಾವುದಕ್ಕೆ ಮರುಗಬಹುದು ಅಷ್ಟೇ. ಮಗನೊಬ್ಬನ ಕಡೆಗೆ ಇವರು ಸುರಕ್ಷಿತವಾಗಿರುತ್ತಾರೆ. ಆಮಟ್ಟಿಗೆ ಇನ್ನು ಹಳ್ಳಿಗಳಲ್ಲಿ ಉಳಿದಿರುವ ಸಂಸ್ಕಾರ ಕೊಟ್ಟೂರಿನಲ್ಲಿಯೂ ಉಳಿದು ಕೊಂಡಿದೆ.

ಈ ಕುಟುಂಬ ಸದಸ್ಯರು ವಾಸಿಸುವ ಮನೆ, ಇವರ ಊಟ, ಉಡುಗೆಗಳನ್ನು ಅವಲೋಕಿಸಿ ತರುವಾಯ ಕೊಟ್ಟೂರಿನ ಒಪ್ಪಂದದ ಸಾಮಾಜಿಕ ವ್ಯವಸ್ಥೆಯ ಇತರೆ ಅಂಶಗಳನ್ನು ಗುರುತಿಸಬಹುದು.

ಮನೆ :

ಆಧುನಿಕ ಪ್ರಭಾವಕ್ಕೆ ಒಳಗಾದ ಕೊಟ್ಟೂರು ವಂಶಪಾರಂಪರಗತವಾಗಿ ಬೆಳೆದು ಬಂದ ಹಳೆಯ ಮಾಳಿಗೆ ಮನೆಗಳು ಕಾಣದಂತಾಗಿವೆ. ಅಲ್ಲಲ್ಲಿ ಸುಮಾರು ನೂರಕ್ಕೆ ಹತ್ತು ಮನೆಗಳು ಮಾತ್ರ ಕಾಣಸಿಗುತ್ತವೆ. ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಹಾಗೂ ಐತಿಹಾಸಿಕವಾಗಿ ಪ್ರಸಿದ್ಧಿಯಾದ ಕೊಟ್ಟೂರಿನಲ್ಲಿ ಇಂದು ಆಧುನಿಕ ಕಾಲದಲ್ಲಿ ಸಿಮೆಂಟ್ ಬಳಸಿದ ಕಟ್ಟಡಗಳು ಹೆಚ್ಚು ಕಾಣಸಿಗುತ್ತವೆ. ಇಲ್ಲಿ ಜಾತಿಗೆ ಅನುಗುಣವಾಗಿ ಮನೆಗಳು ನಿರ್ಮಾಣವಾಗಿವೆ. ಅಂದರೆ ಇಲ್ಲಿ ಉನ್ನತ ವರ್ಗದವರು ಮಾತ್ರ ಅತ್ಯಂತ ಹೆಚ್ಚು ಖರ್ಚಿನಿಂದ ಅಂದರೆ ಸುಮಾರು ಐದರಿಂದ ಹತ್ತು ಲಕ್ಷಗಳ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಕೊಟ್ಟೂರು ಇಂದು ೨೦ ವಾರ್ಡ್‌ಗಳಲ್ಲಿ ೬೦೦೯ ಮನೆಗಳು ಹಾಗೂ ೩೩೦೮ ನಿವೇಶನಗಳಿಂದ ಕೂಡಿದೆ. ಹೀಗೆ ಅತಿದೊಡ್ಡ ವಿಸ್ತಾರತೆಯನ್ನು ಹೊಂದಿದ ಕೊಟ್ಟೂರಿನ ಮನೆಗಳು ತಮ್ಮದೇಯಾದ ಲಕ್ಷಣಗಳಲ್ಲಿ ನಿರ್ಮಾಣಗೊಂಡಿವೆ. ಸುಮಾರು ಮೂರರಿಂದ ನಾಲ್ಕು ಅಡಿ ಎತ್ತರದ ಜಗುಲಿಯ ಮೇಲೆ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ವಾಸಕ್ಕೆ ಯೋಗ್ಯವಾದ ರೀತಿಯಲ್ಲಿ ಎಲ್ಲಾ ಕೋಣೆಗಳನ್ನು ಕಟ್ಟಡದ ಒಳಗಡೆಯೇ ಇರುವಂತೆ ನಿರ್ಮಿಸಲಾಗಿದೆ. ಬಚ್ಚಲು ಕೋಣೆ, ದೇವರಕೋಣೆ, ಮಲಗುವ ಕೋಣೆ, ಊಟದ ಕೋಣೆ ಹಾಗೂ ಹಲವು ಹತ್ತು ರೀತಿಯಲ್ಲಿ ಮನೆಗಳನ್ನು ನಿರ್ಮಿಸಲಾಗುತ್ತದೆ.

ವಿಶಾಲವಾದ ಬೀದಿಗಳ ಬದಿಯಲ್ಲಿ ನಿರ್ಮಾಣವಾದ ಮನೆಗಳು ನಗರಕ್ಕೆ ಶೋಭೆ ತರುವಂತೆ ರಚನೆಯಾಗಿವೆ. ಅಲ್ಲದೆ ಕೆಲವೊಂದು ಮನೆಗಳು ಬೀದಿಗೆ ಎದುರು ಇರುವಂತೆ ವ್ಯಾಪಾರ ಮತ್ತು ವಾಸಕ್ಕೆ ಅನುಗುಣವಾಗಿ ಹೆಚ್ಚು ಮನೆಗಳನ್ನು ನಿರ್ಮಿಸಲಾಗಿದೆ. ಏಕೆಂದರೆ ಕೊಟ್ಟೂರು ವ್ಯಾಪಾರಕ್ಕೆ ಯೋಗ್ಯ ಸ್ಥಳವೆಂದು ಕ್ರಿ.ಶ.೧೧ನೇ ಶತಮಾನದಲ್ಲೇ ತಿಳಿಸಲಾಗಿದೆ. ಹೀಗಿರುವಾಗ ಇಲ್ಲಿಯ ಮನೆಗಳು ತಮ್ಮ ಸ್ವಉದ್ದೇಶಕ್ಕನುಗುನವಾಗಿ ನಿರ್ಮಿತವಾಗಿವೆ.

ಇನ್ನು ದಲಿತರ ಕಾಲೋನಿಗಳಲ್ಲಿ ಸಣ್ಣ, ಅತೀಸಣ್ಣ ಮನೆಗಳು ಹಾಗೂ ಕೆಲಮನೆಗಳು ಮಾತ್ರ ದೊಡ್ಡಗಾತ್ರದಲ್ಲಿ ಕಾಣಸಿಗುತ್ತವೆ. ಕೂಲಿಕಾರರ ಬದುಕನ್ನು ರೂಪಿಸುವ ಇವರ ಜೀವನಕ್ಕೆ ಎಲ್ಲಾಕೋಣೆಗಳು ಒಂದು ಚಿಕ್ಕ ಮನೆಯೇ ಆಗಿರುತ್ತದೆ. ಅಲ್ಲದೆ, ಪೂರ್ವದ ಮಾಳಿಗೆ ಮನೆಗಳು ಅಲ್ಲಲ್ಲಿ ಕೆಲವೊಂದು ಕಂಡುಬರುವುದು ಈ ದಲಿತರ ಹಾಗೂ ಮಧ್ಯಮ ವರ್ಗದವರ ಕಾಲೋನಿಗಳಲ್ಲಿ. ಇವರ ಮನೆಗಳಲ್ಲಿ ದೇವರಮನೆಗಳು ಅಥವಾ ಅಡುಗೆ ಮನೆಯು ಒಂದೇಕಡೆ ಇರುತ್ತದೆ. ಅಡಕಲು ಗಡಿಗೆಯ ಸಾಲುಗಳೂ ಉಂಟು, ಇವುಗಳಲ್ಲಿ ಆಹಾರ ಧಾನ್ಯಗಳನ್ನು ಹಾಗೂ ಇಟ್ಟನ್ನು ಶೇಖರಿಸಿಡುವ ವ್ಯವಸ್ಥೆ ಇದೆ. ಕೊಟ್ಟೂರಿನ ಎಲ್ಲಾ ಮನೆಗಳು ಹೀಗೆಯೇ ಇವೆ ಎಂದಲ್ಲ. ವ್ಯಾಪಾರ ಕೇಂದ್ರವಾದ ಈ ಕೊಟ್ಟೂರಿನಲ್ಲಿ ಚಿಕ್ಕ ಜೋಪಡಿಗಳು ಇವೆ. ಇನ್ನೂ ಆಯಾ

ಕುಟುಂಬದವರ ಗಾತ್ರ, ಸೌಕರ್ಯಗಳನ್ನು ಅವಲಂಬಿಸಿ ದೇವರಕೋಣೆ, ನಡುಮನೆ, ಒಳಕೋಣೆಗಳು, ಹಿತ್ತಲು ಇವೆಲ್ಲ ಇರಬಹುದು, ಇರಲಿಕ್ಕಿಲ್ಲ.

ಹೀಗೆ ಆಧುನಿಕ ಕಾಲಮಾನವನ್ನು ಅನುಸರಿಸಿ ಇಂದು ಕೊಟ್ಟೂರು ಮನೆಗಳ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಯಾಗುತ್ತದೆ. ಶೇ ೫೦ ರಷ್ಟು ಜನರು ಆರ್.ಸಿ.ಸಿ. ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಇಂತಹ ಮನೆಗಳಲ್ಲಿ ಎಲ್ಲಾ ಕೋಣೆಗಳ ಸೌಲಭ್ಯಗಳು ಇರುತ್ತವೆ. ಒಟ್ಟಾರೆಯಾಗಿ ನಾಗರೀಕತೆ ಬೆಳೆದಂತೆ ನಗರೀಕರಣ ಪ್ರಭಾವದಿಂದ ಕೊಟ್ಟೂರಿನ ಎಲ್ಲಾ ಮನೆಗಳು ಮರು ಸ್ವರೂಪವನ್ನು ಪಡೆದಿವೆ.

ಆಹಾರ ಪದ್ಧತಿ :

ನಮ್ಮ ದೇಹದ ಪ್ರತಿಯೊಂದು ಚಟುವಟಿಕೆಗಳಿಗೆ ಆಹಾರವೇ ಮೂಲಶಕ್ತಿ. ನೀರು, ಗಾಳಿ, ಆಹಾರ ಈ ಮೂರು ಇರದಿದ್ದರೆ ಮನುಷ್ಯ ಬದುಕುತ್ತಿರಲಿಲ್ಲ. ಮನುಷ್ಯ ಬರೆಯಬೇಕಾದರೆ, ಓದಬೇಕಾದರೆ, ಆಡುವುದು, ಓದುವುದು, ಕೆಲಸಮಾಡುವುದು, ದೈಹಿಕ ಪ್ರಕ್ತಿಯೆಗಳಿಗೂ, ಪಚನ ಕ್ರಿಯೆ, ಉಸಿರಾಟ ಹೀಗೆ ಪ್ರತಿಯೊಂದಕ್ಕೂ ಕೂಡ ಆಹಾರವೇ ಮೂಲ ಶಕ್ತಿಯನ್ನು ಒದಗಿಸುವಂತದ್ದು. ಹಾಗಾಗಿಯೇ ಹಿರಿಯರು **'ಊಟ ಬಲ್ಲವನಿಗೆ ರೋಗವಿಲ್ಲ, ಮಾತುಬಲ್ಲವನಿಗೆ ಜಗಳವಿಲ್ಲ'** ಎಂಬ ಗಾದೆ ಇದೆ, ಅದು ನೂರಕ್ಕೆ ನೂರರಷ್ಟು ಸತ್ಯಕೂಡ.

ಆಯಾ ಪ್ರದೇಶದ ಭೌಗೋಳಿಕ ಪರಿಸರ ಊಟೋಪಚಾರವನ್ನು ನಿಯಂತ್ರಿಸುತ್ತದೆ. ಈ ಭಾಗದ ಹಳ್ಳಿಯ ಜನ ತಮ್ಮ ಆಹಾರ ಪದಾರ್ಥಗಳಿಗೆ ಬೇಕಾಗುವ ಕಾಳುಕಡಿಗೆ ವ್ಯಾಪಾರವನ್ನು ಅವಲಂಬಿಸಿದ್ದಾರೆ. ಇದಕ್ಕೆ ಕೊಟ್ಟೂರು ಹೊರತಾಗಿಲ್ಲ. ಇವರ ಊಟದ ರೀತಿ ನಿತ್ಯ ಜೀವನ ಮತ್ತು ಹಬ್ಬ ಹರಿದಿನಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ಕೊಟ್ಟೂರು ಗ್ರಾಮದಲ್ಲಿಯ ಆಹಾರ ಪದ್ಧತಿಯನ್ನು ಈ ಕೆಳಗಿನಂತೆ ತಿಳಿಯ ಬಹುದಾಗಿದೆ. ಇಲ್ಲಿಯ ಅಡುಗೆಯ ಬಗೆಗಳನ್ನು ಈ ರೀತಿ ಗುರುತಿಸಬಹುದು.

೧. ಸಸ್ಯಾಹಾರ

೨. ಮಾಂಸಾಹಾರ

೩. ರುಚಿಗಳು

೪. ಪಾನೀಯಗಳು

೧. **ಸಸ್ಯಹಾರ** : ಇಲ್ಲಿ ವಿವಿಧ ರೀತಿಯ ಆಹಾರದ ಬಗೆಯನ್ನು ಕಾಣಬಹುದು. ಸಾಮಾನ್ಯವಾಗಿ ಪರಿಸರದಲ್ಲಿ ಬೆಳೆಯುವ ಸಸ್ಯವರ್ಗದಿಂದ ತಯಾರು ಮಾಡುತ್ತಾರೆ. ಹೆಸರುಕಾಳು, ತೊಗರಿಬೇಳೆ, ಮಡಕಿ ಕಡಲೆ, ಗಜ್ಜರಿ, ಬದನೆಕಾಯಿ, ಆಲೂಗಡ್ಡೆ ಮತ್ತು ಭೂಮಿಯಲ್ಲಿ ಬೆಳೆಯುವ ಸೊಪ್ಪನ್ನು ಹಾಕಿ ಅಡುಗೆ ತಯಾರು ಮಾಡುತ್ತಾರೆ.

ನಿತ್ಯದ ಊಟಕ್ಕೆ ರೊಟ್ಟಿ, ಮುದ್ದೆ, ಚಪಾತಿ ಬೇಕು. ಕೊಮ್ಮಣಿಗೆಯಲ್ಲಿ ಹೊಯ್ದಿಡುವ ನೀರಿನಿಂದ ಜೋಳದ ಹಿಟ್ಟು ಕಲಿಸಿ ಸಣ್ಣ ಸಣ್ಣ ಉಳ್ಳಿ ಮಾಡಿಕೊಂಡು ಚಕ್ರಾಕೃತಿಯಲ್ಲಿ ಅದನ್ನು ಬಡಿಯಲಾಗುತ್ತದೆ. ತರುವಾಯ ಇವನ್ನು ಬಡೆ ಬಡೆದಂತೆ ಒಲೆಯ ಮೇಲಿನ ಹಂಚು ಅಥವಾ ತವೆಗೆ ಹಾಕಿ ಬೇಯಿಸಿ ರೊಟ್ಟಿ ತಯಾರಿಸಲಾಗುತ್ತದೆ.

ರೊಟ್ಟಿ ಮತ್ತು ಚಪಾತಿಗೆ ಪಲ್ಯವನ್ನು ಬಳಸಲಾಗುತ್ತದೆ. ದ್ವಿದಳ ಧಾನ್ಯಗಳಾದ ತೊಗರಿ, ಹೆಸರು, ಮಡಕೆ, ಹಲಸಂದಿಗಳಿಂದ ಹಾಗೂ ತರಕಾರಿಗಳಿಂದ ಈರೆಕಾಯಿ, ಗಜ್ಜರಿ, ಮೂಲಂಗಿ ಮತ್ತು ಬದನೆಕಾಯಿಗಳಿಂದ ಪಲ್ಯ ತಯಾರಿಸಲಾಗುತ್ತದೆ. ಹಾಗೂ ಇವುಗಳಿಂದ ಸಾರನ್ನು ಕೂಡಾ ಮಾಡುತ್ತಾರೆ. ಪಲ್ಯ ಸಾರು ಮಾಡುವಾಗ ಖಾರ, ಉಪ್ಪು, ಮಸಾಲಾ ಸಾಮಾನುಗಳನ್ನು ಬಳಸಲಾಗುತ್ತದೆ. ಜೊತೆಗೆ ಕರಿಬೇವು, ಕೊತ್ತಂಬರಿ ಮುಂತಾದ ಸೊಪ್ಪುಗಳನ್ನು ಕೂಡ ಬಳಸುತ್ತಾರೆ.

ಕೊಟ್ಟೂರಿನ ಜನತೆಯು ಪ್ರತಿಊಟಕ್ಕೂ ಅನ್ನವನ್ನು ಉಪಯೋಗಿಸುತ್ತಾರೆ. ಕೆಲವರು ಕೇವಲ ಅನ್ನವನ್ನು ಮಾತ್ರ ಊಟವಾಗಿ ಉಪಯೋಗಿಸುತ್ತಾರೆ. ರೊಟ್ಟಿ ಅಥವಾ ಚಪಾತಿಯನ್ನು ತಿಂದಾಗ ಮೇಲೆ ಅನ್ನವನ್ನು ಊಟ ಮಾಡಲಾಗುತ್ತದೆ. ಬಡವರ

ಊಟಕ್ಕೆ ರೊಟ್ಟಿ ಖಾರಬ್ಯಾಳಿ ನುಚ್ಚುಗಳೇ ಆಸರೆಯಾಗಿವೆ. ಅನುಕೂಲವಿದ್ದವರು ಹಾಲು, ಮೊಸರು, ಮಜ್ಜಿಗೆಗಳನ್ನು ಯಥೇಚ್ಚವಾಗಿ ಬಳಸುತ್ತಾರೆ. ಮೊಸರಿನ ಜೊತೆಗೆ **'ಈರುಳ್ಳಿ ಖಾರ'** ವಿಶೇಷವಾಗಿರುತ್ತದೆ.

ವಿಶೇಷವಾಗಿ ಹಬ್ಬ ಹರಿದಿನಗಲ್ಲಿ ಹೋಳಿಗೆ ಸಾಮಾನ್ಯ ಸೆಂಡಿಗೆ, ಹಪ್ಪಳ, ಉಪ್ಪಿನಕಾಯಿಗಳು ಹಬ್ಬದ ಸಿಹಿ ಅಡುಗೆಯೊಂದಿಗಿರುವ ಸಾಮಾಗ್ರಿಗಳಾದರೆ ಅನ್ನಕ್ಕೆ ಕಟ್ಟಿನ ಸಾರು ವಿಶೇಷ. ಕೆಲವರು ಹುಗ್ಗಿ (ಪಾಯಾಸ), ಜಾಮೂನು ಹಾಗೂ ಬೂಂದಿಗಳನ್ನು ಈ ಹಬ್ಬದ ದಿನಗಳಂದೆ ಮಾಡುವುದುಂಟು. ಕೆಲವು ಅಡುಗೆ ಪದಾರ್ಥಗಳು ಇಂತಿಂಥ ಹಬ್ಬಗಳಿಗೆಂದೇ ಪ್ರಸಿದ್ದವಾಗಿವೆ.

ತರತರದ ಉಂಡಿ, ಕರಜಿಕಾಯಿ, ಗಾರಿಗಿ, ಕೋಡುಬಳೆ ಇವೆಲ್ಲ ಪಂಚಮಿಯ ವಿಶೇಷಗಳಾದರೆ, ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ, ಪುಂಡಿಪಲ್ಲೆ ಅಥವಾ ಅಗಸಿ ಇಂಡಿ (ಚಟ್ನಿ), ಎಳ್ಳಮಾಸೆಯ ವಿಶೇಷಗಳು. ಇವುಗಳೊಂಗೆ ಹೋಳಿಗೆ ಅಥವಾ ಹೂರಣಗಡಬು ಇದ್ದೇ ಇರುತ್ತವೆ.

ಸ್ಯಾವಿಗೆ, ಗುಳಿಗೆ, ಸವತಿ ಬೀಜ, ಪರಡಿಗಳನ್ನು ಬೇಸಿಗೆಯಲ್ಲಿ ಮಾಡಿ ಸಂಗ್ರಹಿಸಿಡಲಾಗುತ್ತದೆ. ಆ ವೇಳೆಯಲ್ಲಿ ಬಂದ ನೆಂಟರಿಗೆ ವಿಶೇಷ ಅಡುಗೆಮಾಡುವ ಪ್ರಸಂಗ ಬಂದರೆ ಸೇವಿಗೆ ಬಸಿಯಲಾಗುತ್ತದೆ. ಸ್ಯಾವಿಗೆಗೆ ಸಕ್ಕರೆ ಇಲ್ಲವೆ, ಬೆಲ್ಲಹಾಕಿ ಒಂದಿಷ್ಟು ತುಪ್ಪ ಸುರಿದುಬಿಟ್ಟು ಊಟಮಾಡಿಸಿದರೆ ಬಂದ ಬೀಗರು ಸಂತೃಪ್ತಿ ಹೊಂದುತ್ತಾರೆ.

ಮಾಂಸಹಾರ :

ಕೊಟ್ಟೂರು ಗ್ರಾಮದಲ್ಲಿ ಶೇ ೫೦ ರಷ್ಟು ಜನ ಮಾಂಸಹಾರಿಗಳಿದ್ದಾರೆ. ಇವರು ಹೆಚ್ಚಾಗಿ ಮಾಂಸಹಾರವನ್ನು ಸೇವಿಸುತ್ತಾರೆ. ಹರಿಜನ, ವಾಲ್ಮೀಕಿ, ಮುಸ್ಲಿಂ, ಕುರುಬ, ಛಲವಾದಿ, ಅಗಸ, ಉಪ್ಪಾರ, ರೆಡ್ಡಿ, ಕೊರಚ, ಕೋರಮ, ಚಮ್ಮಾರ, ಸಮಗಾರ ಇತ್ಯಾದಿ ಜನಾಂಗದವರು ಮಾಂಸಾಹಾರವನ್ನು ಬಳಸುತ್ತಾರೆ. ಈ ರೀತಿಯ ಮಾಂಸಾಹಾರಗಳಲ್ಲಿ ಕುರಿಮಾಂಸ, ಕೋಳಿಮಾಂಸ, ದನದ ಮಾಂಸ, ಹಂದಿಮಾಂಸ ಹಾಗೂ ಮೀನು,

ಮೊಲ, ಮೇಕೆ ಮುಂತಾದ ಪ್ರಾಣಿಗಳನ್ನು ಬಳಸಿ ಮಾಂಸಾಹಾರವನ್ನು ತಯಾರಿಸಿ ತಿನ್ನುತ್ತಾರೆ. ಮೀನಿನಿಂದ ಹುಳಿ, ಒಣ ಮೀನಿನ ಚಟ್ನಿ, ಮಟನ್ ಬಿರ್ಯಾನಿ, ಚಿಕನ್ ಬಿರ್ಯಾನಿ ಮಾಡಿ ಸೇವಿಸುವುದು ಇಲ್ಲಿ ವಿಶೇಷವಾಗಿದೆ.

ರುಚಿಗಳು :

ಊಟದ ಜೊತೆಯಲ್ಲಿ ರುಚಿಯನ್ನು ಬಳಸುವುದು ಕೊಟ್ಟೂರು ಗ್ರಾಮದ ಜನತೆಯ ವಿಶೇಷ. ಇಲ್ಲಿ ರುಚಿ ಎಂದರೆ ಪಲ್ಯ, ಉಪ್ಪಿನಕಾಯಿ, ಚಟ್ನಿ, ಪುಡಿ, ಹಪ್ಪಳ, ಸಚಿಡಿಗೆ, ಈರುಳ್ಳಿ, ಸೌತೆಕಾಯಿ ಇತ್ಯಾದಿ ವಿವಿಧ ಕಾಯಿಫಲ್ಯಗಳನ್ನು ಊಟದ ಜೊತೆಯಲ್ಲಿ ಬಳಸುವುದುಂಟು ಈ ಗ್ರಾಮದಲ್ಲಿ ಇವುಗಳಿಗೆ ಜೋಡು (ಸೈಡ್ಸ್) ಎಂದು ಕರೆಯುವುದು ವಿಶೇಷ.

ಪಾನೀಯಗಳು :

ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿರುವ ಕೊಟ್ಟೂರು ಗ್ರಾಮದ ಜನತೆಯೂ ಪಾನಿಯಗಳನ್ನು ಬಳಸುತ್ತಾರೆ. ಇಲ್ಲಿ ಪಾನಿಯಗಳಲ್ಲಿ ಸಿಹಿ ಪಾನೀಯಗಳು ಮತ್ತು ಮಾದಕ ಪಾನಿಯಗಳು ಎಂದು ಎರಡು ರೀತಿಯಾಗಿ ಗುರುತಿಸಬಹುದು. ಸಿಹಿ ಪಾನಿಯಗಳಲ್ಲಿ ಷರಬತ್‌ಗಳು, ನಿಂಬೆಹಣ್ಣು ಷರಬತ್ತು, ಫೈನಾಫಲ್ ಜ್ಯೂಸ್ ಇತರೆ ಜ್ಯೂಸ್‌ಗಳನ್ನು ಸಹ ತಯಾರಿಸುತ್ತಾರೆ.

ಇಲ್ಲಿ ಮಾದಕ ಪಾನಿಯಗಳಲ್ಲಿ ಮುಖ್ಯವಾಗಿ ಬ್ರಾಂಡಿ, ವಿಸ್ಕಿ, ರಮ್, ಬೀಯರ್, ಎಂ.ಸಿ, ತ್ರಿಬೆಲ್‌ಎಕ್ಸ್ ಮುಂತಾದವುಗಳನ್ನು ಬಳಸುವುದು ಸಹಜವಾಗಿದೆ. ಕೊಟ್ಟೂರಿನಲ್ಲಿ ಸುಮಾರು ೧೦ ಮಾದಕ ಪಾನಿಯಗಳ ಅಂಗಡಿಗಳು ಇವೆ. ಇವುಗಳ ಬಳಕೆಯು ಕೂಡ ಅಷ್ಟೇ ವ್ಯಾಪಕವಾಗಿ ನಡೆದಿದೆ. ದಣಿವಾರಿಸಲು, ಪ್ರತಿಷ್ಠೆಗಾಗಿ, ಚಿಂತೆಕಳೆಯಲು, ಚಟಕ್ಕಾಗಿ ಇವುಗಳನ್ನು ಬಳಸುತ್ತೇವೆ ಎಂಬುದು ಇಲ್ಲಿನ ಜನರ ಹೇಳಿಕೆಯಾಗಿದೆ.

ಉಡುಗೆ-ತೊಡುಗೆಗಳು :

ಹಿರಿಯ ಪುರುಷರು ಸಾಂಪ್ರದಾಯಿಕವಾಗಿ ಧೋತ್ರ ಉಟ್ಟು ಮೇಲೆ ಅಂಗಿ ಹಾಕಿಕೊಳ್ಳುತ್ತಾರೆ. ಮೈಯಂಗಿ, ಚಡ್ಡಿ, ನಿಕ್ಕಾರ ಇವು ಒಳ ಉಡುಪುಗಳು, ಹೆಣ್ಣುಮಕ್ಕಳು ಸೀರೆಯುಟ್ಟು ಕುಪ್ಪಸ ಅಥವಾ ಜಾಕೀಟ್ ತೊಡುತ್ತಾರೆ. ಇವು ನಿತ್ಯದ ಉಡುಗೆಗಳು.

ಅಲ್ಲದೆ ಯುವಕ-ಯುವತಿಯರು ಪ್ಯಾಂಟ್, ಷರ್ಟ್, ಜೀನ್ಸ್ ಪ್ಯಾಂಟ್, ಚೂಡಿದಾರ ಮುಂತಾದ ಆಧುನಿಕ ಉಡುಪುಗಳನ್ನು ಬಳಸುವುದು ಸಹಜವಾಗಿದೆ.

ವಿಶೇಷ ಸಂದರ್ಭಗಳಲ್ಲಿ ಪುರುಷರು ಒಳ್ಳೆಯ ಪ್ಯಾಂಟ್, ಷರ್ಟ್ ಹಾಗೂ ಧೋತ್ರ ಉಟ್ಟು ಕೊಳ್ಳುತ್ತಾರೆ. ಹೆಣ್ಣು ಮಕ್ಕಳು ರೇಷ್ಮೆ ಸೀರೆಯನ್ನು ಉಡುತ್ತಾರೆ. ಇವರು ತಮ್ಮ ಮದುವೆ ಸೀರೆ ಉಡುವುದು ವರ್ಷದಲ್ಲಿ ಒಂದೆರಡುಬಾರಿ ಮಾತ್ರ. ತಮ್ಮ ಮನೆಯಲ್ಲಿನ ವಿಶೇಷ ಸಂದರ್ಭಗಳಲ್ಲಿ ಹಾಗೂ ಊರಿನ ಕಾರ್ತಿಕೋತ್ಸವ, ರಥೋತ್ಸವ ಮುಂತಾದ ಆಚರಣೆಗಳಲ್ಲಿ ಮಾತ್ರ ಹೊರ ಬರುತ್ತವೆ. ಉಳಿದಂತೆ ಆ ಸೀರೆಗಳು ಅವರ ಖಾಸ ಟ್ರಂಕ್ ಅಥವಾ ಗಾಡ್ರೇಜ್‌ಗಳಲ್ಲಿ ಭದ್ರವಾಗಿ ಇರಿಸಲಾಗುತ್ತದೆ.

ಆಭರಣಗಳ ವಿಷಯದಲ್ಲಿ ಹೆಣ್ಣು ಮಕ್ಕಳದೇ ಮೇಲುಗೈ. ಚೈನು, ಗಟಾಯಿಸಿದ ಮಂಗಳ ಸೂತ್ರ, ಚಪ್ಲಹಾರ, ನಕ್ಲೆಸ್ಸು, ಓಲೆ, ಬೆಚಿಡೋಲೆ, ಬುಗುಡಿ ಇತ್ಯಾದಿಗಳು ಹೆಚ್ಚಾಗಿವೆ. ಈಗ ಬಂಗಾರ ಬಳೆಯ ಮೋಹ ಬೆಳೆಯುತ್ತಿದೆ. ಜೊತೆಗೆ ಪುರುಷರಂತೆ ಸ್ತ್ರೀಯರು ಸಹ ಬೆರಳುಂಗುರ ಬಳಸುವುದು ಸಹಜವಾಗಿದೆ. ಪುರುಷರಿಗೆ ಮುಂಗೈವಾಚ್ ಆಭರಣವೆಂಬಂತೆ ಮನಸೆಳೆದಿದೆ. ಅದು ಬೇಕೆ ಬೇಕೆಂಬ ಹಟ ಯುವಕರಿಗೆ, ಕೊರಳಿಗೊಂದು ಚೈನು ಇದ್ದರೂ ನಡೆಯುತ್ತದೆ. ಇರದಿದ್ದರೂ ನಡೆಯುತ್ತದೆ.

ಹೀಗೆ ಕೊಟ್ಟೂರು ಗ್ರಾಮದಲ್ಲಿ **'ಕುಟುಂಬ'** ವ್ಯವಸ್ಥೆ ಮುಖ್ಯಪಾತ್ರವನ್ನು ವಹಿಸುತ್ತದೆ. ಇದು ಮನುಷ್ಯನಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುತ್ತದೆ. ಕೊಟ್ಟೂರು ಗ್ರಾಮದಲ್ಲಿ ಪಿತೃಪ್ರಧಾನವಾದ ಕುಟುಂಬ ಪದ್ದತಿಯು ಸಹಜವಾಗಿದೆ. ಅವಿಭಕ್ತ ಕುಟುಂಬಗಳು ಈಗ ಹೆಚ್ಚು ಇಲ್ಲ. ಕೊಟ್ಟೂರಿನಲ್ಲಿರುವ ಬಹಳಷ್ಟು ಮನೆಗಳು ವಿಭಕ್ತ ಕುಟುಂಬಗಳೇ. ಕುಟುಂಬವು ಅನೇಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದು ಅವುಗಲ್ಲಿ ಮಕ್ಕಳನ್ನು ಪಡೆಯುವುದು ಮಕ್ಕಳನ್ನು ಪಾಲಿಸುವುದು ಹಾಗೂ ಸಮಾಜದಲ್ಲಿ ಮಕ್ಕಳಿಗೆ ನಿರ್ದಿಷ್ಟಸ್ಥಾನ ಕಲ್ಪಿಸುವುದು ಆಸಕ್ತರನ್ನು ಪಾಲಿಸುವುದು ಸಹಕಾರದಿಂದ ಅವುಗಳನ್ನು ಬೆಳೆಸುವುದು, ಶಿಕ್ಷಣವನ್ನು ಕೊಡಿಸುವುದು, ಕೆಲಸವನ್ನು ಹಂಚಿಕೊಡುವುದು, ಹಣ ಸಂಪಾದನೆ ಆಸ್ತಿಯನ್ನು ಸಂರಕ್ಷಿಸಿಸುವುದು ಕುಟುಂಬವು ವಹಿಸುವ ಮುಖ್ಯ ಪಾತ್ರವಾಗಿದೆ.

ಬ. ಉದ್ಯೋಗ ವ್ಯವಸ್ಥೆ :

ಕೊಟ್ಟೂರಿನ ಉದ್ಯೋಗ ವ್ಯವಸ್ಥೆಯನ್ನು ಮುಖ್ಯವಾಗಿ ಮೂರು ವಿಧವಾಗಿ ನೋಡಬಹುದು.

೧. ವ್ಯಾಪಾರ.

೨. ಕೈಗಾರಿಕ ಕೆಲಸ

೩. ಒಕ್ಕಲುತನ.

೧. ವ್ಯಾಪಾರ :

ಕೊಟ್ಟೂರು ಎಂದೊಡನೆ ನೆನಪಾಗುವುದು ಇಲ್ಲಿನ ಜನರ ಬಾಯಲ್ಲಿ ನೀರೂರಿಸುವ ಬಿಸಿ ಬಿಸಿ ಮಿರ್ಚಿ. ಇಲ್ಲಿ ಹೆಜ್ಜೆಗೊಂದರಂತೆ ಸಿಗುವ ಮಿರ್ಚಿ ಹೋಟೆಲ್‌ಗಳು ಜನರ ಜಿಹ್ವಾಚಪಲತೆಯನ್ನು ತಣಿಸುವ, ಜಠರಾಗ್ನಿಯನ್ನು ತೃಪ್ತಿಪಡಿಸುವುದರ ಜೊತೆಗೆ ಸಾವಿರಾರು ಜನರಿಗೆ ಉದ್ಯೋಗ ಒದಗಿಸಿವೆ. ಇಲ್ಲಿ ಸುಮಾರು ೧೫೦ ಹೋಟೆಲ್‌ಗಳಿದ್ದು ಪ್ರತಿನಿತ್ಯ ಕನಿಷ್ಠ ೫೦ ಚೀಲ ಮಂಡಕ್ಕಿ, ಮೂರು ಕ್ವಿಂಟಲ್ ಹಸಿಮೆಣಸಿನಕಾಯಿ, ೫ ಕ್ವಿಂಟಲ್ ಕಡಲೆಬೇಳೆ ಹಿಟ್ಟು, ೨-೩ ಬ್ಯಾರೆಲ್ ಎಣ್ಣೆ ಕರ್ಚಾಗುತ್ತದೆ ಎಂದರೆ ಇಲ್ಲಿನ ಲಕ್ಷಾಂತರ ರೂಪಾಯಿಗಳ ವ್ಯಾಪಾರದ ಚಿತ್ರಣ ದೊರೆಯಬಹುದು. ಇವುಗಳ ಜೊತೆಗೆ ಸಣ್ಣ ಪುಟ್ಟ ಡಬ್ಬಗಳು ಪಾನ್‌ಷಾಪ್‌ಗಳು ಹಾಗೂ ಟೀ ಸ್ಟಾಲ್‌ಗಳು ಮುಖ್ಯವಾಗಿ ಕಂಡು ಬರುತ್ತವೆ. ಹೀಗಾಗಿ ಇಲ್ಲಿನ ಜನರ ಮುಖ್ಯ ಉದ್ಯೋಗವು ವ್ಯಾಪಾರ ವೆಂಬುದು ವಿಶೇಷತೆಯನ್ನು ಪಡೆದುಕೊಳ್ಳುತ್ತದೆ.

೨. ಕೈಗಾರಿಕಾ ಕೆಲಸ :

ಕೊಟ್ಟೂರು ನೇಯ್ಗೆ ಭಾರತದಲ್ಲಿಯೇ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿನ ಹತ್ತಿ ಬಟ್ಟೆಗಳಿಂದ ನೇಯ್ದ ಲುಂಗಿ, ಟವಲ್ ಹಾಗೂ ಸೀರೆಗಳು ಬೇರೆ ರಾಜ್ಯಗಳಲ್ಲಿ ಮಾರಾಟವಾಗುತ್ತವೆ. ಇವುಗಳ ಪ್ರಭಾವ ವಿದ್ದುದರಿಂದಲೇ ಇಲ್ಲಿ ಹತ್ತಿ ಜಿನ್ನುಗಳು ಸ್ಥಾಪನೆ ಆಗಿರುವುದು. ಸುಮಾರು ೫೦೦ ವರ್ಷದ ಇತಿಹಾಸವಿರುವ ನೇಯ್ಗೆ ಕೆಲಸ ಚಮತ್ಕಾರದಿಂದ ನಡೆದಿದೆ. ಈ ಕಾರಣಕ್ಕಾಗಿ ೧೯೦೫ ರಲ್ಲಿ ಬ್ರಿಟೀಷ್ ಸರಕಾರ ಸರಕು

ಸಾಗಣೆ ಮಾಡಲು ಕೊಟ್ಟೂರಿಗೆ ರೈಲು ಮಾರ್ಗ ಸ್ಥಾಪಿಸಿತು. ಹೀಗಾಗಿ ಇಲ್ಲಿನ ಜನರಲ್ಲಿ ಶೇ ೩೭ ರಷ್ಟು ಜನರು ನೇಯ್ಗೆ ಕೆಲಸದಲ್ಲಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲದೇ ಸಣ್ಣ ಕೈಗಾರಿಕೆಗಳಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ ಬ್ರಿಟೀಷ್ ಆಡಳಿತದಲ್ಲಿ ತೀವ್ರವಾಗಿ ಪ್ರಾರಂಭಗೊಂಡ ಉದ್ದಿಮೆಗಳು ನಂತರ ಅಷ್ಟಾಗಿ ಬೆಳವಣಿಗೆ ಕಾಣದೆ ಇರುವುದು ಇಲ್ಲಿನ ವಿಷಾದನೀಯ ಸಂಗತಿಯಾಗಿದೆ. ಇಲ್ಲಿ ೧ ಕಾಟನ್ ಸ್ಪಿನ್ನಿಂಗ್ ಮಿಲ್, ೨ ಪ್ರಸ್ಸಿಂಗ್ ಮಿಲ್, ೧೦ ಜೆನ್ನಿಂಗ್ ಮತ್ತು ಡಿಕಾರ್ಟಿಕೇಟರ್‌ಗಳು, ೮–೧೦ ಶೇಂಗಾ ಡಿಕಾರ್ಟಿಕೇಟರ್‌ಗಳು, ೫–೬ ಸಾಮಿಲ್‌ಗಳು ಇವೆ. ಮೊದಲಿದ್ದ ಕೆಲವು ಕಾಟನ್ ಮತ್ತು ಶೇಂಗಾ ಎಣ್ಣೆ ಮಿಲ್‌ಗಳು ಮುಚ್ಚಿ ಹೋಗಿವೆ. ಹೀಗೆ ಕೊಟ್ಟೂರಿನಲ್ಲಿ ಶೇ ೧೦ ರಷ್ಟು ಜನರು ಇಂತಹ ಕೈಗಾರಿಕೆಗಳಲ್ಲಿ ದುಡಿದು ಜೀವನ ಸಾಗಿಸುತ್ತಿದ್ದಾರೆ.


೩. ಒಕ್ಕಲುತನ :

ಕೊಟ್ಟೂರಿನಲ್ಲಿ ಈ ಒಕ್ಕಲುತನವು ಉದ್ಯೋಗದ ದೃಷ್ಟಿಯಿಂದ ಮೂರನೇ ಸ್ಥಾನವನ್ನು ಪಡೆಯುತ್ತಿದೆ. ಏಕೆಂದರೆ ನಗರೀಕರಣ ಪ್ರಭಾವದಿಂದ ಕೊಟ್ಟೂರು ಒಂದು ವಾಣಿಜ್ಯ ಹಾಗೂ ಶೈಕ್ಷಣಿಕ ಕೇಂದ್ರವಾಗಿ ಮಾರ್ಪಟ್ಟಿದೆ. ಇಲ್ಲಿ ಒಕ್ಕಲುತನವನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು.

೧. ಒಣವ್ಯವಸಾಯ

೨. ನೀರಾವರಿ ವ್ಯವಸಾಯ

ಈ ಎರಡು ಬಗೆಯ ವ್ಯವಸಾಯಕ್ಕೆ ಸಂಬಂಧಪಡುವ ಜಮೀನು ಈ ಕೊಟ್ಟೂರಿನಲ್ಲಿದೆ. ಒಣಬೇಸಾಯದ ಕೃಷಿ ವರ್ಷದಲ್ಲಿ ಮುಂಗಾರಿ ಮತ್ತು ಹಿಂಗಾರಿ ಎಂದು ಎರಡು ಅವಧಿಗಳಿವೆ. ನೀರಾವರಿ ಜಮೀನಿನಲ್ಲಿ ಮುಂಗಾರಿ ಹಿಂಗಾರಿಯ ಪ್ರಶ್ನೆ ಬರುವುದಿಲ್ಲ. ಮುಂಗಾರಿಯ ಬೆಳೆಗಳನ್ನು ಹಿಂಗಾರಿಯಲ್ಲಿಯೂ, ಹಿಂಗಾರಿಯ ಬೆಳೆಗಳನ್ನು ಮುಂಗಾರಿಯಲ್ಲಿಯೂ ಬೆಳೆಯಬಹುದುಂಟು. ಅವರು ವರ್ಷಕ್ಕೆ ಮೂರು ಬೆಳೆಗಳನ್ನು ತೆಗೆಯ ಬಹುದು. ಮೇಲಿನ ವಿವರಣೆಯನ್ನು ಕೆಳಗಿನಂತೆ ರೇಖಾ ಚಿತ್ರದ ಮೂಲಕ ತೋರಿಸಲಾಗಿದೆ.



ಇಲ್ಲಿ ಒಕ್ಕಲು ತನವನ್ನು ಮುಖ್ಯವಾಗಿ ಒಣಬೇಸಾಯ ಕ್ರಮದಲ್ಲಿ ಹೆಚ್ಚು ಮಾಡುವುದುಂಟು. ಏಕೆಂದರೆ ಇಲ್ಲಿ ಯಾವುದೇ ರೀತಿಯ ನೀರಾವರಿ ಸೌಲಭ್ಯ ಇಲ್ಲ.

ಮುಂಗಾರು : (ಒಣಬೇಸಾಯ)

ಮಾರ್ಚ್ ತಿಂಗಳಿಂದ ಅಂದರೆ ಬೇಸಿಗೆಯಲ್ಲಿ ಕೋಲಿ(ಕಾಸಗಿ, ಸೆದೆ) ಆರಿಸುವುದು ಹಾಗೂ ತಿಪ್ಪೆಗೊಬ್ಬರವನ್ನು ಹೊಲಕ್ಕೆ ಹಾಕುವುದರ ಮೂಲಕ ಮುಂಗಾರು ಅವಧಿಯ ಕೆಲಸಗಳು ಆರಂಭವಾಗುತ್ತವೆ.

ಗೊಬ್ಬರ ಹಾಕುವುದು :

ವರ್ಷದುದ್ದಕ್ಕೂ ತಿಪ್ಪೆಯಲ್ಲಿ ಸಂಗ್ರಹಗೊಂಡ ಗೊಬ್ಬರವನ್ನು ಚಕ್ಕಡಿಗಾಡಿ ಅಥವಾ ಟ್ರಾಕ್ಟರ್‌ಗಳಲ್ಲಿ ತುಂಬಿ ಹೊಲಕ್ಕೊಯ್ದು ಅಲ್ಲಲ್ಲಿ ಗುಂಪಿ ಹಾಕಲಾಗುತ್ತದೆ. ಕೆಲ ದಿನಗಳ ತರುವಾಯ ಈ ಗುಂಪಿಗಳನ್ನು ಒಡೆದು ಗೊಬ್ಬರವನ್ನು ಹೊಲದ ತುಂಬಾ ಹರಡಲಾಗುತ್ತದೆ.

ಉಳುಮೆ :

ಭೂಮಿಯನ್ನು ಶೂನ್ಯವೇಳೆಯಲ್ಲಿ ಉಳುಮೆ ಮಾಡುವುದ, ಹರಗುವುದು ಇವು ಒಂದಾದ ಮೇಲೆ ಒಂದರಂತೆ ನಡೆಯುತ್ತವೆ. ಸಾಮಾನ್ಯವಾಗಿ ರೋಹಿಣಿ ಮಳೆಗೆ ಮೊದಲು ಹೊಲ ಹದವಾಗಿರುತ್ತದೆ. ಬೇಸಿಗೆಯ ಗಳೆ ಸಂದರ್ಭದಲ್ಲಿಯೇ ಮಧ್ಯಾಹ್ನದ ಮೇಲೆ ರೈತರು ಮನೆಯ ಮುಂದೆ ತಮ್ಮ ಕೃಷಿಗೆ ಬೇಕಾದ ಉಪಕರಣಗಳನ್ನು,

ಹಗ್ಗಗಳನ್ನು ತಯಾರಿಸಿಕೊಳ್ಳಲು ಮಧ್ಯಾಹ್ನದ ಈ ಬಿಡುವಿನ ವೇಳೆಯೇ ಯೋಗ್ಯವಾದುದು.

ಬಿತ್ತನೆ :

ಮುಂಗಾರಿಯ ಬಿತ್ತನೆ ಸಾಮಾನ್ಯವಾಗಿ ಇಲ್ಲಿ ರೋಹಿಣಿ ಮಳೆಯಿಂದ ಪ್ರಾರಂಭಗೊಳ್ಳುತ್ತದೆ. ರೋಹಿಣಿಮಳೆಗೆ ಸ್ವಲ್ಪಮುಂಚೆ ಬೇಕಾಗುವ ಬೀಜದ ವ್ಯವಸ್ಥೆಯನ್ನು ರೈತರು ಮಾಡಿಕೊಳ್ಳುತ್ತಾರೆ. ಶೇಂಗಾ ಬಿತ್ತ ಬೇಕೆಂಬುವವರು ಮನೆಯಲ್ಲಿಯ ಅಥವಾ ಮಿಲ್ಲುಗಳಿಂದ ಶೇಂಗಾ ಬೀಜ ಖರೀದಿ ಮಾಡಿಕೊಳ್ಳುತ್ತಾರೆ. ಮುಂಗಾರಿ ಬಿತ್ತನೆಗೆ ಮೊದಲ ಕೂರಿಗೆ ಪೂಜೆಯಾಗುತ್ತದೆ. ಪ್ರಾರಂಭದಲ್ಲಿ ಏನೆ ಬಿತ್ತಲಿ ಆ ಬೀಜದಲ್ಲಿ ಒಂದಿಷ್ಟು ಜೋಳದ ಕಾಳು ಬೆರಸ ಬೇಕೆಂಬುದು ಇಲ್ಲಿಯ ಒಂದು ನಂಬಿಕೆ. ಕೊಟ್ಟೂರಿನಲ್ಲಿ ಬಣಕಾರ ಮನೆತನದವರು ಬಿತ್ತಿದ ಮೇಲೆಯೇ ಬಿತ್ತಬೇಕು ಎಂಬುದು ಒಂದು ಸಂಪ್ರದಾಯ ಇದು ವಿಶೇಷವಾಗಿ ಕಂಡುಬರುತ್ತದೆ.

ಬಿತ್ತನೆಯ ನಂತರ ಎಡೆಹಾಕುವುದು, ಕಳೆತೆಗೆಯುವುದು ಹಾಗೂ ಸರ್ಕಾರಿ ಗೊಬ್ಬರ ಹಾಕುವುದು ಮುಖ್ಯ ಕೆಲಸವಾಗಿರುತ್ತದೆ. ಬೆಳೆಯು ಬೆಳೆದುನಿಂತ ಬಳಿಕ ಕಟಾವು ಮಾಡಿ ರಸ್ತೆಗಳಲ್ಲಿ ಇಲ್ಲವೇ ಮಿಷನ್‌ಗಳಲ್ಲಿ ಹಾಕಿಸಿ ಕಾಳು ತೆಗೆದು ಶೇಖರಣೆ ಮಾಡುವ ವಿಧಾನ ಜಾರಿಯಲ್ಲಿದೆ.

ಹಿಂಗಾರಿ :

ಹಿಂಗಾರಿಯ ಅವಧಿ ಸಾಮಾನ್ಯವಾಗಿ ಜುಲೈ ಇಲ್ಲವೆ ಆಗಸ್ಟ್ ತಿಂಗಳಲ್ಲಿ ಬರುತ್ತದೆ. ಅಂದರೆ ಮಾಘ (ಮಗಿ) ಮಳೆಯಿಂದ ಆರಂಭವಾಗುತ್ತದೆ. ಹಿಂಗಾರಿಯ ಭೂಮಿ ಉಳುಮೆ ಮುಂಗಾರಿ ಅವಧಿಯೊಂದಿಗೆ ಆಗಿದ್ದರೂ ಈಗ ಮತ್ತೊಮ್ಮೆ ಹೊಲಗಳನ್ನು ಹರಗಿ ಹಸನು ಮಾಡಿಕೊಳ್ಳುವುದುಂಟು. ಮಗಿ ಮಳೆಗೆ ಮುಖ್ಯವಾಗಿ ಸಣ್ಣ ಹತ್ತಿ, ಬಿಳಿಜೋಳ, ನವಣೆ, ಕಡಲೇ ಇತ್ಯಾದಿ ಬೆಳೆಗಳನ್ನು ಬೆಳೆಯುವ ಬೀಜಗಳನ್ನು ಬಿತ್ತಲಾಗುತ್ತದೆ. ಹಿಂಗಾರಿಯ ಇನ್ನೋಂದು ಮುಖ್ಯಬೆಳೆ ಗೋಧಿ. ಎರಿ, ಸಣ್ಣೆರಿ

ಜಮೀನಿದ್ದವರು ಹತ್ತಿ, ಬಿಳಿಜೋಳ ಬಿತ್ತಿದರೆ, ಉತ್ತಮ ಎರಿ ಜಮೀನಿದ್ದವರು ಗೋಧಿ ಬಿತ್ತಿಕೊಳ್ಳುತ್ತಾರೆ. ಉತ್ತಮ ಎರಿಯ ಭೂಮಿಯ ಪ್ರಮಾಣ ಕೊಟ್ಟೂರಿನಲ್ಲಿ ಕಡಿಮೆ.

ಕೊಟ್ಟೂರಿನಲ್ಲಿ ಹಿಂಗಾರಿ ಬೆಳೆಗಳಲ್ಲಿ ಹತ್ತಿ ಮತ್ತು ನೆಲಗಡಲೆ ಪ್ರಮುಖವಾದವು. ಯಾವ ಕುತ್ತಿಗೂ ಸಿಗದೆ ಹತ್ತಿ ಒಡೆಯುತ್ತ ಹೋದರೆ ಯುಗಾದಿ ದವನದ ಹುಣ್ಣಿಮೆಯವರೆಗೂ ಹತ್ತಿ ಬಿಡಿಸಿಕೊಳ್ಳಬಹುದು. ಹತ್ತಿಯನ್ನು ಮೂರು ಕಂತಾಗಿ ಉಡಿಕಟ್ಟಿ ಬಿಡಿಸಿ ಕೊಳ್ಳಬೇಕಾಗುತ್ತದೆ. ಮೊದಲನೆ ಕಂತು ಕಣ್ಣಿ ಬೀಡು ಎನಿಸಿದರೆ, ಎರಡನೆಯದು ಮರಿಬೀಡು, ಕೊನೆಯದು ಕಡೆಬೀಡು ಆಮೇಲೆ ಬಿಡಿಸಿಕೊಳ್ಳುವ ಹತ್ತಿ ಸಾಮಾನ್ಯವಾಗಿ ಸ್ವಚ್ಚವಿರುವುದಿಲ್ಲ. ಇದು ಹಾಳತ್ತಿ ಎನಿಸಿಕೊಳ್ಳುತ್ತದೆ.

ಹೀಗೆ ಹಿಂಗಾರಿಯ ರಾಶಿಗಳೆಲ್ಲ ಮುಗಿದು ಕಣದಲ್ಲಿಯ ಮೇಟಿ ಕೀಳುವುದರೊಂದಿಗೆ ಹತ್ತಿ ಕಟ್ಟಿಗೆ ತಂದು ದಡ್ಡಿಯಲ್ಲಿ ಒಟ್ಟಿಕೊಳ್ಳುವುದರೊಂದಿಗೆ ಹಿಂಗಾರಿ ಅವಧಿಯ ಕೃಷಿ ಕೆಲಸಗಳು ಮುಕ್ತಾಯ ವಾಗುತ್ತವೆ.

ನೀರಾವರಿ :

ಕೊಟ್ಟೂರು ಕ್ಷೇತ್ರದಲ್ಲಿ ನೀರಾವರಿ ಸೌಲಭ್ಯ ಅತಿವಿರಳ. ಕಾರಣ ಅಲ್ಲಿನ ದೊಡ್ಡದಾದ ಒಂದು ಕೆರೆ ಹೂಳು ತುಂಬಿ ಹೋಗಿದೆ. ಹಾಗಾಗಿ ನೀರಾವರಿ ಸೌಲಭ್ಯದಿಂದ ವಂಚಿತವಾಗಿದೆ. ಅಲ್ಲದೆ ಹೊಲಗಳಲ್ಲಿ ಯಾರೊಬ್ಬರು ಸಹ ಕೊಳವೆಬಾವಿಗಳನ್ನು ಹಾಕಿಸುವ ದೃಢನಿರ್ಧಾರ ಕೈಗೊಂಡಿಲ್ಲ. ಈ ಕಾರಣದಿಂದಾಗಿ ಇಲ್ಲಿ ಕೇವಲ ಮಳೆಯಾಶ್ರಿತವಾಗಿ ಬಿತ್ತನೆ ನಡೆಯುತ್ತದೆ. ಮಳೆ ಇಲ್ಲದಿದ್ದರೆ ಬೆಳೆಇಲ್ಲ.

ಕರೆ ತುಂಬಿದ ವರ್ಷದಲ್ಲಿ ಮಾತ್ರ ಅಲ್ಪಸ್ವಲ್ಪ ಗದ್ದೆಗಳಲ್ಲಿ ಭತ್ತದ ನಾಟಿ ಮಾಡಿ ಬೆಳೆಯನ್ನು ತೆಗೆಯಲಾಗುತ್ತದೆ. ಅದು ಬಿಟ್ಟರೆ ಕೇವಲ ಖುಷ್ಕಿ ಆಧಾರಿತವೇ ವ್ಯವಸಾಯ.

ಒಟ್ಟಾರೆಯಾಗಿ ಆಧುನಿಕತೆ ಕಾಲಿಟ್ಟಂತೆ ಕೃಷಿಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಉಳುಮೆಗೆ ಟ್ರ್ಯಾಕ್ಟರ್, ಸರಕಾರಿ ಗೊಬ್ಬರ, ಸಂಸ್ಕರಣಗೊಂಡ ಬೀಜ, ರಾಶಿ ಮಶಿನ್ನು ಇವೆಲ್ಲ ಆಧುನಿಕ ಕೊಡುಗೆಗಳಾಗಿ ಎಲ್ಲಾ ಕಡೆಯಂತೆ ಕೊಟ್ಟೂರಿನಲ್ಲಿಯೂ ಹೊಸ ಗಾಳಿಬೀಸಿದೆ.

ಕ. ವರ್ಣವ್ಯವಸ್ಥೆ :

ಜಾತಿಪದ್ಧತಿಯು ಇಡೀ ನಾಡಿನಾದ್ಯಂತ ಕಂಡು ಬರುವ ವ್ಯವಸ್ಥೆಯಾಗಿದೆ. ಈ ಜಾತಿವ್ಯವಸ್ಥೆಯಲ್ಲಿ ಮೇಲ್ವರ್ಗದವರು ಹಾಗೂ ಕೆಲವರ್ಗದವರು ಎಂದು ಕಂಡುಬರುತ್ತಾರೆ. ಬ್ರಾಹ್ಮಣರಾಗಿ ಹುಟ್ಟಿದವರು ಹೆಚ್ಚಿನ ಸ್ಥಾನವನ್ನು ಪಡೆದು ಕೊಳ್ಳುತ್ತಾರೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಂತಹ ವ್ಯವಸ್ಥೆಯಾಗಿದೆ.

ಕೊಟ್ಟೂರು ಗ್ರಾಮ ದೊಡ್ಡದಾಗಿರುವುದರಿಂದ ಇಲ್ಲಿ ಹೆಚ್ಚಿನ ಜಾತಿವ್ಯವಸ್ಥೆ ಕಂಡು ಬರುತ್ತದೆ. ಇಲ್ಲಿ ಸೌಹಾರ್ಧತೆಗೆ ಅವಕಾಶವಿಲ್ಲ. ಹಿಂದೆ ವೃತ್ತಿ, ಮಡಿ, ಮೈಲಿಗೆ, ಆಹಾರದ ನಿಯಮವಳಿಗೆ ಜಾತಿ ಸೀಮಿತವಾಗಿತ್ತು. ಈಗಲೂ ಈ ವ್ಯವಸ್ಥೆ ಇದ್ದರೂ ಕಡಿಮೆ ಪ್ರಮಾಣದಲ್ಲಿ ಗುರುತಿಸಬಹುದಾಗಿದೆ. ಈ ಜಾತಿ ವ್ಯವಸ್ಥೆಯನ್ನು ಈ ಗ್ರಾಮದಲ್ಲಿ ನಡೆಯುವ ಜಾತ್ರೆ–ಉತ್ಸವಗಳಲ್ಲಿ ಹೆಚ್ಚಾಗಿ ಗುರುತಿಸಬಹುದಾಗಿದೆ. ಸಮಾಜದ ರಚನಾ ಸ್ವರೂಪವನ್ನು ಗಮನಿಸಿದಂತೆ ಉದ್ಯೋಗ ವರ್ಣಗಳೆರಡೂ ತಳುಕು ಹಾಕಿಕೊಂಡಿವೆ ಆದ್ದರಿಂದ ವರ್ಣ ವ್ಯವಸ್ಥೆ ಎಂಬುದನ್ನು ಕೃಷಿಕರು ಮತ್ತು ಕೃಷಿಕರನ್ನವಲಂಬಿಸಿದವರು ಎಂದು ಎರಡು ಗುಂಪಾಗಿ ವಿಂಗಡಿಸಿಕೊಂಡು ಅಭ್ಯಾಸಿಸುವುದು ವಿಹಿತವೆನಿಸುತ್ತದೆ.

ಕೃಷಿಕರು :

ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡವರಲ್ಲಿ ಲಿಂಗಾಯಿತ ಮತ್ತು ವಾಲ್ಮೀಕಿ ಸಮುದಾಯದವರು ತೀರಗೆರೆ ಕೊರೆದಂತೆ ಇವರೆಲ್ಲ ಒಕ್ಕಲುತನವನ್ನು ಮಾಡುತ್ತಾರೆಂದು ಹೇಳಲಾಗುವುದಿಲ್ಲ. ವ್ಯಾಪಾರ, ಕುರಿಸಾಕಾಣಿಕೆ ಮುಂತಾಗಿ ಅನ್ಯ ಉದ್ಯೋಗಗಳನ್ನು ಕೆಲವರು ಮಾಡಿದರು. ಈ ಜಾತಿಯ ಬಹುಮಂದಿಯ ಉದ್ಯೋಗ ಒಕ್ಕಲು ತನವೆಂಬುದನ್ನು ಗಮನಿಸಬೇಕು. ಕೃಷಿಯನ್ನವಲಂಬಿಸಿರುವ ಇವರು ಸಹಜವಾಗಿ ತಾವು ಬೆಳೆದಿರುವ ದವಸ ಧಾನ್ಯಗಳನ್ನು ಮತ್ತು ಮೇವನ್ನು ಇತರ ಜಾತಿಯವರಿಗೆ ಕೊಟ್ಟು ತಮ್ಮ ಕೃಷಿ ಜೀವನಕ್ಕೆ ಬೇಕಾಗುವ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಾರೆ. ವಾಣಿಜ್ಯ ವೃತ್ತಿಯನ್ನು ಮಾಡುವವರು ಇವರಿಗಿಂತ ಶ್ರೀಮಂತರಿರಬಹುದು. ಅದು ವ್ಯವಹಾರ ಮುಖ. ಇಲ್ಲಿ ಮುಖ್ಯವೆನಿಸುವುದು ಪರಂಪರಾಗತವಾಗಿ ಹರಿದು ಬಂದಿರುವ ಗ್ರಾಮ

ಸಂಘಟನೆ. ಈ ಸಹಕಾರ ಸಂಘಟನೆಗಳಿಂದಾಗಿಯೇ ಇಡೀ ಗ್ರಾಮ ಒಂದು ಘಟಕವಾಗಿ ತೋರುತ್ತದೆ. ಇಲ್ಲಿ ಸಂಶೋಧನಾ ದೃಷ್ಟಿಯಿಂದ ವಿವರಣಾತ್ಮಕ ರೀತಿಯನ್ನು ಮುಖ್ಯವಾಗಿ ನೋಡಬೇಕಾಗುತ್ತದೆ. ಒಂದೊಂದು ಮತದವರ ಮಾಹಿತಿಗಾಗಿ ಆಯಾ ಮತದವರ ಸಂದರ್ಶನಗಳನ್ನೇ ಮುಂದು ಮಾಡಿಕೊಂಡು ವಿವರಿಸಲಾಗಿದೆ.

ಲಿಂಗಾಯತರು :

ಕೊಟ್ಟೂರಿನಲ್ಲಿ ಲಿಂಗಾಯಿತರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಅಂದರೆ ಕನಿಷ್ಠ ೬೦-೭೦ ರಷ್ಟು ಇರಬಹುದು ಇವರಲ್ಲಿ ಅನೇಕ ಪಂಗಡಗಳು ಇವೆ.

೧. ಶೀಲವಂತ ಬಣಜಿಗರು.

೨. ಪಂಚಮ ಸಾಲಿಯವರು.

೩. ಸಾದರ ಲಿಂಗಾಯಿತರು.

೪. ಲೋಕ ಬಳಕಿಯವರು.

ಈ ನಾಲ್ಕು ಪಂಗಡಗಳಲ್ಲಿ ಒಳ ಸಂಬಂಧಗಳು ಬೆಳೆದಿಲ್ಲ. ಆದರೆ ಆಧುನಿಕತೆಯ ಪ್ರಭಾವದಿಂದ ಅಲ್ಲಲ್ಲಿ ಸಂಬಂಧಗಳು ಕಾಣಸಿಗುತ್ತವೆ. ಇವರಲ್ಲಿ ಪ್ರಮುಖವಾಗಿ ಹಬ್ಬಗಳು, ಕಾರ್ಯಕ್ರಮಗಳು, ಉತ್ಸವಗಳು ಮುಂತಾದವುಗಳ ಆಚರಣೆಗಳು ಒಂದೇ ತೆರನಾಗಿರುತ್ತವೆ. ಆದರೆ ಮದುವೆ ವಿಷಯದಲ್ಲಿ ಆಯಾ ವರ್ಗದವರು ತಮ್ಮ ಪಂಗಡಗಳಲ್ಲಿ ವಿವಾಹವಾಗುತ್ತಾರೆ. ಇವರಲ್ಲಿ ಮಗು ಹುಟ್ಟಿದ ಶಾಸ್ತ್ರವನ್ನು ೧೩ನೇ ದಿನಕ್ಕೆ ಹೆಸರು ನಾಮಕರಣ ಮಾಡುತ್ತಾರೆ. ಈ ಸಂದರ್ಭದಲ್ಲಿ ಕೂಸಿಗೆ ಅತ್ತೆಯಾದವಳನ್ನು ಕರೆಯಿಸಲಾಗುತ್ತದೆ. ಮೊದಲ ನಾಮಕರಣ ಸ್ವಾಮಿಗಳು, ತರುವಾಯ ಅತ್ತೆ ನಾಮಕರಣ ಮಾಡುತ್ತಾಳೆ. ಹೆಸರಿಡುವ ಹೊತ್ತಿಗೆ ಓಣಿಯ ಹೆಣ್ಣು ಮಕ್ಕಳನ್ನು ಕರೆಯುವುದು ವಾಡಿಕೆ ಅತ್ತೆ ಕೂಸಿನ ಕಿವಿಯಲ್ಲಿ ಹೆಸರು ಊದುತ್ತಿರುವಂತೆ ಸುತ್ತ ನಿಂತವರು ಅವಳ ಬೆನ್ನ ಬಾರಿಸುತ್ತಾರೆ. ಅತ್ತೆ ಸಂಬಂಧಿಕರಾದ ಮತ್ತೆ ಕೆಲವರು ಕೂಸಿಗೆ ಹೆಸರಿಡಬಹುದು. ಗುಗ್ಗರಿ ಕಚ್ಚುವುದು ಈ ಸಂದರ್ಭದ ವಿಶೇಷತೆ. ಹೆಸರಿಟ್ಟಮೇಲೆ ಬಂದವರಿಗೆಲ್ಲ ಗುಗ್ಗರಿ ಹಂಚಲಾಗುತ್ತದೆ.

ಇತ್ತೀಚೆಗೆ ಮದುವೆಯಂಥ ಸಂದರ್ಭಗಳ ಎಷ್ಟೋ ಕಣ್ಮರೆಯಾಗಿವೆ. ಮತ್ತು ಬದಲಾಗಿವೆ. ಮುಂಚೆ ಇವೆಲ್ಲಾ ಹೇಗೆ ಸಾಗಬೇಕೆಂಬ ಕಟ್ಟು ಪಾಡುಗಳಿದ್ದವು ಈಗ ಯಾರು ಅಷ್ಟೊಂದು ತೀವ್ರವಾಗಿ ಪರಿಗಣಿಸುವುದಿಲ್ಲ ಇವರಲ್ಲಿ ಶವವನ್ನು ಹೂಳುವ ಪದ್ದತಿ ಇದೆ. ಇಲ್ಲಿರುವ ನಾಲ್ಕು ಜನಾಂಗ ಲಿಂಗಾಯಿತರಲ್ಲಿ ಮೂವ್ವರು ಬಣಜಿಗರು ಸ್ವಾಮಿಗಳನ್ನು ಕರೆಯಿಸಿಕೊಳ್ಳುವಲ್ಲಿ ಯಾವುದೇ ಬೇಧ ಭಾವವಿಲ್ಲ. ಜನನ, ಮದುವೆ, ಮರಣಗಳಂತಹ ಸಂದರ್ಭದಲ್ಲಿ ಸ್ವಾಮಿಗಳನ್ನು ಕರೆಸುತ್ತಾರೆ ಹಾಗೂ ವೀರಶೈವರಲ್ಲಿ ಸ್ವಲ್ಪ ಭಿನ್ನತೆಗಳು ಕಂಡು ಬರುತ್ತವೆ. ಆದರೆ ಇವರ ದೇವರುಗಳು ಬಹುತೇಕ ಎಲ್ಲಾ ಒಂದೇ ಯಾಗಿವೆ. ಕೊಟ್ಟೂರೇಶ್ವರ, ಮರುಳಸಿದ್ದೇಶ್ವರ, ವೀರಭದ್ರ, ಬಸವೇಶ್ವರ ಇವೆಲ್ಲವು ಇವರ ಮನೆದೇವರುಗಳೆಂದು ಹೇಳಬಹುದು. ಇಲ್ಲಿಯ ಲಿಂಗವಂತರ ಮುಖ್ಯ ಉದ್ಯೋಗ ಒಕ್ಕಲುತನ ಮತ್ತೆ ಕೆಲವರು ವ್ಯಾಪಾರವನ್ನು ಮುಖ್ಯ ಉದ್ಯೋಗವನ್ನಾಗಿ ಮಾಡುತ್ತಾರೆ.

ಪರಿಶಿಷ್ಟ ಜಾತಿಯವರು :

ಕೊಟ್ಟೂರಿನಲ್ಲಿ ಶೇ.೩೦ ರಷ್ಟು ಜನ ಇವರಿದ್ದಾರೆ. ಇವರಲ್ಲಿ ಸಂಪ್ರದಾಯಗಳು, ಆಚರಣೆಗಳು ಇನ್ನೂ ಅಚ್ಚಳಿಯದೆ ಉಳಿದುಕೊಂಡು ಬಂದಿವೆ. ಲಿಂಗಾಯಿತರಂತೆ ಮಗುವಿನ ನಾಮಕರಣ ಆಚರಣೆಗಳು ಒಂದೇ ರೀತಿಯಾಗಿ ಕಂಡುಬರುತ್ತವೆ. ಇವರಲ್ಲಿ ಸುಮಾರು ೧೮ ಒಳಪಂಗಡಗಳಿವೆ (ಬೆಡಗು) ಈ ಒಳಪಂಗಡಗಳಲ್ಲಿ ಒಂದು ಪಂಗಡದವ ಮತ್ತೊಂದು ಪಂಗಡದವರೊಂದಿಗೆ ಸಂಬಂಧವನ್ನು ಬೆಳೆಸುತ್ತಾರೆ. ಆದರೆ ಒಂದೇ ರೀತಿಯ ಪಂಗಡದಲ್ಲಿ ಮದುವೆಯಂತ ಸಂಬಂಧವನ್ನು ಬೆಳಿಸುವುದಿಲ್ಲ. ಇವರಲ್ಲಿ ಮದುವೆಯು ಬಹಳ ಸಂಪ್ರದಾಯ ಬದ್ಧವಾಗಿ ನಡೆಯುತ್ತದೆ. ಅಲ್ಲದೆ ನಿಜವಾಗಿ ಕನ್ನಡ ಭಾಷೆ ಇನ್ನೂ ಜೀವಂತವಾಗಿದೆ ಎಂದರೆ ಇವರಲ್ಲಿ ಮಾತ್ರ. ಕೆಲವೊಂದು ಧಾರ್ಮಿಕ ಆಚರಣೆಗಳು ಈ ದಿನಮಾನದಲ್ಲಿ ಮಹಳಷ್ಟು ಬದಲಾವಣೆಗಳಾಗಿವೆ. ಇವರಲ್ಲಿ ಮೂಲತಃ ಬಹಳಷ್ಟುಜನ ಅನಕ್ಷರಸ್ತರಿದ್ದರು. ಆದರೆ ಇಂದಿನ ದಿನ ಪ್ರತಿಯೊಂದು ಮನೆಯಲ್ಲೂ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಹಾಗಾಗಿ ಇವರಲ್ಲಿ ಕೆಲವರು ಉಪನ್ಯಾಸಕರು, ಶಿಕ್ಷಕರು, ಪೊಲೀಸ್

ಮುಂತಾದ ಉದ್ಯೋಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತೀರಿಕೊಂಡ ಕಳೇಬರವನ್ನು ಉಗಿಯುತ್ತಾರೆ. ಮತ್ತು ಸುಡುತ್ತಾರೆ. ಇವರಲ್ಲಿ ಮುಖ್ಯ ಉದ್ಯೋಗ (ಎ.ಪಿ.ಎಂ.ಸಿ.) ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ, ಮಿಲ್‌ಗಳಲ್ಲಿ ಕೂಲಿ ಕಾರ್ಮಿಕ ವೃತ್ತಿಯಾಗಿದೆ ಹಾಗೂ ಕೆಲವೊಬ್ಬರು ಸ್ವಂತ ವೃತ್ತಿಯಲ್ಲಿಯೂ ಇದ್ದಾರೆ.

ವಾಲ್ಮೀಕಿ ಜನಾಂಗ :

ಕೊಟ್ಟೂರಿನಲ್ಲಿ ಇವರ ಜನಾಂಗ ಶೇ ೧೫ ರಷ್ಟಿದೆ. ಇವರಲ್ಲಿ ಮುಖ್ಯವಾಗಿ ಎರಡು ಪಂಗಡಗಳಿವೆ. ಊರ ಬೇಡ ಮತ್ತು ಮ್ಯಾಸಬೇಡ. ಈ ಎರಡು ಪಂಗಡಗಳಲ್ಲಿ ವೈವಾಹಿಕ ಸಂಬಂಧವಿಲ್ಲ. ಆದರೆ ಎಲ್ಲಾ ಆಚರಣೆ ಕಾರ್ಯಕ್ರಮಗಳಲ್ಲಿ ಕೂಡಿ ಮಾಡುತ್ತಾರೆ. ಇವರಲ್ಲಿ ಬೇಟೆಯಾಡುವ ಪದ್ಧತಿ ಕಡಿಮೆಯಾಗಿ ಉದ್ಯೋಗದಕಡೆ ತಮ್ಮ ಒಲವನ್ನು ಹರಿಸಿದ್ದಾರೆ. ಕೆಲವರಿಗೆ ಭೂಮಿ ಇದೆ. ಇನ್ನು ಕೆಲವರು ಬೇರೆ ಬೇರೆ ಉದ್ಯೋಗವನ್ನು ಮಾಡತೊಡಗಿದ್ದಾರೆ.

ಇವರ ಮನೆದೇವರುಗಳು ಬೇರೆ ಬೇರೆಯಾಗಿರುತ್ತವೆ. ಊರಿನ ಆರಾಧ್ಯದೈವವಾದ ಶ್ರೀಗುರು ಕೊಟ್ಟೂರೇಶ್ವರ, ತಿಪ್ಪೇಸ್ವಾಮಿ, ಕಂಪ್ಲೆಪ್ಪ, ಗೋಣಿಬಸವೇಶ್ವರ, ನುಂಕಮಲೆ ನುಂಕೇಶ್ವರ, ಆಂಜನೇಯ ಹಾಗೂ ಜರಮಲೆ ದುರುಗಮ್ಮ, ಉಚ್ಚೆಂಗೆಮ್ಮ, ಎಲ್ಲಮ್ಮ ಇತ್ಯಾದಿ ದೇವರುಗಳು ಇವರ ಮನೆದೇವರುಗಳು. ಮದುವೆಯಂಥ ಮಂಗಳ ಕಾರ್ಯಗಳಲ್ಲಿ ಸಾಮಾಜಿಕ ಸಹಕಾರ ವಿಶೇಷವಾಗಿರುತ್ತದೆ. ಹೆಣ್ಣು-ಗಂಡು ಖಾಯಂ ಮಾಡುವಾಗ ಸಮಾಜದ ಪ್ರಮುಖರು ಕೂಡಿದ ಸಮಯದಲ್ಲಿ ಒಂದಿಷ್ಟು ಹಣವನ್ನು **'ದೈವದ ಹಣ'** ಎಂದು ಕೊಡಲಾಗುವುದು. ಇಲ್ಲಿ ದೈವ ಎಂದರೆ ಸಮಾಜ ಎಂದರ್ಥ. ಕೂಡಿದ ಸಮಾಜ ಭಾಂದವರು ದೇವರಿಗೆ ಸಮಾನರೆನಿಸುತ್ತಾರೆ. ಈ ಹಣ ಸಮಾಜಕ್ಕೆ ಸಲ್ಲುವ ಮರ್ಯಾದೆ ಇಂಥ ಯಾವುದೇ ಕಾರ್ಯಕ್ರಮವಿರಲಿ ಸಮಾಜಕ್ಕೆ ಒಂದು ಪಾಲು ಹೋಗುತ್ತದೆ. ಮದುವೆಗಿಂತ ಮೊದಲು ಹಿರಿಯರನ್ನು ಮಾಡುವುದು ಅಂದರೆ ತಮ್ಮ ಮನೆಯ ಹಿರಿಯರು ಮರಣ ಹೊಂದಿದವರ ಸ್ಮರಣೆಯೊಂದಿಗೆ ಮಾಂಸದ ಅಡಿಗೆ ಹೋತ, ಮೇಕೆ, ಕುರಿಗಳನ್ನು ಕೊಯ್ಯುವುದುಂಟು. ಮದುವೆ ಸಮಾರಂಭಕ್ಕೆ

ವೀರಶೈವ ಜಂಗಮರನ್ನು ಕರೆತರುವುದುಂಟು. ಸುರಗಿ ಪದ್ಧತಿ ಇದೆ. ಮೊದಲೆಲ್ಲ ಮೂರು ದಿನಗಳ ಮದುವೆ ಪದ್ದತಿ ಇತ್ತು. ಕ್ರಮೇಣ ಸಂಕ್ಷಿಪ್ತಗೊಳ್ಳುತ್ತಾ ನಡೆದಿದೆ. ಅಕ್ಕಿಕಾಳು ಮತ್ತು ಜೋಳದಕಾಳು ಎರಡನ್ನು ಸೇರಿಸಿ ಅಕ್ಷತೆಯನ್ನು (ಅಕ್ಕಿಕಾಳು) ತಯಾರಿಸಲಾಗುತ್ತದೆ.

ಮದುವೆಯಲ್ಲಿ ತಮ್ಮ ತಮ್ಮ ಶಕ್ತಾನುಸಾರ ಜನರಿಗೆ ಊಟಕ್ಕೆ ಮಾಡಿಸಲಾಗುವುದು. ಈ ಸಮಾಜದಲ್ಲಿ ತೀರಿಕೊಂಡಾಗ ಊಳುವ ಪದ್ದತಿ ಇದೆ. ಸಾಮಾನ್ಯವಾಗಿ ತೀರಿಕೊಂಡ ಮೂರನೆ ದಿನಕ್ಕೆ **'ಇಸಬಾಯಿ'** ತೊಳೆಸುವ ಕಾರ್ಯಕ್ರಮ ಇರುತ್ತದೆ. ತೀರಿಕೊಂಡ ವ್ಯಕ್ತಿಗೆ ತೆಲೆಕೊಡುವವನೊಬ್ಬನಿರುತ್ತಾನೆ. ಈತನ ತಲೆಬೋಳಿಸಿ ಹೊಸಬಟ್ಟೆ ತೊಡಿಸಿ ಊಟ ಮಾಡಿಸಲಾಗುತ್ತದೆ. ತೀರಿಕೊಂಡವರ ಮನೆಯಲ್ಲಿ ತಿಂಗಳೊಳಗಾಗಿ ಸಿಹಿ ಅಡಿಗೆ ಮಾಡಿ ತಿಥಿ ಮಾಡಲಾಗುತ್ತದೆ. ಬಹಳಷ್ಟು ಜಾತಿಗಳಲ್ಲಿರುವ ಈ ಆಚರಣೆ ಕೊಟ್ಟೂರು ವಾಲ್ಮೀಕಿ ಜನಾಂಗದವರಲ್ಲೂ ಇದೆ. ತೀರಿಕೊಂಡ ದಿನ ಹೆಣದ ಮಣ್ಣಿಗೆ ಬರುವವರು ತೆಂಗಿನಕಾಯಿ, ಊದಿನಬತ್ತಿ, ಊವಿನಮಾಲೆ ತರುತ್ತಾರೆ. ಈ ರೀತಿಯ ಆಚಾರಣೆ ಸಂಪ್ರದಾಯಗಳನ್ನು ಉಳಿಸಿ ಕೊಂಡಿರುವುದು ವಿಶೇಷವಾಗಿದೆ.

ಈ ಮೇಲಿನ ಪ್ರಮುಖ ಜಾತಿಗಳಲ್ಲದೆ ಇನ್ನೂ ಕೆಲ ಜಾತಿಗಳು ಕೊಟ್ಟೂರು ಗ್ರಾಮದಲ್ಲಿ ಕಂಡುಬರುತ್ತವೆ. ಅವುಗಳೆಂದರೆ ಬಡಿಗರು, ಕಂಬಾರರು, ಚಮಗಾರ, ಸಮಗಾರ, ಅಗಸ, ಕುರುಬ, ಕ್ಷೌರಿಕ, ನೇಕಾರ, ಮುಸಲ್ಮಾನ, ಕೊರವ, ವಡ್ಡ, ಬ್ರಾಹ್ಮಣ ಹಾಗೂ ಹೈನೋರು ಇವೆಲ್ಲ ಜಾತಿಗಳು ಇಲ್ಲಿ ಪ್ರಮುಖವಾಗಿ ತಮ್ಮತಮ್ಮ ಆಚರಣೆ ಸಂಪ್ರದಾಯಗಳನ್ನು ಆಚರಿಸುತ್ತಾ ಬಂದಿವೆ. ಅಲ್ಲದೆ ಇಲ್ಲಿ ಶೆಟ್ಟರು, ಅಕ್ಕಸಾಲಿಗರು, ಜೈನ ಮತ್ತು ಮಾರವಾಡಿ ಜನಾಂಗದವರು ಸಹ ಕಂಡು ಬರುತ್ತಾರೆ. ಇವರು ಮುಖ್ಯವಾಗಿ ತಮ್ಮ ಉದ್ಯೋಗವನ್ನು ವ್ಯಾಪಾರವಾಗಿ ಕಂಡುಕೊಂಡಿದ್ದಾರೆ.

ಒಟ್ಟಿನಲ್ಲಿ ಸುಮಾರು ೨೧ ಜನಪದ ವರ್ಗಗಳು ಕೊಟ್ಟೂರು ಗ್ರಾಮದಲ್ಲಿ ಅನುವಂಶಿಕ ವೃತ್ತಿಯಲ್ಲಿಯೇ ನಿರತರಾಗಿರುವುದು ಕಂಡುಬಂದರು ಅವುಗಳಿಂದ

ಮುಕ್ತಿಪಡೆದು ಆಧುನಿಕ ವೃತ್ತಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಹೆಚ್ಚೆನ್ನಬೇಕು. ಅಂದರೆ ಕಾಳುಕಡಿ ಹಣ್ಣು, ತರಕಾರಿ, ಕಿರಾಣಿ, ಪಾನಬೀಡ, ಹೋಟೆಲ್ ವ್ಯಾಪಾರ ಇತ್ಯಾದಿ ವೃತ್ತಿಯನ್ನಾಗಿ ಅವಲಂಭಿಸಿದ್ದಾರೆ. ಆದರೆ ಇಂದು ಯಾವುದೆ ವೃತ್ತಿಇರಲಿ ನಿಷ್ಠೆಯಿಂದ ಕೆಲಸಮಾಡಿ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ.

೩:೨ ಆರ್ಥಿಕ ವ್ಯವಸ್ಥೆ :

ಯಾವುದೇ ಸಮಾಜದ ಆರ್ಥವ್ಯವಸ್ಥೆಯ ಅಧ್ಯಯನ ಅದು ನಾಗರೀಕತೆಯ ಯಾವ ಹಂತದಲ್ಲಿದೆ ಎಂಬುದರ ಸೂಚನೆಯೂ ಆಗಬಲ್ಲದು. ಕಾಲಾನುಗತವಾಗಿ ಮನುಷ್ಯ ಕೈಗೊಂಡ ಅನೇಕ ವಿಧವಾದ ವೃತ್ತಿ-ಉಪವೃತ್ತಿಗಳು ಬದುಕಿಗೆ ಅಗತ್ಯವಾದ ಅರ್ಥ ಸಂಪಾದನೆಯ ಗುರಿ ಕೇಂದ್ರವಾಗಿದ್ದು, ಜಾನಪದದ ಹಲವು ಮುಖಗಳು ಅರಳಲು ಕಾರಣವಾಗಿವೆ. ನಮ್ಮ ಜಾನಪದ ಅಧ್ಯಯನಕ್ಕೆ ಮೂಲಾಧಾರವಾದ ವೃತ್ತಿಗಳ ಆರ್ಥಿಕ ಸ್ಥಿತಿಗತಿ ಅವರ ಪಾರಂಪರಿಕ ಕಲೆ-ಸಂಪ್ರದಾಯ ಮೊದಲಾದ ಜನಪದ ಬದುಕಿನ ಉಳಿವು ಅಳಿವಿನ ನಿರ್ಧಾರತೆ ಅಂಶವು ಆಗುವುದರಿಂದ ಕೊಟ್ಟೂರಿನ ಅರ್ಥವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ಗಮನಿಸ ಬೇಕಾಗುತ್ತದೆ.

ಕೊಟ್ಟೂರಿನ ಜನ ಹೆಚ್ಚು ವ್ಯಾಪಾರಿಗಳು, ಕಡಿಮೆ ಕೃಷಿಕರು, ಕಾರ್ಮಿಕರು. ಅದರಲ್ಲೂ ಮಳೆಯನ್ನೆ ನಂಬಿ ಬದುಕುವವರ ಸಂಖ್ಯೆ ಬಹಳ ಕಡಿಮೆ. ಏಕೆಂದರೆ ಇಲ್ಲಿನ ಬಹುಪಾಲು ಜನರಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಉದ್ಯೋಗವನ್ನು ಸೃಷ್ಟಿಸಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೊಟ್ಟೂರು : ಸಂಕ್ಷಿಪ್ತ ವರದಿ.

ಸ್ಥಾಪನೆ :

ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಡಿಯಲ್ಲಿ ಕೊಟ್ಟೂರು ಉಪಮಾರುಕಟ್ಟೆಯಾಗಿ ೧೯೫೧ರಲ್ಲಿ ಸ್ಥಾಪನೆಗೊಂಡು ದಿನಾಂಕ ೧೨-೧೧-೧೯೭೩ ರಂದು ಬಳ್ಳಾರಿ ಮಾರುಕಟ್ಟೆ ಸಮಿತಿಯಿಂದ ವಿಭಜನೆಗೊಂಡು ಹರಪನಹಳ್ಳಿ ಉಪಮಾರುಕಟ್ಟೆ ಒಳಗೊಂಡು ಸ್ವತಂತ್ರ ಮಾರುಕಟ್ಟೆಯಾಗಿ ಅಸ್ತಿತ್ವಕ್ಕೆ ಬಂದಿತು.

ತದನಂತರ ದಿನಾಂಕ ೧೫-೧೧-೧೯೯೭ ರಂದು ಕೊಟ್ಟೂರು ಮಾರುಕಟ್ಟೆ ಸಮಿತಿಯಿಂದ ಹರಪನಹಳ್ಳಿ ಉಪ ಮಾರುಕಟ್ಟೆ ವಿಭಜನೆ ಹೊಂದಿ ಕೊಟ್ಟೂರು ಸ್ವತಂತ್ರ ಮಾರುಕಟ್ಟೆಯಾಗಿ ಕಾರ್ಯ ನಿರ್ವಹಿಸುತ್ತದೆ.

ಮಾರುಕಟ್ಟೆ ಕ್ಷೇತ್ರ :

ಕೊಟ್ಟೂರು ಮಾರುಕಟ್ಟೆ ಸಮಿತಿಯ ಕ್ಷೇತ್ರವು ಇಡೀ ಕೂಡ್ಲಿಗಿ ಕಂದಾಯ ತಾಲೂಕನ್ನು ಒಳಗೊಂಡಿರುತ್ತದೆ.

ಮಾರುಕಟ್ಟೆ ಹಾಗೂ ಉಪಮಾರುಕಟ್ಟೆಗಳು :

ಪ್ರಧಾನ ಮಾರುಕಟ್ಟೆ ಕೊಟ್ಟೂರು ಆಗಿದ್ದು, ಕೊಟ್ಟೂರಿನಲ್ಲಿ ೧೯.೫೪ ಎಕರೆ ವಿಸ್ತೀರ್ಣದ ಮಾರುಕಟ್ಟೆ ಪ್ರಾಂಗಣವನ್ನು ಹೊಂದಿರುತ್ತದೆ. ಸಮಿತಿಯು ಕೂಡ್ಲಿಗಿ ಹಾಗೂ ಚಿಕ್ಕಜೋಗಿಹಳ್ಳಿ ಎಂಬ ಎರಡು ಉಪ ಮಾರುಕಟ್ಟೆಗಳನ್ನು ಹೊಂದಿದ್ದು ಕೂಡ್ಲಿಗಿಯಲ್ಲಿ ೭.೬೧ ಎಕರೆ ವಿಸ್ತೀರ್ಣದ ಹಾಗೂ ಚಿಕ್ಕ ಜೋಗಿಹಳ್ಳಿಯಲ್ಲಿ ೯.೪೨ ಎಕರೆ ವಿಸ್ತೀರ್ಣದ ಉಪಮಾರುಕಟ್ಟೆ ಪ್ರಾಂಗಣಗಳನ್ನು ಹೊಂದಿರುತ್ತದೆ.

ಮಾರುಕಟ್ಟೆ ಸಮಿತಿ ರಚನೆ :

ಚುನಾಯಿತ ಸಮಿತಿಯು ದಿನಾಂಕ ೩-೦೯-೨೦೦೧ ರಂದು ಅಸ್ತಿತ್ವಕ್ಕೆ ಬಂದು ದಿನಾಂಕ ೩-೧೦-೨೦೦೧ ರಿಂದ ತನ್ನ ಕಾರ್ಯ ನಿರ್ವಹಿಸುತ್ತದೆ. ಕರ್ನಾಟಕ ಸರ್ಕಾರವು ತನ್ನ ಅಧಿಸೂಚನೆ ಸಂ:ಸ.ಹಿ.೪೧: ಎಂ.ಆರ್.ಇ : ೨೦೦೨ ದಿನಾಂಕ ೨೦-೦೩-೨೦೦೨ ರಲ್ಲಿ ಸಮಿತಿಗೆ ೪ಜನ ಸದಸ್ಯರನ್ನು ನಾಮ ನಿರ್ದೇಶನ ಮಾಡಿರುತ್ತದೆ.

ಕ್ರಮ ಪಡಿಸಿದ ಹುಟ್ಟುವಳಿಗಳು :

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಗಂ.ಇ.೧೨೭: ಎಂ.ಆರ್.ಇ/೨೦೦೧. ದಿನಾಂಕ : ೨೯-೧೦-೨೦೦೧ ರಲ್ಲಿ ಒಟ್ಟು ೧೧೩ ವಿವಿಧ ಕೃಷಿ ಉತ್ಪನ್ನಗಳನ್ನು ನಿಯಂತ್ರಣ ಕಕ್ಷೆಯಲ್ಲಿ ತಂದಿದ್ದು ಅವುಗಳ ಪೈಕಿ ಪ್ರಾಂಗಣಕ್ಕೆ ಮುಖ್ಯವಾಗಿ ಅವಕವಾಗುವ ಹುಟ್ಟುವಳಿಗಳೆಂದರೆ, ಹತ್ತಿ, ಶೇಂಗಾ, ಸೂರ್ಯಕಾಂತಿ, ಮೆಕ್ಕೆಜೋಳ, ಎಳ್ಳು ಇತ್ಯಾದಿ.

ಮಾರಾಟ ಪದ್ಧತಿ :

ಹತ್ತಿ ಶೇಂಗಾ ಸೂರ್ಯಕಾಂತಿ, ಮೆಕ್ಕೆಜೋಳ ಹಾಗೂ ಎಳ್ಳು ಇವು ಟೆಂಡರ್ ಪದ್ದತಿ ಮೂಲಕ ಮಾರಾಟ ಮಾಡಲಾಗುತ್ತದೆ. ಇನ್ನುಳಿದ ಕ್ರಮ ಪಡಿಸಿದ ಹುಟ್ಟುವಳಿಗಳ ವ್ಯವಹಾರವು ಪರಸ್ಪರ ಒಪ್ಪಂದದ ಮೇರೆಗೆ ನಡೆಯುತ್ತವೆ.

ಪೇಟೆಯ ಕಾರ್ಯಕರ್ತರು :

ಪ್ರಸಕ್ತ ಸಾಲಿನಲ್ಲಿ ಸಮಿತಿಯ ಲೈಸನ್ಸ್ ಪಡೆದ ೫೬ ಜನ ದಲ್ಲಾಲರು ಹಾಗೂ ೮೦ ಜನ ಖರೀದಿದಾರರು ಕ್ರಮಪಡಿಸಿದ ಹುಟ್ಟುವಳಿಗಳ ವ್ಯವಹಾರ ಮಾಡುತ್ತಿದ್ದಾರೆ. ವಿವಿಧ ಪೇಟೆಕಾರ್ಯಕರ್ತರ ವಿವರ ತೋರಿಸುವ ತಃಖ್ತೆ ಲಗತ್ತಿಸಲಾಗಿದೆ.

ಕೊಟ್ಟೂರು ಮುಖ್ಯ ಮಾರುಕಟ್ಟೆಯಲ್ಲಿ ಗುರುತಿಸಿದ ನಿವೇಶನಗಳ ವಿವರಗಳು :

ಕ್ರ ಸಂ.	ವಿವರ	ಅಳತೆ	ಗುರುತಿಸಿದ ನಿವೇಶನಗಳ ಸಂಖ್ಯೆ	ವಿತರಿಸಲಾದ ನಿವೇಶನಗಳ ಸಂಖ್ಯೆ
೧.	ಎ.ವರ್ಗದ ನಿವೇಶನಗಳು	೩೧x೧೦೧	೧೫	೧೫
		೪೦x೧೦೧	೦೨	೦೨
		೫೦x೧೦೧	೦೧	೦೧
೨.	ಬಿ.ವರ್ಗದನಿವೇಶನಗಳು	೩೧X ೭೫	೧೩	೧೩
೩.	ಸಿ.ವರ್ಗದ ನಿವೇಶನಗಳು	೨೧X ೬೧	೧೬	೧೬
೪.	ಡಿ.ವರ್ಗದ ನಿವೇಶನಗಳು	೩೦X೧೨೫	೧೬	೧೬
೫.	ಇ.ವರ್ಗದ ನಿವೇಶನಗಳು	೩೦ X ೫೦	೦೬	೦೬
೬.	ಎಫ್‌ವರ್ಗದನಿವೇಶನಗಳು	೪೧ X ೯೯	೧೬	೧೪
೭.	ಜಿ.ವರ್ಗದ ನಿವೇಶನಗಳು	೪೧X ೮೨	೦೮	೦೮
	ಒಟ್ಟು		೯೩	೯೧

ಸಮಿತಿ ಹೊಂದಿರುವ ಗೋದಾಮುಗಳ ವಿವರ :

	ಕ್ರಮಸಂಖ್ಯೆ	ಸಾಮರ್ಥ್ಯ
೧. ಕೇಂದ್ರ ಧನ ಸಹಾಯದಡಿ ನಿರ್ಮಾಣ	೧	೮೦೦ ಮೆಟ್ರಿಕ್ ಟನ್
೨. ಎಸ್.ಎಫ್.ಡಿ.ಎ.ಗೋದಾಮು	೧	೧೫೦೦ ಮೆಟ್ರಿಕ್ ಟನ್
೩. ಎನ್.ಜಿ.ಆರ್.ಜಿ.ಗೋದಾಮು	೨	೪೦೦ ಮೆಟ್ರಿಕ್ ಟನ್ (ಪ್ರತಿಯೊಂದು)
೪. ಸಮಿತಿ ನಿರ್ಮಿಸಿದ ಗೋದಾಮು	೩	೧೦೦ ಮೆಟ್ರಿಕ್ ಟನ್ (ಪ್ರತಿಯೊಂದು)

ರೈತ ಸಂಜೀವಿನಿ ಯೋಜನೆ :

ಸದರಿ ಯೋಜನೆಯು ೧೯೯೬-೯೭ನೇ ಸಾಲಿನಿಂದ ಜರಿಯಲ್ಲಿದ್ದು ಇಲ್ಲಿಯವರೆಗೆ ೫೫ ಪ್ರಕರಣಗಳು ದಾಖಲಾಗಿವೆ. ಅದರಲ್ಲಿ ೨೭ ಪ್ರಕರಣಗಳು ದಾಖಲಾತಿ ಒದಗಿಸುವ ಸಂಬಂಧ ಪತ್ರ ವ್ಯವಹಾರದಲ್ಲಿರುತ್ತವೆ. ಒಟ್ಟು ೨೮ ಪ್ರಕರಣಗಳಿಗೆ ರೂ ೫೭.೮೦೦/- ಪರಿಹಾರ ಧನ ವಿತರಿಸಲಾಗಿದೆ.

ಒಟ್ಟಾರೆಯಾಗಿ ಈ ಮಾರುಕಟ್ಟೆ ಸಮಿತಿಯು ರೈತರು ಬೆಳೆದ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗುವಂತೆ ಅವಿರತ ಪ್ರಯತ್ನ ಮಾಡಲಿದೆ. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಶಾಸನ ೧೯೬೬ರ ಹಾಗೂ ನಿಯಮ ೧೯೬೮ರ ಚೌಕಟ್ಟಿನೊಳಗೆ ನಿಯಂತ್ರಣ ಉದ್ದೇಶ ಸಫಲತೆಗಾಗಿ ಸೂಕ್ತ ಕ್ರಮ ಕೈಗೊಳ್ಳುತ್ತ ಬರುತ್ತಲಿದೆ. ಇಲಾಖೆಯ ಮೇಲಾಧಿಕಾರಿಗಳು ಸಮಿತಿಗೆ ಆಗಿಂದ್ದಾಗ್ಗೆ ಸಂದರ್ಶನ ನೀಡಿ ಸಲಹೆ ಮತ್ತು ಸೂಚನೆಗಳನ್ನು ನೀಡಿ ಸಮಿತಿಯ ಕಾರ್ಯ ಚಟುವಟಿಕೆಗಳ ಬಗ್ಗೆ ತೃಪ್ತಿ ವ್ಯಕ್ತ ಪಡಿಸಿರುವರು.

ಈ ಊರಿನಲ್ಲಿ ಕೃಷಿಗೆ ಸಂಬಂಧಿಸಿದ ಕೆಲವರನ್ನು ಬಿಟ್ಟರೆ ಇತರ ಉದ್ಯೋಗಿಗಳಲ್ಲಿ ಸರ್ಕಾರಿ ನೌಕರರು ಗಮನಾರ್ಹರಾಗುತ್ತಾರೆ. ಕೊಟ್ಟೂರಿನಲ್ಲಿ ಈಗಲೂ ಇರುವವರು ಉದ್ಯೋಗ, ಕುಟುಂಬ ಮೊದಲಾದ ಕಾರಣಗಳಿಗಾಗಿ ಬೇರೆಕಡೆ

ಇರುವವರು ಇವರೆನ್ನೆಲ್ಲಾ ಗಮನಿಸಿ ಹೇಳುವುದಾದರೆ ಇವರಲ್ಲಿ ಆಫೀಸ್ ಜವಾನರಿಂದ ವಿಶ್ವವಿದ್ಯಾನಿಲಯದ ಪ್ರೋಫೆಸರ್ ವರೆಗೆ, ಡಾಕ್ಟರ್, ಇಂಜಿನಿಯರ್, ವಕೀಲರು, ಶಿಕ್ಷಕರು, ಛಾಯಗ್ರಾಹಕರು, ಗುಮಾಸ್ತರು, ಪೊಲೀಸ್, ಮಿಲಿಟರಿ, ಕಾರ್ಖಾನೆ ನೌಕರ, ಅಧಿಕಾರಿ ಈ ಮೊದಲಾದ ಹುದ್ದೆಗಳಲ್ಲಿದ್ದಾರೆ. ಇವರಲ್ಲಿ ಶಿಕ್ಷಕರದೇ ಮೇಲುಗೈ. ಇವರಲ್ಲದೆ ಖಾಸಗಿ ವಲಯಗಳಲ್ಲಿ ದುಡಿಯುತ್ತಿರುವವರು ಕಂಡಕ್ಟರ್, ಡ್ರೈವರ್, ಮನೆಗೆಲಸ ಈ ಮೊದಲಾದ ವಿವಿಧ ಕೆಲಸಗಳಲ್ಲಿ ಹಂಚಿಹೋಗಿದ್ದಾರೆ.

ಬಿಲ್ಡಿಂಗ್ ಕಂಟ್ರಾಕ್ಟರ್, ಶಾಖಾ ಮ್ಯಾನೇಜ್‌ಮೆಂಟ್, ಚಿಲ್ಲರೆ ಅಂಗಡಿ, ಕ್ಯಾಸೆಟ್ ಅಂಗಡಿ, ಕಿರಾಣಿ ಅಂಗಡಿ, ಹಣ್ಣು ತೆಂಗಿನಕಾಯಿ ಅಂಗಡಿ ಇತ್ಯಾದಿ ಸ್ವಯಂ ಉದ್ಯೋಗಗಳಲ್ಲಿ ತೊಡಗಿರುವವರು ಉಂಟು. ಇವರಲ್ಲಿ ಬಹಳ ಜನ ಊರ ಹೊರಗೆ ಇರುವ್ಯದರಿಂದ ಅವರಿಂದ ತನ್ನ ಊರ ಮನೆಯವರಿಗೆ ಆರ್ಥಿಕ ಸಹಾಯ ದೊರೆಯುವುದು ಉಂಟು. ತೀರಾ ಕೆಲವರು ತಮ್ಮ ಮನೆಯ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುವುದರಿಂದ ಅವರ ಕುಟುಂಬಗಳು ಸುಧಾರಿಸಿವೆ. ಇನ್ನು ಕೆಲವರು ಬಡ್ಡಿ ವ್ಯವಹಾರ, ದಲ್ಲಾಳಿ, ವ್ಯಾಪಾರ ಇತ್ಯಾದಿ ಹವ್ಯಾಸವಾಗಿ ಜೀವನ ನಡೆಸುವವರು ಇದ್ದಾರೆ. ಕೆಲವರು ಮರ ಕೊರೆದು ಮನೆಯ ಮನೆಯ ಮುಟ್ಟುಗಳನ್ನು ಮಾಡುವ, ಕೃಷಿಯ ಉಪಕರಣಗಳನ್ನು ಮಾಡುವ ಮತ್ತು ಮರ ಕೊರೆಯುವ ಯಂತ್ರಗಳನ್ನು ಹಾಕಿಕೊಂಡಿದ್ದಾರೆ.

೩:೩ ಶೈಕ್ಷಣಿಕ ವ್ಯವಸ್ಥೆ :

೧೯೧೬ ರಲ್ಲಿ ಅಸ್ತಿತ್ವಕ್ಕೆ ಬಂದ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘವು ಇಂದು ಬಳ್ಳಾರಿಯ ಜಿಲ್ಲೆಯಾದ್ಯಂತ ಪ್ರಾಥಮಿಕ ಶಾಲೆಯಿಂದ ಪ್ರಾರಂಭಿಸಿ, ತಾಂತ್ರಿಕ ಶಿಕ್ಷಣದ ವರೆಗೆ ಸುಮಾರು ೨೦ ವಿದ್ಯಾಸಂಸ್ಥೆಗಳು ಮೂಲಕ ಜ್ಞಾನದೀವಿಗಿಯನ್ನು ಬೆಳಗುತಲಿದೆ. ಶೈಕ್ಷಣಿಕ ಬೆಳವಣಿಗೆಯಲ್ಲಿ ಸರಕಾರಕ್ಕೆ ಹೆಗಲಿಗೆ ಹೆಗಲು ಕೊಟ್ಟು ಸ್ತುತ್ಯವಾದ ಕಾರ್ಯಗಳನ್ನು ಹಲವಾರು ಖಾಸಗಿ ವಿದ್ಯಾಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಅದರಲ್ಲಿ ಕೊಟ್ಟೂರಿನ ಶಿಕ್ಷಣ ಸಂಸ್ಥೆಗಳು ಶಿಕ್ಷಣ ರಂಗಕ್ಕೆ ನೀಡಿದ

ಕೊಡುಗೆಗಳು ಮಹತ್ವವಾಗಿವೆ. ಜೊತೆಗೆ ಕೊಟ್ಟೂರು ತನ್ನ ಸುತ್ತಲಿನ ಹಾಗೂ ಇಡೀ ಕರ್ನಾಟಕದ ಊರುಗಳಿಗೆ ಶೈಕ್ಷಣಿಕ ಕೇಂದ್ರವಾಗಿಯೂ ಗುರುತಿಸಿಕೊಂಡಿದೆ. ಇದಕ್ಕೆ ಕಾರಣ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಚರ ಪಟ್ಟಾಧ್ಯಕ್ಷರಾದ ಶ್ರೀ.ಶ್ರೀ.ಶ್ರೀ. ಶಿವಪ್ರಕಾಶ ಸ್ವಾಮಿಗಳು ಈ ಊರಿನ ಗಣ್ಯ ನಾಗರಿಕರಾದ ಶ್ರೀಯುತರಾದ ಎಂ.ಎಂ.ಜೆ.ಸದ್ಯೋಜಾತಪ್ಪ, ಬಿ.ಎಸ್.ವೀರಭದ್ರಪ್ಪನವರು, ಡಾ॥ ಅ.ನಂಜಪ್ಪ ನವರು ಗೋರ್ಲಿಶರಣಪ್ಪನವರು, ಟಿ.ಎಸ್.ಶಿವನಾಗಪ್ಪ ನವರು, ಡಾ॥ ಜಿ.ಎಂ. ಸಿದ್ದಾರಾಮಯ್ಯ ನವರು, ವಿ.ಜಿ.ವೀರಣ್ಣ ನವರು ಮುಂತಾದ ಪ್ರಮುಖರು.

ಹಿಂದೆ ಜಮೀನಾದಾರರ ಮಕ್ಕಳು ಬಂಡವಾಳ ಶಾಹಿಗಳುಮಾತ್ರ ಶಿಕ್ಷಣವನ್ನು ಕಲಿಯುತ್ತಿದ್ದರು. ಬಡಜನರು, ಪರಿಶಿಷ ಜಾತಿ, ಪರಿಶಿಷ್ಟ ವರ್ಗಗಳಂತೂ ಶಿಕ್ಷಣವನ್ನು ಕಲಿಯುವುದು ದುಸ್ತರವಾದ ಮಾತಾಗಿತ್ತು. ಆದರೆ ಕೊಟ್ಟೂರಿನಲ್ಲಿ ಈಗ ಆ ರೀತಿಯ ಯಾವ ಹಿಂದಿನ ಪದ್ದತಿಗಳು ಉಳಿದಿಲ್ಲ, ಊರಿನ ಎಲ್ಲಾ ವರ್ಗದವರು ಉನ್ನತ ಶಿಕ್ಷಣ ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಅದಕ್ಕೆ ಕಾರಣ ಸುತ್ತ ಮುತ್ತಲಿನ ಹಳ್ಳಿಗಳ ಸರ್ಕಾರಿ ನೌಕರರ ಸಂಖ್ಯೆ ಕೊಟ್ಟೂರಿನ ನೌಕರರ ಸಂಖ್ಯೆಯನ್ನು ಗಮನಿಸಿದರೆ ಕೊಟ್ಟೂರು ಗ್ರಾಮಕ್ಕೆ ಪ್ರಥಮ ಸಾಲಿನಲ್ಲಿ ನಿಲ್ಲುತ್ತದೆ. ಹರಿಜನ, ಕೊರವ, ಕುರುಬ, ನೇಕಾರ, ನಾಯಕ, ಛಲವಾದಿ ಇತ್ಯಾದಿ ಎಲ್ಲಾ ಹಿಂದುಳಿದ ವರ್ಗದವರು ಪೊಲೀಸರಿಂದ ಪ್ರೋಫೆಸರ್ ಹುದ್ದೆಯನ್ನು ಅಲಂಕರಿಸಿದ್ದಾರೆ. ಇದಕ್ಕೆ ಕಾರಣ ಇಲ್ಲಿರುವ ಶಾಲಾ ಕಾಲೇಜುಗಳು, ವಸತಿ ನಿಲಯಗಳೇ ಸಾಕ್ಷಿ.

ಕೊಟ್ಟೂರು ಕೇವಲ ಧಾರ್ಮಿಕ ಮತ್ತು ವಾಣಿಜ್ಯ ಕೇಂದ್ರವಷ್ಟೇ ಅಲ್ಲದೆ ಒಂದು ಉತ್ತಮ ಶೈಕ್ಷಣಿಕ ಕ್ಷೇತ್ರವೂ ಆಗಿದೆ. ತಾಲೂಕು ಕೂಡಾ ಆಗಿರದ ಒಂದು ಊರಿನಲ್ಲಿ ಈ ಮುಂದಿನಂತೆ ಶಿಕ್ಷಣ ಸಂಸ್ಥೆಗಳ ಪಟ್ಟಿ ಮಾಡಬಹುದು.

೦೯ ಪ್ರಾಥಮಿಕ ಶಾಲೆ.

೦೯ ಪ್ರೌಢಶಾಲೆಗಳು.

೦೪ ಪದವಿ ಪೂರ್ವ ಕಾಲೇಜುಗಳು.

೦೧ ಪದವಿ ಕಾಲೇಜು.

೦೧ ಪ್ರೌಢಶಿಕ್ಷಣ ತರಬೇತಿ ಕಾಲೇಜು.

೦೧ ಪ್ರಾಥಮಿಕ ಶಿಕ್ಷಕರ ತರಬೇತಿ ಕಾಲೇಜು.

೦೧ ದೈಹಿಕ ಶಿಕ್ಷಕರ ತರಬೇತಿ ಕಾಲೇಜು.

೦೨ ಜೆ.ಓ.ಸಿ. ಕಾಲೇಜುಗಳು.

೦೮ ಐ.ಟಿ.ಐ. ಕಾಲೇಜುಗಳು.

೦೭ ಕಾನ್ವೆಂಟುಗಳು.

೦೧ ಬಿ.ಎಸ್.ಡಬ್ಲೂ (ಬ್ಯಾಚುಲರ್ ಆಫ್ ಸೋಶಿಯಲ್ ವರ್ಕ್)

ಈ ರೀತಿಯಾಗಿ ಇರುವುದೆಂದರೆ ಬಹುಶಃ ಅದು ಕೊಟ್ಟೂರು ಮಾತ್ರವೆನ್ನಬಹುದು. ಗುಣಾತ್ಮಕವಾಗಿಯೂ ಕೂಡ ಒಳ್ಳೆಯ ಶಿಕ್ಷಣ ಇಲ್ಲಿ ದೊರೆಯುತ್ತಿದೆ ಎಂಬುದಕ್ಕೆ ರಾಜ್ಯದಲ್ಲೆ ಮೊಟ್ಟ ಮೊದಲ ಬಾರಿಗೆ ಶ್ರೀ ಕೊಟ್ಟೂರೇಶ್ವರ ಮಹಾವಿದ್ಯಾಲಯದಲ್ಲಿ ಪಿ.ಯು.ಸಿ. ಮೊದಲ ರ್‍ಯಾಂಕನ್ನು ಪಟ್ಟಣ ಪ್ರದೇಶವನ್ನು ಬಿಟ್ಟು ಹಳ್ಳಿಗೆ ದೊರಕಿಸಿದ ಹೆಗ್ಗಳಿಕೆ ಕೊಟ್ಟೂರಿನದು. ಅಲ್ಲದೆ ಇಡೀ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿಯೇ ಪ್ರಸಿದ್ದವಾದುದು ಈ ಊರಿನ ಶ್ರೀ ಕೊಟ್ಟೂರೇಶ್ವರ ಮಹಾವಿದ್ಯಾಲಯ.

ವಿಪರ್ಯಾಸವೆಂದರೆ ಇಲ್ಲಿ ವೃತ್ತಿಪರ ಶಿಕ್ಷಣಗಳಾದ ವೈದ್ಯಕೀಯ, ಇಂಜಿನಿಯರಿಂಗ್, ಎಂ.ಬಿ.ಎ, ಎಂ.ಎಸ್.ಡಬ್ಲೂ ಮುಂತಾದ ಕೋರ್ಸುಗಳೊಂದು ಇಲ್ಲ. ಇಲ್ಲಿನ ಜನರ ಆಶಯವೆಂದರೆ ಇಂತಹ ಕೋರ್ಸ್‌ಗಳು ಇಲ್ಲಿಯೇ ಸಿಗುವಂತಾಗಬೇಕು.

ಹೀಗೆ ಶ್ರೀಮಂತ ಸಾಂಸ್ಕೃತಿಕ, ಧಾರ್ಮಿಕ, ವಾಣಿಜ್ಯ ಪರಂಪರೆಯಿಂದ ಪ್ರಸಿದ್ದಿ ಹೊಂದಿರುವ ಕೊಟ್ಟೂರು ದೊಡ್ಡ ಶೈಕ್ಷಣಿಕ ಕೇಂದ್ರವು ಆಗಿದೆ.

ಅಡಿ ಟಿಪ್ಪಣಿಗಳು :


೧. ಡಾ॥ ಶ್ರೀರಾಮ ಇಟ್ಟಣ್ಣವರ ೧೯೯೫ ಕೃತಿ **'ಹಲಗಲಿ ಗ್ರಾಮ ಜಾನಪದ'** ಪ್ರಕಾಶನ, ವೀರಶೈವ ಅಧ್ಯಯನ ಅಕಾಡಮಿ-ಬೆಳಗಾವಿ. ಪುಟಸಂಖ್ಯೆ ೪೧-೪೬

೨. ಕೊಟ್ಟೂರು ಎ.ಪಿ.ಎಂ.ಸಿ. ಕಾರ್ಯಾದರ್ಶಿಗಳಿಂದ ವಿಷಯ ಸಂಗ್ರಹಣೆ.

೩. ಕೆ. ರಮೇಶ್, ೨೦೦೨, **'ಉಜ್ಜಿನಿ ಗ್ರಾಮ ಅಧ್ಯಯನ'**- ಎಂ.ಫಿಲ್ ಸಂಶೋಧನಾ ಗ್ರಂಥ, ಪುಟ ಸಂಖ್ಯೆ ೯೫, ೭೧, ೭೨, ೭೪.

೪. ಪಟ್ಟಣ ಪಂಚಾಯ್ತಿ ಕಾರ್ಯಾಲಯ-ಕೊಟ್ಟೂರು.

೫. ಜಿ. ಶಶಿಕಿರಣ, ಕೊಟ್ಟೂರು ನವನಿರ್ಮಾಣದತ್ತ, ಪುಸ್ತಕ **'ಪರಿಸಂಪೂರ್ಣ'**, ಪ್ರಕಾಶನ, ಪ್ರಣವ ಪ್ರತಿಷ್ಠಾನ, ಪುಟಸಂಖ್ಯೆ ೧೫೬



ಅಧ್ಯಾಯ : ನಾಲ್ಕು

ಕೊಟ್ಟೂರು ಮಠಗಳ ಶೈವ ಪರಂಪರೆ

ಕೊಟ್ಟೂರು ಎಂದೊಡನೆ ನೆನಪಿಗೆ ಬರುವುದು ಶ್ರೀ ಗುರು ಕೊಟ್ಟೂರೇಶ್ವರ, ೧೨ ಶತಮಾನದ ಕಲ್ಯಾಣದ ಸಾಂಸ್ಕೃತಿಕ, ಧಾರ್ಮಿಕ ಕ್ರಾಂತಿಯ ಮುಕುಟವಿಲ್ಲದ ಮಹಾರಾಜನಂತೆ ಬೆಳಗಿದ ಶೂನ್ಯ ಪೀಠದ ಅಲ್ಲಮ ಪ್ರಭುವಿನ ನಂತರ ಪೀಠದ ಉತ್ತರಾಧಿಕಾರಿಯಾಗಿ ಕ್ರಾಂತಿಯ ಜ್ಯೋತಿ ಆರದಂತೆ ಕಾಪಾಡಿದ ಎಡೆಯೂರಿನ ಶ್ರೀಸಿದ್ಧಲಿಂಗೇಶ್ವರರ ಕೂಲಹಳ್ಳಿ ಮದ್ದಾನೇಶ್ವರ, ಅರಸಿಕೇರಿ ಕೋಲಶಾಂತೇಶ್ವರ, ಹರಪನಹಳ್ಳಿ ಕೆಂಪಯ್ಯ ಹಾಗೂ ನಾಯಕನಟ್ಟಿ ತಿಪ್ಪೇರುದ್ರರಲ್ಲಿ ಪ್ರಮುಖರಾದ ಶ್ರೀ ಗುರು ಬಸವೇಶ್ವರರು ಕೊಟ್ಟೂರಿಗೆ ಬಂದು ಇಲ್ಲಿನ ಫಲವತ್ತಾದ ಜನ–ಮನದಲ್ಲಿ ಸಾಮಾಜಿಕ ಕ್ರಾಂತಿ ಸಮಾನತೆಯ ಬೀಜಗಳನ್ನು ಬಿತ್ತಿ ಬೆಳೆಸಿ ಜೀವಂತ ಯೋಗ ಸಮಾಧಿ ಹೊಂದಿದ ಈ ಕ್ಷೇತ್ರವು **'ಶ್ರೀಕ್ಷೇತ್ರ'** ವೆಂದು ಜನರಿಂದ ಪ್ರಸಿದ್ಧಿಯಾಗಿದೆ.

ಪ್ರಸ್ತುತ ಕೊಟ್ಟೂರು ಒಂದು ವೀರಶೈವ ಧರ್ಮದ ನೆಲೆವೀಡಾಗಿ ಗುರುತಿಸಿ ಕೊಂಡಿದೆ. ಚರಿತ್ರೆಯ ಘಟನೆಗಳನ್ನು ಬಗೆದು ನೋಡಿದಾಗ ಇಲ್ಲಿ ಇತರೆ ಪ್ರಮುಖ ಧರ್ಮಗಳು ನೆಲೆಗೊಂಡಿದ್ದವು ಎಂದು ತಿಳಿಯುತ್ತದೆ. ಕೊಟ್ಟೂರು ಪ್ರದೇಶಕ್ಕೆ ಜೈನಧರ್ಮ ಎಂದು ಕಾಲಿಟ್ಟಿತು ಎಂಬುದನ್ನು ನಿಖರವಾಗಿ ಹೇಳಲಿಕ್ಕೆ ಯಾವ ಸಮರ್ಥ ಆಧಾರಗಳೂ ಇಲ್ಲ. ಆದರೆ ಪ್ರಾಚೀನ ಮತ್ತು ಮಧ್ಯಯುಗೀನ ಭಾರತೀಯ ಚರಿತ್ರೆಯ ಸಂದರ್ಭದಲ್ಲಿ ಅದು ಜೈನರ ನೆಲೆವೀಡಾಗಿತ್ತು. ದಕ್ಷಿಣ ಭಾರತಕ್ಕೆ ಜೈನಧರ್ಮ ಕ್ರಿ.ಶ. ಪೂರ್ವದಲ್ಲೆ ಬಂದಿದೆ ಎಂಬುದು ನಿಸ್ಸಂಶಯ ಚಂದ್ರಗುಪ್ತ ಮೌರ್ಯ ದಕ್ಷಿಣದ ಶ್ರವಣಬೆಳಗೊಳದಲ್ಲಿ ಸಲ್ಲೇಖನ ವ್ರತವನ್ನಾಚರಿಸಿ ಜೀವನ್ಮುಕ್ತಿ ಪಡೆದ ವಿಚಾರ ಅಲ್ಲಿನ ಒಂದು ಶಾಸನದಲ್ಲಿ ತಿಳಿದು ಬರುತ್ತದೆ.

೧೨ ನೇ ಶತಮಾನದ ಆದಿಯಲ್ಲಿ ಅವತರಿಸಿ ಸಮಾಜವು ಹಲವಾರು ತೊಡಕುಗಳಲ್ಲಿ ಸಿಲುಕಿ. ಪ್ರಗತಿ ಕಾಣದಿರುವಾಗ ಮಾನವತೆಯ ಜೀವನ ರಥಕ್ಕೆ ಧರ್ಮ, ನೀತಿ, ತತ್ವಗಳೆಂಬ ನೊಗವನ್ನು ಕಟ್ಟಿ ಎಳೆದು ಉದ್ಧಾರಗೈದ ಮಹಾ ಪುರುಷರ ಪಂಕ್ತಿಯಲ್ಲಿ ಕಾಣುವ ಶರಣ ಶಿಷ್ಯಜನ ಮಂದಾರ ಕೊಟ್ಟೂರು ಶ್ರೀ ಗುರು ಬಸವೇಶ್ವರ ಸ್ವಾಮಿ.

ಶ್ರೀ ಸ್ವಾಮಿಯ ಮೂಲ ಹೆಸರು ಶ್ರೀಗುರು ಬಸವರಾಜೇಂದ್ರ ಎಂದು ಪುರಾಣಗಳಿಂದ ತಿಳಿದು ಬರುತ್ತದೆ. ಅಲ್ಲದೆ, ಕೊಟ್ಟೂರೇಶ್ವರ, ಗುರುಬಸವೇಶ್ವರ, ಗುರುಬಸವ, ಗುರುಬಸವರಾಜ, ವೃಷಭರಾಜೇಂದ್ರ ಎಂಬ ನಾಮದಿಂದಲೂ ಶರಣ, ಶಿವಯೋಗಿ, ದೈವಾಂಶ ಸಂಭೂತ, ಭಕ್ತ ವತ್ಸಲ –ಹೀಗೆ ಅನೇಕ ಬಗೆಯಲ್ಲಿ ಬಣ್ಣಿಸುತ್ತಾರೆ. ಒಟ್ಟಾರೆಯಾಗಿ ವ್ಯಕ್ತಿತ್ವ, ನಾಯಕತ್ವ, ಪ್ರತಿಭೆಗಳೆಲ್ಲದರ ಮೊತ್ತವಾಗಿ ಶರಣ ಎನ್ನಬಹುದು.

ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯು ಪವಾಡ ಪುರಷರು ಸತ್ತ ಎಮ್ಮೆಯನ್ನು ಬದುಕಿಸಿದಾತ, ಕುರುಡನಿಗೆ ಕಣ್ಣುನೀಡಿದಾತ, ಕುಷ್ಟ ರೋಗಿಯನ್ನು ಗುಣಪಡಿಸಿದಾತ, ಮಕ್ಕಳಿಲ್ಲದವರಿಗೆ ಮಕ್ಕಳ ಕರುಣಿಸಿದಾತ ಹೀಗೆ ಸುಮಾರು ನೂರಾರು ಪವಾಡಗಳನ್ನು ಬೀರಿದಾತ. ಇವು ಇಂದಿಗೂ ನಿತ್ಯ ನಿರಂತರವಾಗಿ ನಿರ್ಮಲ ಭಕ್ತಿಯಿಂದ ಒಂದೇ ಮನಸ್ಸಿನಿಂದ ಬೇಡಿದವರಿಗೆ ನೀಡಿದಾತ ಸ್ವಾಮಿಯ ಮಹಿಮೆ ಅಪಾರವಾದುದು. ಸ್ವಾಮಿಯ ಕೃಪಾರ್ಶೀವಾದಕ್ಕಾಗಿ ಉತ್ತರ ಕರ್ನಾಟಕ ಮೈಸೂರು ಸೀಮೆ, ಮಲೆನಾಢ ಭಕ್ತರು ಇಂದಿಗೂ ಬರುತ್ತಾರೆ.

ಜನಪದ ಸಾಹಿತ್ಯದಲ್ಲಿ :

ಕೊಟ್ಟೂರು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪರಿಸರ ಜನಪದ ಸಾಹಿತ್ಯದ ತವರೂರು. ವಿಭಿನ್ನ ಜನಾಂಗ, ಸಂಸ್ಕೃತಿ ಪರಂಪರೆಯುಳ್ಳ ಈ ಮಣ್ಣಿನಲ್ಲಿ ಸಾಮರಸ್ಯವಿದೆ. ಜೈವಿಕ ಮತ್ತು ಜನಾಂಗಿಕ ನೆಲೆಗಳಲ್ಲಿ ಕಲೆ, ಕಥೆಗಳು ಸೃಷ್ಠಿಯಾಗಿವೆ.

ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಬೀಸುವಾಗ, ಕುಟ್ಟುವಾಗ, ಮದುವೆ-ಮುಂಜಿ, ಹಬ್ಬ-ಹರಿದಿನಗಳಂದು ಸೋಬಾನೆ ಪದಗಳಲ್ಲಿ ಶ್ರೀಕೊಟ್ಟೂರೇಶ್ವರ ಸ್ವಾಮಿಯನ್ನು ನೆನೆದು ತಮ್ಮ ದೈನಂದಿನ ಕಾರ್ಯಗಳಲ್ಲಿ ಮುಂದುವರಿಯುತ್ತಾರೆ. ನಂದಿಧ್ವಜ ಕುಣಿತ, ಸಮಾಳ ವಾದ್ಯ, ಭಜನೆ, ರಿವಾಯ್ತ ಪದಗಳು, ಕೋಲಾಟ, ಡೊಳ್ಳಿನ ಪಟ್ಟು, ಒಡಪು, ಲಂಬಾಣಿ ಹಾಡುಗಳಲ್ಲದೆ. ಹತ್ತಾರು ರೀತಿಯಲ್ಲಿ ಸ್ವಾಮಿಯನ್ನು ಪ್ರಾರ್ಥಿಸುವುದರ ಮೂಲಕ ತಮ್ಮ ಮಂಗಳ ಕಾರ್ಯಗಳನ್ನು ಪ್ರಾರಂಭಿಸುತ್ತಾರೆ.

ಜನಪದರ ದೈವವಾದ ಶ್ರೀ ಕೊಟ್ಟೂರು ಗುರುಬಸವನ ಕುರಿತು ಒಂದು ಜನಪದ ನುಡಿ ಹೀಗಿದೆ.

ದಾಟುತ ಕಂಡೆ ದವಸವ
ಕೊಟ್ಟೂರು ಮಠದಾಗೆ ಕಂಡೆ
ಮಹಿಮನ
ಕೂಸಿಗೆ ಕುಂಚಗಿ ರೇಷ್ಮೆಯ
ಗೊಂಡೆವು ತಾಸೋತ್ತಿನ ಹಾದಿ
ಕೊಟ್ಟೂರು ಒಡೆಯನಿಗೆ ನಾಸುತ್ತಿ
ಬರುವ ಪಾರಾದಾಕ್ಷಣ
ನಂದಿಕೋಲು ನೋಡು ಮಂದಿ
ಗದ್ದಲ ನೋಡು ಶಂಕ ಜಾಗಟ ಇದ
ನೋಡು ಕೊಟ್ಟೂರೇಶ್ವರನ
ಸಂಪತ್ತು ನೋಡು ಗುಡಿಯಾಗಾ.

ಈ ರೀತಿಯ ಸೊಗಸಾದ ಜಾನಪದ ಗೀತೆಗಳು ಇಂದಿಗೂ ನಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿವೆ. ಜನಪ್ರಿಯ ಕೋಲಾಟ, ಶರಣ ಶರಣಯ್ಯ ಗಣನಾಯ್ಕ ಕೆಳದವರಿಲ್ಲ ಅದರಲ್ಲಿ ಒಂದು ಪಂಕ್ತಿ ಹೀಗಿದೆ.

ಸ್ವಾಮಿ ಚಲ್ಲು ಮುತ್ತು ಕೋಲು

ಸ್ವಾಮಿ ನಾಯ್ಕ ಅಯ್ಯ

ಕೊಟ್ರಬಸಯ್ಯ ಸ್ವಾಮಿ ಗಣನಾಯ್ಕ

ಒಟ್ಟಾರೆಯಾಗಿ ಧರ್ಮದ ರಕ್ಷಣೆಗಾಗಿ ಲೋಕಕಲ್ಯಾಣಕ್ಕಾಗಿ ಪುರಾತನ ಆಚಾರ್ಯರು, ಶರಣರು, ಸಂತರು ಇತ್ಯಾದಿ ಯೋಗಗಳು ಭಾರತದ ನಾನಾ ಭಾಗಗಳಲ್ಲಿ ಪಾದಯಾತ್ರೆ ಮಾಡಿ ವೀರಶೈವ ಸಂಸ್ಕೃತಿಯನ್ನು ನೆಲೆಗೊಳಿಸಿ ಐಕ್ಯವಾದ ಮಹತ್ವದ ಸ್ಥಳಗಳೇ ಇಂದು ನಮಗೆ ದೇವಾಲಯಗಳಾಗಿ, ಶರಣರ ಗದ್ದುಗೆ ಮಠಗಳಾಗಿ, ಪವಿತ್ರ ಪುಣ್ಯ ಕ್ಷೇತ್ರಗಳಾಗಿ ಕಂಗೊಳಿಸುತ್ತಿವೆ.

ಜಾತಿ ಹೀನನ ಮನೆಯ । ಜ್ಯೋತಿ

ತಾ.ಹೀನವೇ। ಜಾತಿ ವಿಜಾತಿ ಎನಬೇಡ

ದೇವನೊಲಿದಾತನೇ। ಜಾತ ಸರ್ವಜ್ಞ

ಎಂಬ ಕನ್ನಡ ನಾಡಿನ ಕವಿಯ ಜಿತೇಂದ್ರೀಯ ಚೈತನ್ಯವನ್ನು ಇಂದಿಗೂ ಭಕ್ತರ ಹೃದಯದಲ್ಲಿ ತುಂಬುತ್ತ ವಿವೇಕಯುಕ್ತ ವೈಚಾರಿಕತೆಯ ಆಚರಣೆಗಳುಳ್ಳ ಕ್ಷೇತ್ರವೇ ಕೊಟ್ಟೂರು ಶ್ರೀ ಗುರುಕೊಟ್ಟೂರೇಶ್ವರ ಪುಣ್ಯಕ್ಷೇತ್ರ.

ಒಂದೇ ಊರಿನಲ್ಲಿ ಒಬ್ಬನೇ ಸಂತನ ಐದು ದೇವಾಲಯಗಲಿರುವುದು ಒಬ್ಬ ಹಿಂದೂ ಸಂತನಿಗೆ ಮುಸ್ಲಿಂರಂತೆ ದಿನಕ್ಕೆ ಐದು ಪೂಜೆಗಳು ನಡೆಯುವುದು ಮತ್ತು ದೇವಸ್ಥಾನಗಳಲ್ಲಿ ಶಿಲಾಮೂರ್ತಿಗಳ ಬದಲು ವೀರಶೈವ ಧರ್ಮದ ಅಷ್ಟಾವರ್ಣಗಳನ್ನು (ವಿಭೂತಿ, ರುದ್ರಾಕ್ಷಿ ಇತ್ಯಾದಿ) ಒಂದು ಡಬ್ಬಿಯಲ್ಲಿರಿಸಿ ಅವುಗಳನ್ನೆ ಪೂಜಿಸುವ ಪರಿಪಾಠವಿರುವ ಮೂಲ ಕ್ಷೇತ್ರ ವಿದ್ದಾಗಲೇ (ಮೂಢನಂಬಿಕೆಗಳಿಗೆ ವಿರುದ್ದವಾಗಿ) ರಥೋತ್ಸವ ಜರುಗುವ ಮತ್ತು ಹರಿಜನ ಕೇರಿಯ ಮಹಿಳೆಯ ನೈವೇದ್ಯ ಸ್ವಿಕರಿಸಿ ರಥವೇರುವ ವೈಶಿಷ್ಟಗಳಲ್ಲಿರುವ ಏಕೈಕ ಕ್ಷೇತ್ರವೆಂದರೆ ಕೊಟ್ಟೂರು ಮಾತ್ರ.

ಶ್ರೀ ಸ್ವಾಮಿಯ ಮಠಗಳು :

'ದೇವನೊಬ್ಬ ಆಲಯಗಳು ಹಲವು' ಎನ್ನುವಂತೆ ಊರಿನಲ್ಲಿ ಶ್ರೀ ಸ್ವಾಮಿಯ ಐದು ಪ್ರಮುಖ ಮಠಗಳಿವೆ ಅವುಗಳೆಂದರೆ–

೧. ಮೂರು ಕಲ್ಲು ಮಠ,

೨. ಹಿರೇಮಠ.

೩. ತೊಟ್ಟಿಲು ಮಠ.

೪. ಗಚ್ಚಿನ ಮಠ.

೫. ಮರಿಮಠ.

<u>೧. ಮೂರು ಕಲ್ಲು ಮಠ :</u>

ಶ್ರೀ ಸ್ವಾಮಿಯು ೧೯ನೇ ಶತಮಾನದಲ್ಲಿ ಅವತರಿಸಿ ನೆಲಸಿ ಮಹಿಮೆ ತೋರಿದ ಪ್ರಪ್ರಥಮ ಮಠವೇ ಮೂರು ಕಲ್ಲು ಮಠ. ಈ ಮಠವು ಮೂರು ಗರ್ಭಗುಡಿಗಳಿಂದ ಕೂಡಿದ್ದು ಅದರಲ್ಲಿ ಮೂರು ದೊಡ್ಡ ಗಾತ್ರದ ಕಪ್ಪು ಶಿಲೆಯ ಈಶ್ವರ ಲಿಂಗದ ಪೀಠಗಳಿವೆ. ಒಂದಕ್ಕಿಂತ ಒಂದು ಭಿನ್ನವಾಗಿವೆ. ಈ ಗುಡಿಯ ಮುಂಭಾಗದಲ್ಲಿರುವ ಹೊಯ್ಸಳ ರಾಜರ ಕ್ರಿ.ಶ.೧೨೨೧ರ ಶಿಲಾ ಶಾಸನದ ಪ್ರಕಾರ ಈ ಗುಡಿಯು ಉಡುಕೇಶ್ವರ ಸ್ವಾಮಿ ದೇವಾಲಯವೆಂದು ತಿಳಿದು ಬರುತ್ತದೆ. ಈ ಮಠದ ಮೂರು ಶಿಲಾಗೋಪುರಗಳು ಚಾಲುಕ್ಯ ಮತ್ತು ಹೊಯ್ಸಳರ ಕಾಲದ ಜೈನರ ಚೈತ್ಯಾಲಯಗಳ ಮಾದರಿಯಲ್ಲಿವೆ. ಈ ಗುಡಿಯನ್ನು ತ್ರಿಕೂಟೇಶ್ವರ ದೇವಾಲಯವೆಂದು ಕರೆಯಲಾಗಿದೆ.

ಮೂರು ಕಲ್ಲುಮಠವು ಊರಿನ ಉತ್ತರ ಭಾಗಕ್ಕೆ ಮಧ್ಯದಲ್ಲಿ ಬರುತ್ತದೆ. ಪೂರ್ವಾಭಿ ಮುಖವಾಗಿರುವ ಈ ತ್ರಿಕೂಟಾಚಲ ದೇವಾಲಯವು ಕದಂಬ ನಾಗರಶೈಲಿಯ ಶಿಖರಗಳಿಂದ ಶೋಭಿಸುತ್ತದೆ. ಪಿರಮಿಡ್ ಆಕಾರದಲ್ಲಿರುವ ಮೂರು ಕಲ್ಲಿನ ಶಿಖರಗಳನ್ನು ಕಂಡ ಜನರು ಮೂರು ಕಲ್ಲುಮಠ ವೆಂದು ಕರೆದಿದ್ದಾರೆ.

ಚೌಕಾಕಾರದ ಗರ್ಭಗುಡಿಯಲ್ಲಿ ಕರಿಶಿಲೆಯ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿರುವ ಶಿವಲಿಂಗ ಸುಮಾರು ಮೂರಡಿ ಎತ್ತರವಿದೆ. ಸುಮಾರು

ಹದಿನೇಳನೆಯ ಶತಮಾನದ ಕೊನೆಯ ದಶಕದಲ್ಲಿ ಕೊಟ್ಟೂರಿಗೆ ಆಗಮಿಸಿದ ಶ್ರೀಗುರು ಬಸವರು ಮೊದಲು ಈ ದೇವಾಲಯದಲ್ಲೇ ವಾಸ್ತವ್ಯ ಹೂಡಿ, ಉಡುಕೇಶ್ವರವನ್ನು ಆರಾಧಿಸಿ ಕೊಂಡಿದ್ದಾರೆಂದು ತಿಳಿದು ಬರುತ್ತದೆ. ಈಗ ಈ ಸುಂದರ ದೇವಾಲಯದ ಎಡಭಾಗದ ಗೋಡೆಯ ವರೆಗೂ ಇರುವ ಭೂಮಿಯನ್ನು ಒತ್ತುವರಿ ಮಾಡಿ ಕಟ್ಟಡವನ್ನು ಕಟ್ಟಿ ದೇವಾಲಯದ ಅಂದವನ್ನು ಹಾಳುಗೆಡವಲಾಗಿದೆ. ಶಾಸನ ಶಿಲೆಯನ್ನು ಕಿತ್ತು ಬೇರೆಡೆ ಬಿಸಾಡಲಾಗಿದೆ. ಇದು ನಮ್ಮ ಜನರಲ್ಲಿರುವ ಸಂಸ್ಕೃತಿಯ ಪ್ರಜ್ಞೆಗೆ ಸಾಕ್ಷಿಯಾಗಿ ನಿಂತಿದೆ.

೨. ಹಿರೇಮಠ (ದರ್ಬಾರು ಮಠ) :

ಶ್ರೀ ಜಗದ್ಗುರು ರೇಣುಕಾಚಾರ್ಯ ಶಾಖೆಗೆ ಒಳಪಟ್ಟಿದ್ದ ಕೊಟ್ಟೂರು ಕೋಟೆಯಲ್ಲಿರುವ ಶ್ರೀ ವೀರಭದ್ರ ದೇವರ ಗುಡಿಯೇ ಇಂದಿನ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಹಿರೇಮಠ. ಇದಕ್ಕೆ ದರ್ಬಾರು ಮಠವೆಂತಲೂ ಕರೆಯುತ್ತಿದ್ದರು. ಇದಕ್ಕೆ ಕಾರಣ ಇಲ್ಲಿ ಶ್ರೀ ಸ್ವಾಮಿಗಳು ವೀರಶೈವ ಧರ್ಮ ತತ್ವಗಳನ್ನು ಬೋಧಿಸುತ್ತಿದ್ದರಲ್ಲದೆ ರಾಜದರ್ಬಾರ ನಡೆಸುತ್ತಿದ್ದರು. ಎಂಬ ಕಾರಣಕ್ಕಾಗಿ ದರ್ಬಾರು ಮಠವೆಂದು ಕರೆಯಲಾಗಿತ್ತು.

ಚಿತ್ರದುರ್ಗ ಸಂಸ್ಥಾನದ ಅರಸು ಮದಕರಿ ಶಿದ್ಧೋಜಿ ಮುರಾರಿಯು ನಾಯಕನ ಸೈನ್ಯದ ಸಹಾಯದೊಂದಿಗೆ ಹರಪನಹಳ್ಳಿ ನಾಯಕ ವಂಶದ ಪಾಳೆಗಾರ ಮನೆತನದ ಶೋಮಶೇಖರ ರಾಜನ ಮೇಲೆ ದಂಡೆತ್ತಿ ಹೋದಾಗ ಶ್ರೀ ಸೋಮಶೇಖರ ರಾಜನು ಕೊಟ್ಟೂರಿಗೆ ಬಂದು ಶ್ರೀ ಸ್ವಾಮಿಯಲ್ಲಿ ಮೊರೆಯಿಡಲು ಶಿದ್ಧೋಜಿ ಮುರಾರಿ ಮದಕರಿ ನಾಯಕರು ರುಧಿರೋದ್ಗಾರಿ ಸಂವತ್ಸರದ ಮಾಘ ಬಹುಳ ಅಷ್ಟಮಿ ಶನಿವಾರದ ದಿನ ಕೊಟ್ಟೂರಿಗೆ ಮುತ್ತಿಗೆ ಹಾಕಿ ನಡೆದ ಯುದ್ಧದಲ್ಲಿ ಸೋತು ಶ್ರೀ ಸ್ವಾಮಿಗೆ ಶರಣಾಗತರಾಗಿ ಕಪ್ಪಕಾಣಿಕೆ ಸಲ್ಲಿಸಿರುವುದನ್ನು ಇಂದಿಗೂ ಇಲ್ಲಿ ಪ್ರಚಲಿತವಿರುವ ಮುತ್ತಿಗೆ ಪದಗಳಿಂದ ತಿಳಿಯುತ್ತದೆ. ಅಲ್ಲದೆ ಶ್ರೀ ವೀರಭದ್ರ ದೇವರ ಗರ್ಭಗುಡಿಯಲ್ಲಿ ಬಿದ್ದಿರುವ ಕಬ್ಬಿಣದ ಗುಂಡುಗಳು ಸ್ಥಿರಪಡಿಸುತ್ತವೆ. ಅಲ್ಲದೆ ಗುಂಡುಗಳು ಶ್ರೀ ವೀರಭದ್ರ ದೇವರ ಮೂರ್ತಿಗೆ ತಗುಲಿ ಮೂರ್ತಿಯು ಭಿನ್ನವಾಗಿರುವುದು ಕಂಡು ಬರುತ್ತದೆ.

ಈ ಮಠವನ್ನು ಹರಪನಹಳ್ಳಿಯ ರಂಗಪ್ಪ ನಾಯಕನು ಕಟ್ಟಿಸಿದ್ದಾನೆ. ಈ ಯುದ್ಧದಲ್ಲಿ ಜಯಗಳಿಸಿದ ಸಂಕೇತವಾಗಿ ಹರಪನಹಳ್ಳಿ ಸೋಮಶೇಖರ ರಾಜನು ಶ್ರೀ ವೀರಭದ್ರ ದೇವರ ಗರ್ಭಗುಡಿಯ ಮೇಲಿನ ಗೋಪುರದಂತೆಯೇ ಇರುವ ಬಹುದೊಡ್ಡದಾದ ಗೋಪುರವನ್ನು ಗುಡಿಯ ಮುಂಭಾಗದಲ್ಲಿ ನಿರ್ಮಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರನಾಗಿರುವುದು ಕಂಡು ಬರುತ್ತದೆ.

ಹರಪನಹಳ್ಳಿ ನಾಯಕರು ತಮ್ಮ ಮೇಲೆ ವೈರಿಗಳ ಉಪದ್ರವವು ಹೆಚ್ಚಾಗಿದ್ದ ಕಾಲದಲ್ಲಿ ತಮ್ಮ ರಾಜ್ಯಾಡಳಿತವನ್ನು ಶ್ರೀ ಗುರುಬಸವಸ್ವಾಮಿಗೆ ವಹಿಸಿಕೊಟ್ಟಿದ್ದರೆಂಬುದಾಗಿ ಶಾಸನಗಳಿಂದ ತಿಳಿದು ಬರುತ್ತದೆ.

ಈ ಮಠದ ಗರ್ಭಗುಡಿಯ ಮುಂಭಾಗದಲ್ಲಿ ಶ್ರೀ ಗುರುಕೊಟ್ಟೂರೇಶ್ವರ ಸ್ವಾಮಿಯ ವೃಷಭ ಮುಖದ ಬೆಳ್ಳಿಯ ಮೂರ್ತಿ ಇದೆ. ಪ್ರತಿದಿನ ಬ್ರಾಹ್ಮೀ ಮಹೂರ್ತದಲ್ಲಿ ಈ ಮೂರ್ತಿಗೆ ತ್ರಿಕರಣ ಶುದ್ಧಿಯಿಂದ ಪ್ರಜೆ ಅಭಿಷೇಕಗಳು ತಪ್ಪದೇ ಇಂದಿಗೂ ನಡೆಯುತ್ತಲಿದೆ. ಪ್ರತಿವರ್ಷ ಉತ್ಸವದ ದಿನಗಳಲ್ಲಿ ಬಣ್ಣ ಬಣ್ಣದ ನಯನ ಮನೋಹರ ವಿದ್ಯುತ್ ದೀಪಗಳಿಂದ ಶ್ರೀ ಸ್ವಾಮಿಯ ಗೋಪುರವು ಅಲಂಕೃತಗೊಂಡು ಪರಿಶೋಭಿಸುತ್ತದೆ. ಈಗ ಪ್ರತಿ ಅಮಾವಾಸ್ಯೆಗೆ ಭಕ್ತರು ಬಂದು ಶ್ರೀ ಸ್ವಾಮಿಯ ದರ್ಶನ ಆಶೀರ್ವಾದ ಪಡೆದು ಧನ್ಯರಾಗುತ್ತಿದ್ದಾರೆ. ಈ ಮಠದಲ್ಲಿ ಪ್ರತಿನಿತ್ಯ ತ್ರಿಕಾಲದಲ್ಲಿ ಕರುಣ ಪ್ರಸಾದ ನಡೆಯುತ್ತದೆ.

ಈ ಮಠದಲ್ಲಿ ಮೊಘಲ್ ಚಕ್ರವರ್ತಿ ಅಕ್ಬರ್ ಮಹಾಶಯ ಶ್ರೀಸ್ವಾಮಿಗೆ ಭಕ್ತಿ ಪೂರ್ವಕವಾಗಿ ಕೊಟ್ಟಿರುವ ಬೆಳ್ಳಿಯ ಖಡ್ಗವು ಇಂದಿಗೂ ಇದೆ. ಆದರೆ ಇದರ ಹಿಂದೆ ಹಿನ್ನೆಲೆ ಇದೆ. ಇಲ್ಲಿನ ಜನರು ಇದನ್ನು ಅಕ್ಬರ್‌ನೇ ಕೊಟ್ಟಿದ್ದಾನೆಂದು ಹೇಳುತ್ತಾರೆ. ಆದರೆ ಮೂಲತಃ ಈ ಮಠವು ಶ್ರೀ ವೀರಭದ್ರನ ಸ್ಥಾನವಾಗಿದ್ದರಿಂದ ಈ ಖಡ್ಗ ಶ್ರೀ ವೀರಭದ್ರನದೇ ಆಗಿರಬಹುದೆಂಬ ಸಂಶಯ ಬರದೇ ಇರಲಾರದು. ಅಷ್ಟೇ ಸತ್ಯವೂ ಹೌದು.

೩. ತೊಟ್ಟಿಲು ಮಠ :

ಹಿರೇಮಠಕ್ಕೆ ಸಮೀಪದಲ್ಲಿ ಅಂದರೆ ಪೂರ್ವಕ್ಕೆ ತೊಟ್ಟಿಲು ಮಠವಿದೆ. ಈ ಮಠದ ಸ್ಥಳದಲ್ಲಿ ನಂಬಿಯಕ್ಕ ಎಂಬ ಶಿವಭಕ್ತಳಿದ್ದಳು. ಇವಳು ಮಕ್ಕಳಿಲ್ಲದೆ ಕೊರಗುತ್ತಿದ್ದಳು ಈ ಕಾರಣಕ್ಕಾಗಿ ಶ್ರೀ ಗುರುಬಸವನ ಕೃಪೆಗೆ ಪಾತ್ರಳಾಗಿ ಬೇಡಿಕೊಂಡಳು. ಶ್ರೀ ಗುರುಬಸವೇಶ್ವರ ಚಿಕ್ಕವನಿದ್ದಾಗ ವಾರಿಗೆ ಹುಡುಗರೊಡನೆ ಆಟವಾಡುತ್ತಿದ್ದನ್ನು ನೋಡಿ ಮನೆಗೆ ಕರೆದು ಕೊಂಡುಬಂದಳು. ಮಕ್ಕಳಿಲ್ಲದ ನಂಬಿಯಕ್ಕ ಆತನ ಲಾಲನೆ ಪಾಲನೆಯಲ್ಲಿ ತೊಡಗಿ ಮಗನಂತೆ ರಕ್ಷಿಸಿದಳು. ಮನೆಯಲ್ಲಿದ್ದು ಕೊಂಡು ಈ ಬಾಲಕನು ಆಕಳುಗಳನ್ನು ಕಾಯುವ ಕಾಯಕ ಮಾಡುತ್ತಿದ್ದನು. ಈ ಹುಡುಗನನ್ನು ಆಟವಾಡಿಸುವುದಕ್ಕಾಗಿ, ತೊಟ್ಟಿಲಲ್ಲಿಟ್ಟು ತೂಗಲಿಕ್ಕಾಗಿ, ಮಲಗಿಸಲಿಕ್ಕಾಗಿ ಒಂದು ತೊಟ್ಟಿಲನ್ನು ಕಟ್ಟಿದ್ದಳು. ಈ ಚಿಕ್ಕ ಹುಡುಗನನ್ನು ಆ ತೊಟ್ಟಿಲಲ್ಲಿಟ್ಟು ತೂಗಿ ಮಕ್ಕಳ ಅಭಿಲಾಷೆಯನ್ನು ಕಳೆದು ಕೊಳ್ಳುತ್ತಿದ್ದಳು. ಈತನ ಮಹಿಮೆಯಿಂದಲೇ ನಂಬಿಯಕ್ಕ ಶಿವಭಕ್ತಿ ಸಂಪನ್ನಳಾಗಿ ಮಕ್ಕಳ ಕೊರಗನ್ನು ನೀಗಿಸಿಕೊಂಡಳು.

ಮುಂದೆ ಈ ಬಾಲಕನೇ ಪವಾಡ ಪುರುಷನಾಗಿ ಮೆರೆದಾಗ ತೊಟ್ಟಿಲ ಮಠ ರಚನೆಗೊಂಡಿತು. ಅದು ಕಾಲಕ್ರಮೇಣ ತೊಟ್ಟಿಲು ಮಠವೆಂದೇ ಪ್ರಸಿದ್ಧಿಯಾಯಿತು. ಈಗಲೂ ಸಹ ಈ ಮಠದಲ್ಲಿ ತೊಟ್ಟಿಲು ಇದೆ. ನಾನಾ ಕಡೆಯಿಂದ ಅನೇಕ ಭಕ್ತರು ಮತ್ತು ಸಂತಾನ ಬಯಸುವ ಸ್ತ್ರೀಯರು ಈ ತೊಟ್ಟಿಲು ಮಠಕ್ಕೆ ಬಂದು ಶ್ರೀ ಸ್ವಾಮಿಯ ದರ್ಶನಾರ್ಶಿವಾದ ಪಡೆದು ಅಲ್ಲಿರುವ ತೊಟ್ಟಿಲನ್ನು ಭಕ್ತಿಯಿಂದ ತೂಗಿದರೆ ಸಂತಾನ ಪಡೆಯ ಬಹುದೆಂಬ ನಂಬಿಕೆ ಇದೆ. ಇತ್ತೀಚೆಗೆ ಈ ಮಠವು ಬಹು ಶೋಭಾಯಮಾನವಾಗಿ ಭಕ್ತರ ಸಹಕಾರದೊಂದಿಗೆ ನವೀಕರಣಗೊಂಡಿದೆ.

೪. ಗಚ್ಚಿನ ಮಠ :

ಕೊಟ್ಟೂರಿನ ಪೂರ್ವದಿಕ್ಕಿಗೆ ಅಂದರೆ ಕೊಟ್ಟೂರಿನ ಪೂರ್ವದ ದಿಕ್ಕಿಗೆ ಈ ಮಠವು ಕಾಣ ಸಿಗುತ್ತದೆ. ಶ್ರೀ ಗುರುಬಸವೇಶ್ವರರು ರಾಜದರ್ಬಾರು ನಡೆಸುತ್ತಿದ್ದ ಕಾಲದಲ್ಲಿ ಊರ ಹೊರಭಾಗದಲ್ಲಿ ಶಾಂತ ವಾತವರಣದಲ್ಲಿ ವಿಶ್ರಾಂತಿ ಪಡೆಯಲು ಹಾಗೂ ರಾತ್ರಿಯ ವೇಳೆ ನಿದ್ರೆ ಗೈಯಲು ಈ ಭವ್ಯವಾದ ಕಲ್ಲಿನ ಕೆತ್ತನೆವುಳ್ಳ ಮಠವನ್ನು ಕಟ್ಟಿಸಿದ್ದಾರೆ. ಈಗಲೂ ಸಹ ಹಿರೇಮಠದಿಂದ ರಾತ್ರಿ ೯:೦೦ ಗಂಟೆ ಸುಮಾರಿಗೆ ಬುತ್ತಿ ಗಚ್ಚಿನ ಮಠಕ್ಕೆ ಹೋಗುತ್ತದೆ. ಅಂದರೆ ಅಂದು ಶ್ರೀ ಗುರುಕೊಟ್ಟೂರೇಶ್ವರರು ವಿಶ್ರಾಂತಿಗೆಂದು ಕೂತಿರುವಾಗ ಹಿರೇಮಠದಿಂದ ಅನ್ನದ ಬುತ್ತಿ ಹೋಗುತ್ತಿದ್ದುದು ಗಮನಾರ್ಹ.

ಈ ಮಠವು ವಾಸ್ತುಶಿಲ್ಪ ದೃಷ್ಟಿಯಿಂದ ನೋಡಲು ಈ ಮಠದ ಕಟ್ಟಡವು ಶಿಲಾ ಕಂಬಳ ಜೋಡಣೆಯಿಂದ ಕೂಡಿದ್ದು, ಭವ್ಯವಾದ ಚಾರಿತ್ರಿಕ ಪರಂಪರೆಯನ್ನುಳ್ಳ ಮನಮೋಹಕ ಶಿಲ್ಪ ಕಲಾಕೃತಿಗಳ ಏಕೈಕ ಮಠವಾಗಿದೆ. ಶಿಲ್ಪಿಗಳು ಕಲ್ಲುಗಳಿಂದ ಕೆತ್ತುವಾಗ ಕಲ್ಲುಗಳ ಹೃದಯದ ಜೊತೆಗೆ ಸಮರಸವಾಗಿ ಬೆರೆತು ಕಲ್ಲಾಗಿ ನಿಂತುಕೊಳ್ಳದೆ, ಕಲಾ ಸರಸ್ವತಿಯ ಕಲಾ ಸಾಧನೆಯ ಬೆಣ್ಣೆಯಾಗಿ ಬೆರೆತು ಗುಡಿಯ ನಿರ್ಮಾಣ ಕಾರ್ಯ ಮಾಡಿರುವುದು ಗೋಚರವಾಗಿ ಪ್ರೇಕ್ಷಕರಿಗೆ ಅಚ್ಚರಿಯನ್ನುಂಟು ಮಾಡುತ್ತದೆ.

ಶಿವನ ಇಪ್ಪತ್ತೈದು ಲೀಲೆಗಳು ಶರಣರ ಚಿತ್ರಗಳು ಶಿಲಾ ಕಂಬಗಳಲ್ಲಿ ಕೆತ್ತನೆಯಾಗಿವೆ. ಒಂದು ಕಂಬದಲ್ಲಿ ಮಾತ್ರ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿ ಕೆತ್ತನೆಯಾಗಿದೆ. ೧೬ನೇ ಶತಮಾನದ ಮೊಗಲ್ ಚಕ್ರವರ್ತಿ ಅಕ್ಬರನು ಶ್ರೀಸ್ವಾಮಿ ಕೃಪೆಗೆ ಪಾತ್ರನಾಗಿ ಭಕ್ತಿ ಪೂರಕವಾಗಿ ಕೊಟ್ಟಿರುವ ರತ್ನ ಖಚಿತವಾದ ಮಣಿಮಂಚವೂ ಇಂದಿಗೂ ಈ ಮಠದಲ್ಲಿದೆ. ಇದನ್ನು ಹಿಂದೂ–ಮುಸ್ಲಿಮರ ಭಾವೈಕ್ಯತೆಯ ಸಂಕೇತವೆಂದು ತಿಳಿಯ ಬಹುದಾಗಿದೆ. ಆಗಿನ ಕಾಲಕ್ಕೆ ಸದರಿ ಮಠಕ್ಕೆ ಗಚ್ಚು ಮಾಡಿರುವುದರಿಂದ ಇದಕ್ಕೆ ಗಚ್ಚಿನ ಮಠವೆಂದು ಹೆಸರು ಬಂದಿರಬಹುದಾಗಿದೆ.

ಈ ಮಠದ ಮಧ್ಯಭಾಗದ ಯೋಗಮಂಟಪದಲ್ಲಿ ಶ್ರೀ ಸ್ವಾಮಿಯು ಜೀವಂತ ಸಮಾಧಿಯಾದರೆಂದು ಪುರಾಣ ಗ್ರಂಥಗಳಿಂದ ತಿಳಿಯುತ್ತದೆ. ಆದಕಾರಣ ಸದರಿ ಮಠವನ್ನು ಭಕ್ತರು ಜೀವಂತ ಸಮಾಧಿ ಯೋಗ ಮಠವೆಂದು ಸಹ ಕರೆದಿದ್ದಾರೆ. ಈ ಮಠದ ಮುಂಭಾಗದಲ್ಲಿ ಬಹು ದೊಡ್ಡದಾದ ಹಾಗೂ ವಿಶಾಲವಾದ ನೂರಾರು ಮೆಟ್ಟಿಲುಗಳ ನೀರಿನ ಹೊಂಡವಿದೆ. ಇದಕ್ಕೆ ಪನ್ನೀರಮ್ಮನ ಬಾವಿಯೆಂದು ಕರೆಯುತ್ತಾರೆ.

೫. ಮರಿ ಮಠ (ಮರಿ ಕೊಟ್ಟೂರೇಶ್ವರ ಮಠ):

ಇದನ್ನು ಆಶಿರ್ವಾದ ಮಠವೆಂದು ಕರೆಯಲಾಗುತ್ತದೆ. ಇದು ಊರಿನ ಪಶ್ಚಿಮಕ್ಕೆ ಇರುವ ಪ್ರವಾಸಿ ಮಂದಿರದ ಎಡಭಾಗದಲ್ಲಿದೆ. ಇಲ್ಲಿ ಶ್ರೀ ಮರಿಕೊಟ್ಟೂರೇಶ್ವರವೆಂದು ಜನರು ಒಂದು ಶಿಲಾಮೂರ್ತಿಯನ್ನು ಪೂಜಿಸಿಕೊಂಡು ಬಂದಿದ್ದಾರೆ. ಇದು ಶ್ರೀ ಗುರುಬಸವೇಶ್ವರರು ಐಕ್ಯಸ್ಥರಾದ ನಂತರ ಅವರು ಮೆರೆಸಿದ ಪವಾಡದ ದ್ಯೋತಕವಾಗಿದೆ. ಹರಪನಹಳ್ಳಿಯ ಶ್ರೀ ಸೋಮಶೇಖರನು ರಾಜ್ಯಕ್ಕೆ ಕೊಟ್ಟೂರಿಗೆ ಶಿದ್ದೋಜಿ ಮುರಾರಿ ಮತ್ತು ಮದಕರಿ ನಾಯಕರು ಮುತ್ತಿಗೆ ಹಾಕಿದಾಗ ಸೋಮಶೇಖರನು ಕೊಟ್ಟೂರೇಶ್ವರನನ್ನು ಧ್ಯಾನಿಸಲು ಶ್ರೀಸ್ವಾಮಿಯು ಜಂಗಮ ರೂಪದಿಂದ ಬಂದು ವೈರಿಗಳನ್ನು ಸೋಲಿಸಿ ಸೋಮಶೇಖರನನ್ನು ಆಶೀರ್ವಾದ ಮಾಡಿದ ಸ್ಥಳ. ಆದ್ದರಿಂದ ಇದು ಆಶೀರ್ವಾದ ಮಠವೆಂದು ಹೆಸರಾಗಿದೆ.

ಕ್ರಿ.ಶ. ೧೯೦೦ ರಲ್ಲಿ ಇಲ್ಲಿನ ಭಕ್ತರು ನೂತನವಾಗಿ ಈ ಮಠವನ್ನು ಕಟ್ಟಿಸಿದ್ದಾರೆ. ಶ್ರೀ ಮರಿಕೊಟ್ಟೂರೇಶ್ವರ ಸಮಿತಿ (ರಿ) ಈ ಮಠದ ಉಸ್ತುವಾರಿಯನ್ನು ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಿದೆ. ನಿತ್ಯವೂ ಶ್ರೀ ಮಠದಲ್ಲಿ ಪಂಚಾಮೃತಾಭಿಷೇಕದ ಪೂಜೆಯು ಭಕ್ತರ ಹೆಸರಿನಲ್ಲಿ ನಡೆಯುತ್ತಿದೆ. ಭಕ್ತರ ಹೆಸರಿನಲ್ಲಿ ನಡೆಯುವ ಪೂಜಾ ದಿನಾಂಕವನ್ನು ಪೋಸ್ಟ್ ಮೂಲಕ ತಿಳಿಸುವ ವ್ಯವಸ್ಥೆಯನ್ನು ಮಠದ ಸಮಿತಿಯವರು ಮಾಡಿರುವುದರಿಂದ ನಿತ್ಯವೂ ಶ್ರೀ ಸ್ವಾಮಿಯ ದರ್ಶನ, ಆಶಿರ್ವಾದ ಸರ್ವರಿಗೂ ದೊರೆಯುತ್ತದೆ.

ಒಟ್ಟಾರೆಯಾಗಿ ಕೊಟ್ಟೂರು ಎಂಬುದು ಸುಮಾರು ೪೨ ದೇವಾಲಯಗಳ ಸ್ಥಳವಾಗಿದೆ. ಈ ಐದು ಮಠಗಳನ್ನು ಹೊರತು ಪಡಿಸಿ ಚಾನುಕೋಟೆ ಮಠ, ಭೂತಭುಜಂಗಯ್ಯನ ಮಠ, ಸಿರಿಮಠ, ಜೈನಮಂದಿರ, ಕನ್ನಿಕಾಪರಮೇಶ್ವರಿ ದೇವಾಲಯ, ಊರಮ್ಮ ದೇವಾಲಯ, ಗದ್ದಿಕಲ್ಲೇಶ್ವರ ಗುಡಿ ಹೀಗೆ ಸುಮಾರು ೪೨ ದೇವರ ದೇವಾಲಯಗಳ ಆಗರವೇ ಈ **'ಕೊಟ್ಟೂರು'** ಎಂದರೂ ತಪ್ಪಾಗಲಾರದು.

ಅಡಿ ಟಿಪ್ಪಣಿ :

೧. **'ಕೊಟ್ಟೂರು ಪ್ರದೇಶದ ಜನ ಜೀವನದಲ್ಲಿ ಮಠ ಮಾನ್ಯಗಳು'**- ಬಿ.ಸಿ. ವಿಶ್ವಮೂರ್ತಿ, ಪುಸ್ತಕ **'ಪರಿಪೂರ್ಣ'**, ಪುಟ ಸಂಖ್ಯೆ ೮೮. ಪ್ರಕಾಶನ- ಪ್ರಣವ ಪ್ರತಿಷ್ಠಾನ ಬೆಂಗಳೂರು.

೨. ಊರಿನ ಪ್ರಮುಖರು ಸಂದರ್ಶನದಿಂದ ಮಾಹಿತಿ ಪಡೆಯಲಾಗಿದೆ.

೩. ಧಾರ್ಮಿಕ ಕಾರ್ಯಕರ್ತರು-ಕೊಟ್ಟೂರು ಇವರಿಂದ ಮಾಹಿತಿ ಪಡೆಯಲಾಗಿದೆ.



ಅಧ್ಯಾಯ : ಐದು

ಕೊಟ್ಟೂರಿನ ಜನಪದರ ಆಚರಣೆಗಳು

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೊಟ್ಟೂರಿನ ಸಾಂಸ್ಕೃತಿಕ ಚರಿತ್ರೆಯನ್ನು ಕೆರೆ, ಬಾವಿ, ಗುಡಿ ಗುಂಡಾರ, ಶಿಲ್ಪಶಾಸನ ಇತ್ಯಾದಿ ಗೋಚರ ರೂಪದ ಆಕರಗಳಂತೆ ಮೌಖಿಕ ರೂಪದಲ್ಲಿ ಉಳಿದುಕೊಂಡು ಬಂದಿರುವ ಜನಪದ ಸಾಹಿತ್ಯದ ಪ್ರಕಾರ ರೂಪಗಳಾದ ಗಾದೆ, ಒಗಟು, ಐತಿಹ್ಯ, ಪುರಾಣ, ಹಾಡು, ಕಥೆ ಮುಂತಾದವುಗಳ ಸಹಾಯದಿಂದಲೂ ಕಟ್ಟಬಹುದಾಗಿದೆ.

ಜನಪದ ಸಾಹಿತ್ಯ ಸೃಷ್ಟಿಸಿದವರು ಅಕ್ಷರ ಜ್ಞಾನವಿಲ್ಲದ ಅಪರಿಚಿತ ಜನಸಾಮಾನ್ಯರು ಅನಾಮಧೇಯರು. ಜನಪದ ಸಾಹಿತ್ಯ ಜನ ಸಮುದಾಯ ಬಿತ್ತಿದ ಬೆಳೆ, ಅವರಿಗೆ ಅತ್ಯಂತ ಹತ್ತಿರವಾಗಿರುವ ಸಂಪತ್ತು. ಅದು ಅವರ ನಿತ್ಯ ಜೀವನಾನುಭವದ ರಸಪಾತ, ಅದು ಹೂವಿನ ಮಕರಂದವಷ್ಟೇಲ್ಲ. ದುಂಬಿ ತಯಾರಿಸಿದ ರಸ ಜೇನು. ಇಂತಹ ಜನಪದರು ಬಸವಣ್ಣನವರ ಬಗೆಗೆ ಇಟ್ಟು ಕೊಂಡಿರುವ ಶ್ರದ್ಧಾಭಕ್ತಿಗಳು ಅನನ್ಯ.

ಹಳ್ಳಿಯ ತಾಯಿಯೊಬ್ಬಳು ಬೀಸುವಾಗ ಹಾಡುವ ಒಂದು ತ್ರಿಪದಿ ಹೀಗಿದೆ.

ಶರಣರ ನೆನೆದರ ಸರಗೀಯ ಇಡಿದ್ಹಾಂಗೆ
ಅರಳು ಮಲ್ಲಿಗೆ ಮುಡಿದ್ಹಾಂಗ ಕೊಟ್ಟೂರು
ಶರಣರ ನೆನೆಯೋ ನನ ಮನವೇ.

ಬೆಳ್ಳಿಚುಕ್ಕಿ ಮೂಡಿದಾಗ ಎದ್ದು ಕೊಟ್ಟೂರ ಶರಣರನ್ನು ನೆನೆವ ಹದಿಬದಿಯರ ಜನ್ಮ ಪಾವನ. ಶರಣರಲ್ಲಿ ಶರಣ ಗುರು ಬಸವ ನಮ್ಮ ಜನಪದರ ಕಣ್ಣಣಿ. ಇವರ ಬಗ್ಗೆ ಅಪಾರವಾದ ಭಕ್ತಿ ಅಭಿಮಾನದ ಹೊಳೆ ಹರಿಸಿದ್ದಾರೆ. ಇದು ಜನಪದರ ಕೆಳಗಿನ ತ್ರಿಪದಿಯ ಮೂಲಕ ವ್ಯಕ್ತವಾಗುತ್ತದೆ.

ಭೂಮಿ ಹುಟ್ಟುವ ಮುನ್ನ ಭೂಮಿ ಕಟ್ಟುವ ಮುನ್ನ
ಭೂಪ ಹುಟ್ಟಿದ ಗುರುಬಸವ ಮ್ಯಾಗಿನ
ಶಿವನೇಳು ದಿನಕ ಹಿರಿಯಾನು.

ಅಂದರೆ ಶಿವನಿಗಿಂತ ಗುರುಬಸವನು ಏಳು ದಿನ ಹಿರಿಯವನಂತೆ ಈ ಕಲ್ಪನೆ ಜನಪದರಿಗೆ ಗುರುಬಸವನ ಮೇಲೆ ಇಟ್ಟ ಸದ್ಭಾವನೆಯನ್ನು ತಿಳಿಸುತ್ತದೆ.

ಗುರುಬಸವನ ಕಾಲ ಮತ್ತು ಜೀವನದ ಬಗ್ಗೆ ಜನಪದರು ತಲೆ ಕೆಡಿಸಿಕೊಳ್ಳುವುದಿಲ್ಲ. ಜನಪದರಿಗೆ ಬೇಕಾಗುವುದು ಗುರುಬಸವರು ಮಾತ್ರ. ಅವರ ಕಾಲ ಮತ್ತು ಜೀವನವಲ್ಲ.

ಜನಪದರು ನುಡಿದ ಈ ಕೆಳಗಿನ ಹಾಡುಗಳು ಇವರು ಕಂಡ ಗುರುಬಸವನ ದಿವ್ಯ ಚಿತ್ರಣ ನಮ್ಮ ಕಣ್ಮುಂದೆ ನಿಲ್ಲುತ್ತದೆ.

ಕರುಣ ಬಂದರೆ ಕಾಯೋ, ಮರಣ ಬಂದರೆ ಒಯ್ಯೋ
ಕರುಣೆ ಕೊಟ್ಟೂರು ಗುರುಬಸವ ಮಾ ಗುರುವೆ
ಕಡೆತನಕ ಕಾಯೋ ಅಭಿಮಾನ.
ಮಲ್ಲಿಗೆ ಇರುವಾಗ ಮುಳ್ಯಾಕೆ ಮುಡಿತೀಯ
ಕೊಟ್ಟೂರು ಗುರುಬಸವ ಇರುವಾಗ
ಕಲ್ಯಾಕ ಕೈಯ ಮುಗಿತೀಯ ?
ಬೇಡೆನಗೆ ಕೈಲಾಸ ನೀಡೆನೆಗೆ ಶಿವಭಕ್ತಿ
ಮಾಡುವೆನು ಸೇವೆ ಶಿವಮತಕ್ಕೆ ಶರಣರಿಗೆ
ನಾಡ ಕಾಯಕವೇ ಕೈಲಾಸ ।.

ಹೀಗೆ ಅವರಿಗೆ ಗುರುಬಸವನೇ ಸರ್ವಸ್ವ. ಅವನು ಎಲ್ಲಬಲ್ಲಿದ ಅವನ ಸೊಲ್ಲು ಅವರಿಗೆ, ಮಂತ್ರ ಅಷ್ಟೇ ಅಲ್ಲ ಹರ ಕಾಯುವ ತನಕ ಶರಣು ಶರಣು ಎನ್ನುವ ನಿಷ್ಠಾಭಕ್ತಿ ಅವರದು.

೫:೧. ಜನಪದರ ಹಾಡುಗಳು:

೧. ಅಪ್ಪ ಕೊಟ್ರಯ್ಯ ಕಪ್ಪೇಲಿ ಕಡುಚೆಲುವ
ಇಟ್ಟು ಬಂಗಾರಕ ಹೊಳದಾನ। ಕೊಟ್ರಯ್ಯ
ಗಚ್ಚೀನ ಪವಳ್ಯಾಗ ನೆನದಾನ

೨. ಎಲ್ಲಾ ದೇವರ ಪೂಜೆ ಕಲ್ಲಕಟ್ಟೆಯ ಮ್ಯಾಲ
ಕೊಟ್ರಯ್ಯನ ಪೂಜೆ ಮರಡೀಲಿ। ಕೊಟ್ರಯ್ಯ
ಅಪ್ಪಾನಿನ್ನ ಪೂಜೆ ಅರ್ತಿಲಿ.

೩. ಕುಂತರ ನಿಮಧ್ಯಾನ ನಿಂತರ ನಿಮಧ್ಯಾನ
ನಿದ್ರಿಗಣ್ಣಿಲಿ ನಿಮಧ್ಯಾನ। ಕೊಟ್ಟೂರ
ಸ್ವಾಮಿ ನಿಮಧ್ಯಾನ ಮನದಾಗ.

೪. ಕೊಟ್ರಯ್ಯ ಹೋಗಾಕ ಮಲ್ಲಿಗಿಹೂ ಬೇಕ
ಬಾಳಿಗೊನಿ ಬೇಕ ಎರಡು। ಕೊಟ್ಟೂರು
ಕೊಟ್ರಯ್ಯಗೆ ಹೋಗಿ ಬರುವೇನ

೫. ಊರ ಜನರಲ್ಲಿ ನಡದಾರ ಕೊಟ್ಟೂರ ಜಾತ್ರೀಗಿ
ನಾ ಏನ ಒಯ್ಲಿ ಹಡದವ್ವ। ನಾನು
ಹಿಡಿಯಲ್ಲಿ ಒಯಿತಿನಿ ಹಿಡಿಹೊನ್ನ.

೬. ಕೊಟ್ಟೂರು ಬಸವಣ್ಣನ ತೇರೆಳಿಯುತಿರುವಾಗ
ತೀರಲಿಲ್ಲ ನನ್ನ ಮನಿಗೆಲಸ। ಹಡದವ್ವ
ಇಲ್ಲಿಂದ್ಲೆ ನಾ ಕೈ ಮುಗದೇನ.

೭. ಗುರುವಿನ ಮಠದಾಗ ತಿರುಗಾಡುವವರ್‍ಯಾರೆ
ರೇಷ್ಮೆ ದೋತರದ ದೊರೆಮಗ। ಕೊಟ್ರಯ್ಯ
ಗುರು ಸೇವೆ ಮಾಡಿ ಬರುತಾರ.

೮. ಹಂಪಿ ಹೊಳಿ ಚಂದ ಪಂಪನ ಗುಡಿ ಚಂದ
ಕೊಟ್ಟೂರು ಚಂದ ಪರಸಿಗೆ। ಕೊಟ್ರಯ್ಯನ
ಧ್ಯಾನ ಚಂದ ಪ್ರಜೆಗಳಿಗೆ.

೯. ಕುಂಬಳ ಹೂವ ಚೆಂದ ಕುಂಬಳದ ಕಾಯಿ ಚಂದ
ಈಭೂತಿ ಚಂದ ಹಣಿಮ್ಯಾಲ। ಕೊಟ್ರಯ್ಯಾ
ಲಿಂಗಯ್ಯ ಚಂದ ಊರಾಗ.

೫:೨. ಮುತ್ತಿಗೆ ಪದಗಳು :

॥ ಶ್ರೀ ಗುರು ಪ್ರಸನ್ನಃ ॥

ಶ್ರೀ ಗುರು ಕೊಟ್ಟೂರು ಬಸವೇಶ್ವರರು ಜಿವಂತಯೋಗ ಸಮಾಧಿಯಾದ ನಂತರ ನಡೆದ ಪವಾಡ ಅರ್ಥಾತ್ ಕೊಟ್ಟೂರು ಮುತ್ತಿಗಿ ಪದ

ಪರಮ ಶ್ರೀ ಗುರು ರಾಯ ಕೊಟ್ಟೂರಧೀಶ್ವರನೇ।
ನೆರೆಬಾಗುಳಿಯ ಕುಲಕೆ ಶಿಖಾರತ್ನವೆಂದೆನಿಪ॥
ವರ ಸೋಮಶೇಖರಂ ಗಭಯಹಸ್ತವನಿತ್ತು।
ಕರಮುರಾರಿಯ ಮರ್ದಿಸಿದೆ ಭಲಾ ಭಲಾ ॥ಪ॥

ಹರಪುರದ ಸಂಸ್ಥಾನ ನೆರೆ ನಿನ್ನದೆಂದೆನಿಸಿ।
ಯಿರುತಿರಲು ಕೊಟ್ಟೂರ ಪುರವನೀನಾಳುತ್ತ।
ಪರಮ ಸಿದ್ಧೋಜಿ ಮುರಾರಿಯ ದಂಡು ಬರಲಾಪುರವತಲ್ಲಣಿಸಿತಾಗ॥

ತುರಗ ಗಜ ಸಾವಿರಾರು ಸಾವಿರವು ಕಾಲಾಳು।
ನೆರೆ ಹತ್ತು ಸಾವಿರವುನೂರೆಂಟು ರಥ ಸಹಿತ।
ಮೊರೆದು ಘರ್ಜಿಸುತ್ತಫಿರಂಗಿಪೆಟ್ಟಲು ಬಾಣಮಕರ ಬಿಬ್ಬಿಯು ಬಂದವು॥
ಘುಡಿ ಘುಡಿಸಿ ಸಿದ್ಧೋಜಿ ಮುರಾರಿ ಈರ್ವರು।
ಕಡು ಹರುಷದಿಂದ ಗಜವೇರಿ ತಾವ್ಬರುತಿರಲು।
ಹೊಡೆವ ಭೇರಿಯು ಕಹಳೆ ಭೋರೆಂಬ ಧ್ವನಿಯಿಂದ
ಪಟು ಭಟರು ಉಗ್ಘಡಿಸುತಾ॥
ಎಡಗಾಲು ಮುತ್ತಿನ ಪೆಂಡೆ ಮುಂಗಲಿ ಗೂಟ॥
ಮುಡಿದ ತುರಾಯಿ ಎಳೆಮೀಸೆಯನು ತಿದ್ದುತ್ತ।
ಹಿಡಿ ಸೋಮಶೇಖರನ ಎದೆಯ ಗಂಟಲುಗಾಣಎಂಬ ಛತ್ರವನು ಹಿಡಿಸಿ॥೨॥

ಯೆಡಬಲದಿ ನಿಶಾನೆ ಚತುರಂಗ ಮಾರ್ಬಲ ಕೂಡಿ।
ನಡೆದು ಬಂದಿತು ದಂಡು ರುಧಿರೋದ್ಗಾರಿ ಸಂವತ್ಸರದಲಿ ।
ಕಡು ಮಘ ಬಹುಳ ಅಷ್ಟಮಿಯು ಶನಿವಾರದೊಳು ಜಡಿದು
ಜಾಂಡೆವು ನಿಂತವು॥

ಪೊಡವಿಪತಿ ಸೋಮಶೇಖರ ಕೇಳಿ ತಲ್ಲಣಿಸಿ ।
ನಡುಪ್ಯಾಟಿ ಕೊಟ್ಟೂರುಯನ್ನಪ್ರಾಣವೆಯೆಂದು ।
ಒಡೆಯ ಕೊಟ್ಟೂರೇಶ ನೀನೆಗತಿಯೆಂದೆನುತ ಹೊರಳಿದನು ಚಿಂತೆಯೊಳಗೆ॥೩॥

ಪುರದ ಹಿರಿಯರು ಮಂತ್ರಿದಳವಾಯಿಗಳ ಕರೆಸಿ।
ಗುರಿಕಾರ ಕೈಜೀತ ಬೆಳ್ಳಕಟ್ಟಿನ ಮಂದಿ।
ಮೆರೆವ ಕೆಮ್ಮೀಸೆ ಭೋರ್ಗರೆವ ದೊಡ್ಡರಾವುತರ ಜಟ್ಟಿಮಲ್ಲರ ಕರೆಸುತಾ।
ನೆರೆಯನ್ನದೇವರಾ ಮನೆಗೆ ಮುರಾರಿಯೂ।
ಇರದೆ ಮುತ್ತಿಗೆ ಮಾಡಿಕೊಂಡಿಹನು ಹೇಗೆಂದು।
ದೊರೆ ಬಸವರಾಜೇಂದ್ರ ಎಮಗಪ್ಪಣೆ ಕೊಡುಯಂದು
ತೊಡೆಯ ಚಪ್ಪರಿಸಿ ನಿಲಲೂ ॥೪॥

ಹೀಗಿರಲು ಬಸವೇಂದ್ರ ಇತ್ತ ಕೊಟ್ಟೂರೊಳಗೆ।
ಬೇಗದಿಂ ಗುರುಹಿರಿಯ ಬಣಕಾರರುಗಳೆಲ್ಲ।
ಅಗಮ ಬಲ್ಲಂಥ ಶಾಸ್ತ್ರಪುರೋಹಿತರು ಶಾನಭೋಗರು ಗೌಡರು॥
ಈಗ ಬಂದಿತು ನಮಗೆ ಮರಣ ಪ್ರಾಪ್ತಿಯು ಎಂದು।
ಸಾಗಿ ಬಂದರು ಸ್ವಾಮಿ ಮಠಕೆಯೆಲ್ಲರು ಬೇಗ।
ನಾಗಭೂಷಣಲಿಂಗ ಜಂಗಮವೆ ಬಲಗಡೆಯ ಪುಷ್ಪನಮಗೀವುದೆಂದು॥೫॥

ಎಂದಮಾತಿಗೆ ಸ್ವಾಮಿ ಮಂಡೆ ಬಲಗಡೆ ಪುಷ್ಪ।
ಚಂದದಿಂದೊಂದಕ್ಕೆ ನೂರಾಗಿ ಚೆಲ್ಲಿದವೂ।
ಇಂದು ಬಸವನಿಗೆ ಜಯವು ಮುರಾರಿಗಪಜಯವು ಎಂದು
ಶ್ರೀಮುಖ ಬರೆದರೂ॥

ತಂದೆ ಬಾಗುಳಿಭೂಪ ನಿಮಗೆ ಬಿನ್ನಹವೆಂದು।
ಬಂದ ಶ್ರೀಮುಖವನ್ನು ನೋಡಿ ತಲೆಯೊಳಗಿಟ್ಟು।
ಇಂದು ಧರ ಕೊಟ್ಟೂರ ಪುರವಾಸ ನೀನೇಗತಿ ತಂದೆ ಶಂಕರ ಕರುಣಿಸೋ ॥೬॥

ಇತ್ತಲಾ ಸಿದ್ಧೋಜಿ ಮುರಾರಿ ಮುತ್ತಿಗೆ ಹಾಕಿ।
ಸುತ್ತುದಾರಿಯ ಕಾಯ್ದುಸವಾರಿ ಕುದುರೆಗಳಿಟ್ಟು।
ಎತ್ತೆತ್ತನೋಡಿದರೆ ಬಾಣಬತ್ತಳಿಕೆಯಿಂದ ಹೊಡೆವ ಫಿರಂಗಿಯಿಂದ॥
ಸುತ್ತಕಾಲಾಳು ಕೋವಿಯರ್ ಸಿಂಗಾಡಿಗರು॥
ಎತ್ತತ್ತಹೊಡೆವ ಮಕರ ಬಿಬ್ಬಿ ಗುಂಡುಗಳಿಂದಾ।
ಒತ್ತಿನೂಕಿದರು ಮೂರುಕಲ್ಲೊಳಗಾಯ್ತುಪಟ್ಟಣವು ಬೊಬ್ಬಿಡುತಲೀ ॥೭॥

ತಳ್ಳಿಸುರಂಗವ ಕೊರೆದು ಜೇರು ಮುತ್ತಿಗೆ ಹಾಕಿ।
ಘಳಿಲನಗುಳಂ ದಾಂಟಿ ಕೋಟೆ ಕೊತ್ತಲ ಬುಡಕೆ।
ಗೆಲುವಿಂದ ತಳಿವತ್ತಿಸುರಂಗವನೆ ಕೊರೆದು ಕೊತ್ತಳವ ಸಾರುವುದಕೆ॥
ಬಳಲಿ ಗ್ರಾಮವು ರಾಜ್ಯ ತಲ್ಲಣಿಸಿ ಚಿಂತೆಯೊಳು।
ಮುಳುಗಿ ಬಾಗುಳಿ ಭೂಪ ಘಳಿ ಘಳಿಗೆ ಸುದ್ದಿಯನು।
ಕಳಭಂಟ ಕಾಲಾರಿ ತೋರ ಕುದುರೆಗಳಿಂದ ತರಿಸಿ ತಲ್ಲಣ ಗೊಂಬುತಾ ॥೮॥

ಹಸಿವು ನಿದ್ರೆ ನೀರಡಿಕೆ ಇಲ್ಲದಿರೆ ಸ್ವಪ್ನದೊಳು।
ನಸುಗಾವಿ ಭಸಿತ ರುದ್ರಾಕ್ಷಿಸಜ್ಜೆಯ ವಸ್ತ್ರ।
ಭಸಿತಾಂಗದಿಂ ಬಂದು ಎಲೆ ಕಂದ ಚಿಂತೆ ನಿನಗೇಕೆ ನಾನಿರ್ದಬಳಿಕ॥
ಅಸಹಾಯ ಶರರಾದವರ ನೀಕಳುಹಲ್ಕೆ।
ಕುಸುಶಲದಿಂದ ವರಕೊಂಡೊಯಿದು ಕೋಟೆಯೊಳಗೆ।
ಹಸವಾಗಿ ನಾನವರ ಸಲಹುವೆಂದೆನಲು, ಎಚ್ಚೆತ್ತು ಕಣ್ತೆರದನೂ ॥೯॥

ಭರದಿಂದ ಎದ್ದುಪೇಳಿದ ತನ್ನಸತಿಯಳಿಗೆ।
ಹರಹರಾ ಈ ಸ್ವಪ್ನಸಟೆಯಲ್ಲವೆಂದೆನುತ।
ಗುರುಬಸವಲಿಂಗೇಶ ಸತ್ತೆಮ್ಮೆಕ್ಷೀರವನು ನಾರಿಶರಗಿನ ಕೌಪವಾ॥

ಹರುಷದಿಂ ಧರಿಸಲು ನಾರಿಶರಗಂ ಚಿಗಿತು।
ತ್ವರಿತದಿಂದೆಮ್ಮೆಯ ಅಸುಬರಲು ಮಹಿಮೆಯನು।
ಮರೆಯಲಿಲ್ಲವೆಯೆಂದು ಪುರುಷನೋಳ್ ಪೇಳಿದಳು ಸತ್ಯವಿದು
ರಾಜೇಂದ್ರನೇ॥೧೦॥

ನೀನೆ ಗತಿ ನೀನೆ ಮತಿ ನೀನೆಪಿತ ನೀನೆಹಿತ।
ನೀನೆ ಗುರು ನೀದೇವ ನೀಲಿಂಗ ಜಂಗಮವು।
ನೀನೆ ಬಂಧುವರ್ಗ ನೀನೆಯೆನ್ನಯ ಪುರುಷ ನಾನೇ ಸತಿ ಕೊಟ್ಟೂರೇಶಾ।
ನೀನೆನ್ನಬಿರುದನ್ನು ಹಾನಿಯನು ಮಾಡಿದರೆ।
ನಾನಿದಕೆ ಚಿಂತೆ ಪಡುವವನಲ್ಲವೆಂದಾಗ ।
ತಾನು ತನ್ನಯ ಬಟರು ಐನೂರು ಆಳುಗಳ ಕಳಹಲ್ಕೆ ನಡೆದುದಾಗ ॥೧೧॥

ನೂರಾನೆ ಇಪ್ಪತ್ತು ಸಾವಿರ ತುರಂಗಮಂ।
ಭೋರ್ರೈಸಿ ಬರುತಿರಲು ಕಾಲಾಳು ಗಳನೆಲ್ಲ।
ಓರಂತೆ ಎರಡು ಹರದಾರಿಯಲಿ ನಿಂತಾಗ ಮುತ್ತಿರ್ದ ಬಲವ ಕಂಡೂ॥
ಬೋರೆಂಬುತಿರೆ ಕುದಿಗೊಂಡು ಕೊಟ್ಟೂರೇಶಾ ।
ಸಾರಿದವು ನಿಮ್ಮಪಾದಕೆ ನೀನೇ ಗತಿಯೆಂದು।
ಏರಿಸಿ ಬಿಲ್ಲುಬಾಣವು ಗುಂಡು ಹೊಡೆಯಲ್ಕೆ ಒಂದಕ್ಕೆ ನೂರಾಗಿಬಂದೂ॥೧೨॥

ಯರೆಹಳ್ಳ ಚಪ್ಪರದಹಳ್ಳಿ ಸಾದರದಿನ್ನಿತೆರಪಿಲ್ಲನೋಡಿದರೆ।
ವರಸೋಮ ಶೇಖರನ ಪರಿವಾರ ಕಾಲಾಳು ಗಜ।
ತುರಗ ಮೇಲ್ಕುರಕ ರಣಭೇರಿ ಕೊಂಬು ಕೂಗೆ॥
ಪರವಾದಿ ಸಿದ್ದೋಜಿ ಮುರಾರಿಯದೆ ಶೂಲ ।
ಹರಪುರದ ದೊರೆ ಬಸವ ಬರುತ ತಾನೆ ಕಡೆಗಾಗಿ।
ಬರೆ ಸೆಳೆದು ಬಾನಗಳ ಬಿಡಲು ಆರ್ಭಟಿಸುತ್ತಾವೈರಿಗಳ ಶಿರವ
ತರಿದೂ॥೧೩॥

ತಾಕುತಿರೆ ತಮ್ಮೊಳಗೆ ತಾವೆ ಕಡಿದಾಡುತ್ತ।
ನೂಕು ನುಗ್ಗಾಗೆ ಕಾವಳದೊಳಗೆ ಬಡಿದಾಡಿ।
ಭೀಕರದೆ ಬಿಟ್ಟುಹೊಡೆಯಲ್ಕೆಹಾದಿಯ ಬಿಡಲು ನಡೆದು ಪೊಕ್ಕುದು
ಕೋಟೆಯಾ ॥

ಕಮಲಸುಖ ಬಂದನಾ ವ್ಯಾಳ್ಯ ಪ್ರಭೆ ದೋರಿ!
ನೂಕಿ ಬಂದಿಹ ಕತ್ತಲೆಯು ಪರಿಯೆ ದಂಡಾಗ ।
ಜೋಕೆಯಂ ಕೋಟೆಮೇಲಕೆ ನೋಡೆ ತನಗೊಬ್ಬ ಜಂಗಮಯ್ಯನ ಸತ್ತಿಗೆ ॥೧೪॥

ಹೊರಗಿರುವ ಪೌಜಿಂಗೆ ಪರಮ ಜಂಗಮ ಮೂರ್ತಿ।
ಪುರುಷಗೊಬ್ಬೊಬ್ಬ ಜಂಗಮನಾಗಿ ಕಾನಿತಿರೆ।
ಕರಿಗೊರಲ ತ್ರಶೂಲ ಪುರಿಗಣ್ಣು ತಲೆಬೋಳು ಕಾವಿಕಾಷಾಯಾಮಬರವ
ನುಟ್ಟೂ॥

ಗುರು ಬಸವಲಿಮಗ ತಾ ಹುಲಿಯ ವಾಹನವೇ!
ಕರದಲ್ಲಿ ಮಿಡಿನಾಗರ ಬೆತ್ತ ಪಿಡಕೊಮಡು।
ತರುಕರನು ಹೊಡೆದೋಡಿಸುತ್ತಾಸರ್ವರಲಿ ಮೆರೆದನು ॥
ಚಿನ್ಮಯ ರೂಪನೂ ॥೧೫॥

ಮರುದಿವಸ ರಾತ್ರಿಯೊಳು ಮರೆತು ಮಲಗಲು ದಮಡು।
ಚರಣದೊಳು ಪಾವುಗೆಯು ಕರದಿ ತ್ರಿಶೂಲವಂ।
ಮಿರುಗುತಿಹ ಕಾವಿಯನು ಧರಿಸಿ ಎಲ್ಲರ ಮುಂದೆನಿಮತು ಹಹ ಎಂಬುತಾ॥
ನೆರೆ ಮುರಾರಿಯ ಪಟ್ಟದಾನೆ ಹೆದರಿಯೆ ಸತ್ತು।
ತುರಗ ಕಾಲಾಳು ಲಯವಾದದ್ದು ಗಣನಿಲ್ಲ।
ಬಿರುದಿನ ನಗಾರಿ ನಿಶಾನಿ ಹೊತ್ತಹ ಒಮಟೆ ನಡೆದು ಪೊಕ್ಕುದು
ಕೊಂಟೆಯ ॥೧೬॥

ದಂಡಿನೊಳು ಸರ್ಪ ಹುಲಿಮಯಿವಾಗಿ ಜನ ಬೆದರಿ।
ಮಂಡುಗಪ್ಪೆಯ ಚೇಳು ಕೆಂಹಜಿಗವು ಕಡಿಕಡಿದು।
ದಂಡೆಲ್ಲಹಿಂಡೊಡೆದು ಗಿಡಕೊಂದು ಹೆನವಾಗಿ ಬಾಯಿಬಿಟ್ಟಳುತಲಿರಲಾ ॥

ಮಂಡಲಾಧಿಪ ಶಿದ್ಧೋಜಿ ಮುರಾರಿ ಬಾಯೊಳಗೆ।
ಕೆಂಡ ಹೊಗೆ ಸುರಿದು ಒಡಲ ಕಿಚ್ಚುರಿವುತ್ತ।
ರುಂಗಳೂ ನೆಲದೊಳಗೆ ಹೊರಳುತ್ತಮದದಾನೆ ಪುರವ ಪಕ್ಕಿತು
ಬೇಗದೀ ॥೧೭॥

ಇನ್ನು ತನಗೆ ಸಾಧಯವಲ್ಲೆಂದು ಮೆದಕೇರಿ ।
ಯನ್ನು ಕರಕೊಂಡು ಬಂದನು ಭಾಷೆಯಂ ಕೊಟ್ಟೂ ।
ನಿನ್ನದು ಕೋಂಟೆ ಯನ್ನದು ಸುಲಿಗೆ ಈ ಕ್ಷಣವೆ ದಂಡೆಲ್ಲಮುಳುಗಿದರೆ
ಬಿಡನು ॥

ಚೆನ್ನಿಗನು ಮೆದಕೇರಿ ಭೂಪ ಆನೆಯ ಮೇಲೆ ।
ತನ್ನ ಮಾರ್ಬಲವು ಹನ್ನೆರಡು ಸಾವಿರ ಮಾಡಿ ।
ಪನ್ನಗಾಧರ ಸೋಮಲಿಂಗನೆಡಬಲ ಬರಲು ಆನೆ ಮುಗ್ಗರಿಸಿ ನಿಲ್ಲಲೂ ॥ ೧೮ ॥

ಪಟ್ಟದಾನೆಯು ನಿಂತು ಸೊಂಡಿಲೊಳು ಮಂಣನು ।
ಯಿಟ್ಟುಚೌದಾಂಗದೊಳಗೆಲ್ಲಧೂಳಿಯ ತುಂಬಲು ।
ಪಟ್ಟದ ಮೆದಕೇರಿ ಅಪಶಕುನವೆಂದೆನುತ ತಿಳಿದು ಮನದೊಳು ಗಜವನೂ ॥
ಕುಟ್ಟಿಮುಂದಕೆ ಹೊಡೆಯೆ ಜವದಿಂದ ಬರುತಿರಲು ।
ತೊಟ್ಟಿರ್ದ ಮಣಿ ಖಚಿತ ಪದಕ ಮುತ್ತಿನ ಸರವು ।
ತಟ್ಟನೆ ಕತ್ತರಿಸಿ ಮುಂದೆಸೆಗೆ ಬೀಳಲತಿ ಕಷ್ಟ ಬರುವುದು ನಮಗಿದೂ ॥ ೧೯ ॥

ಚನ್ನೆಸೆವ ಕಾಲಾಳು ಮಂದಿ ಕುದುರೆಯು ಸಹಿತ ।
ಮನ್ನಣೆಯ ಪಟುಭಟರು, ರಾಹುತರು ಮೊದಲಾಗಿ ।
ಇನ್ನುಸೆರೆಸೂರೆಯನು ಏಕ ಲೆಗ್ಗೆಗೆ ಹತ್ತಿ ಕಡಿದು ತೆಗೆವೆನು ಯೆನುತಲೀ ॥
ಮುನ್ನಿರ್ದ ಅಗುಳು ಕೋಟಿಯು ಬುಡಕೆ ತಳೆಬೇಗ ।
ಇನ್ನುಳಿಯಲೆಂದು ಮದ್ದಂ ಸುರಿಯೆ ಬುಜ್ಜಣಿಕೆ ।
ಉನ್ನತ ಚೀಲಗಳಹಾಕಿ ಜಾವಿಗೆಯನ್ನು ಕೊಡುವೆನೆಂಬುವ ಸಮಯದೀ ॥ ೨೦ ॥

ಟೆಂಕ ಮೇಘಂ ನಡೆದು ಶಂಕರನ ದೆಸೆ ಮಿಂಚೆ ।
ಭೋರಂಕನೆ ಗುಡುಗುಟ್ಟಿಮಳೆಸುರಿದು ನೀರ್ವರಿಯೆ ।
ತಾಂ ಕಂಡು ಒಳಗಿರ್ದ ಜನರೆಲ್ಲ ಬಸವೇಶ ನಿನ್ನ ಮಹಿಮೆಯು ಎನುತಲೀ ॥
ಮುಂ ಕಂಡು ಬಪ್ಪತೆಳಿ ಮೋರಿ ಕಂಡಿಯ ಕೊರೆದು ।
ತಾಂ ಕನುತಿಹ ನೀರ ತಿರುಗಿ ಬಿಡಲಾಗಳುಂ।
ಜೋಕಿಸುತೆ ನೆಲಗಚ್ಚು ಕೆಟ್ಟುಮಾಳಿಗೆ ಮುರಿದು ನೀರ್ವರಿದು
ಸೋರಿತಲ್ಲಾ॥೨೧॥

ಎಲ್ಲಿನೋಡಲು ನೀರು ಮಡುತುಂಬಿ ಕೆರೆ ತುಂಬಿ।
ಎಲ್ಲಿನೋಡಲು ತುಂಬಿ ಡೇರೇದ ಒಳಗೆಲ್ಲ।
ಎಲ್ಲಿನೋಡಲು ಮುಂದು ನೀರಾಗಿ ಹರಿವುತಿರೆ ಬಿಡು ಮುತ್ತಿಗೆಯ
ನಡೆಯಂದನೂ॥
ಗೆಲ್ವುದಕೆ ಸಾಮರ್ಥ್ಯರಲ್ಲಲ್ಲ ನಾವೀಗ।
ಮೆಲ್ಲನೇ ಪ್ರಾಣವನ್ನುಳುಹಿಕೊಂಡರೆ ಲೇಸು।
ಸೊಲ್ಲಿಡಲು ಬಾಯಲ್ಲದಂದದಲಿ ಮಾಡಿದನು ಎಲ್ಲರ ದೇವರ ದೇವನೂ ॥೨೨॥

ಎಲ್ಲಿನೋಡಲು ಬಿಕ್ಷವೆಂಬ ಶಬ್ದಗಳಲ್ಲಿ।
ಯಲ್ಲಿನೋಡಲು ದಂಡುನೊಳಗೆಲ್ಲಜಂಗಮವು।
ಯಲ್ಲಿನೋಡಲು ನಾಬೆತ್ತ ಹೆಬ್ಬುಲಿ ಮಯವು ಘನವಾಗಲದಕೆ ಬೆದರೀ ॥
ನಿಲ್ಲಲಾರದೆ ಪೌಜು ತಮತಮಗೆ ಓಡುತಿರೆ।
ತಲ್ಲಣಿಸುತಾಗ ಮೆದಕೇರಿ ಮುರಾರಿಯು।
ಮಲ್ಲರೆಲ್ಲರು ತ್ರಾಹಿ ತ್ರಾಹಿ ಭೂಪೆನುತಾಗ ಗಲ್ಲವನು
ಬಡಿದುಕೊಳುತಾ ॥ ೨೩ ॥

ತ್ರಾಹಿ ಕೊಟ್ಟರೇಶ ತ್ರಾಹಿ ಭಕ್ತರ ಪೋಷ।
ತ್ರಾಹಿ ಸಜ್ಜನ ಸಂಗ ತ್ರಾಹಿ ಮೂಜಗಲಿಂಗ ।
ತ್ರಾಹಿ ಯೆನ್ನೊಡೆಯನೆ ತ್ರಾಹಿ ಮುನಿಗಣವರನೆ ನಿ ತ್ರಾಹಿ
ಕೊಟ್ಟೂರ ಬಸವಾ॥

ತ್ರಾಹಿ ನಾವೀಗ ಬಂದುದು ತಪ್ಪು ಪಾಲಿಸೈ।
ತ್ರಾಹಿ ಬಾಗುಳಿಭೂಪ ಗೊರವನಿತ್ತ ವಿರಕ್ತ।
ತ್ರಾಹಿ ಮಹದಾತ ಡಿಲ್ಲಿಯ ಪಾಚ್ಚ ಗೋರವಿತ್ತ ಸತ್ತಮಗನಾಡಿಸಿದೆಲಾ ॥ ೨೪ ॥

ಜಯತು ಶ್ರೀ ಗುರುರಾಯ ಜಯತು ಜಂಗಮರಾಯ ।
ಜಯತು ಮದನಾರಿ ಮುಪ್ಪುರವೈರಿ ಘನಲಿಂಗ।
ಜಯತು ತೋಂಟದ ಸಿದ್ಧಲಿಂಗ ಷಟುಸ್ಥಲ
ಬ್ರಹ್ಮಜಯತು ಸರ್ವಾಂಗಲಿಂಗಾ॥
ಜಯತು ಬಾಗುಳೀ ಸೋಮಶೇಖರನ ಭಕ್ತಿಯನು।
ಜಯದಿಂದ ಜಂಗಮಕೆ ದಾಸೋಹ ಮಾಡುತಲೀ।
ಜಯತೆಂಬ ತಪ್ಪಗಾಣೀಕೆಯಟ್ಟು ಮುರಾರಿ ಮೆದಕೇರಿ
ಸಹಿತಂಪೋದು ॥ ೨೫ ॥

ಇಲ್ಲಿಗೆ ಶ್ರೀ ಗುರು ಕೊಟ್ಟೂರು ಬಸವರಾಜೇಂದ್ರ ಪವಾಡವು ಸಂಪೂರ್ಣವಾದುದು

॥ಮಂಗಳಾರತಿ॥

ಮಂಗಳವ ಪಾಡಿರೆ ಶೃಂಗಾರ ಶ್ರೀ ಗುರು ಬಸವನಿಗೆ ।
ಅಂಗಜಾದಹನನಿಗೆ । ಮಂಗಳಾಂಗೆರೆಲ್ಲಕೂಡಿ
ಸಾಂಗವಾಗಿ ಬೆಳಗುವ ಬನ್ನಿ ॥ಪ॥
ಸೋಂಪಿನಾ ಕೆಂಪಯ್ಯಗೆ ಶಾಂತವೀರೇಶನಿಗೆ।
ಭ್ರಾಂತಿತಾಳ್ದ ಮದ್ದನಸ್ವಾಮಿಗೆ ।
ಅಂತರಂಗ ಶುದ್ಧಿಯಿಂದ ಹಟ್ಟಿತಿಪ್ಪ ರುದ್ರನಿಗೆ ॥ ೧ ॥
ವಾರಿಜಕ್ಷಿಯ ಸೀರಿಯ ಶರಗು ಹರಿದು ಕೌಪವ ಧರಿಸಿದಗೆ।
ಮುರುಕಲ್ಲೊಳು ಮಹಿಮೆ ತೋರಿದವರಿಗೆ ।
ಹರಿಯಜಸುರರೆಲ್ಲ ಸೇವಿಸುವ ಜಗದೀಶಗೆ ॥ ೨ ॥
ಶಿಶುವಿನ ಕರೆದೊಯ್ದು
ಎಸೆವ ಕೆರೆಯೊಳು ಪೊಕ್ಕಾತಗೆ।
ಹಸುವನೆಬ್ಬಿಸಿ ಹಾಲಸವಿದಾತಗೆ।
ವಸುಧಿಯೊಳು ಶಿಖಾಪುರಿ ಬಸವಲಿಂಗ ಸ್ವಾಮಿಗೆ ॥ ೩ ॥

೫:೩. ರಥೋತ್ಸವ :

ಕೊಟ್ಟೂರಿನ ಪುಣ್ಯ ಭೂಮಿಯಲ್ಲಿ ಯಾವುದೇ ಧರ್ಮ, ಜಾತಿ, ವರ್ಣ, ಲಿಂಗ ಭೇದವಿಲ್ಲದೆ ಎಲ್ಲರು ಶಿವನ ಸಾಕ್ಷಾತ್ಕಾರವನ್ನು ಪಡೆಯಲು ಸ್ವಾಮಿಯು ಭಕ್ತಿಯ ಮಾರ್ಗದಿಂದ ಮುಕ್ತಿಯನ್ನು ಕರುಣಿಸಿದಾತ. ಶ್ರೀ ಸ್ವಾಮಿಯು ವೀರಶೈವ ಧರ್ಮವನ್ನು ನಾಡಿನಾದ್ಯಂತ ಪ್ರಚಾರ ಮಾಡಿ ಭಕ್ತರಲ್ಲಿ ಜನಜಾಗೃತಿ ಮಾಡಿಸಿದಾತ, ಜಂಗಮ ಮತ್ತು ಭಕ್ತ ಒಂದೇ ಎನ್ನುವ ವಿಶಾಲ ಮನೋ ಭೂಮಿಕೆಯನ್ನು ವೀರಶೈವ ಧರ್ಮದ ತತ್ವಗಳಾದ ಅಷ್ಟಾವರ್ಣ, ಷಟ್‌ಸ್ಥಲಗಳನ್ನು ಬದುಕಿನಲ್ಲಿ ಅಂತರಂಗ ಹಾಗೂ ಬಹಿರಂಗವಾಗಿ ಸುಜ್ಞಾನದ ಮಾರ್ಗವನ್ನು ತೋರಿದಾತ ಶ್ರೀ ಕೊಟ್ಟೂರೇಶ್ವರ ಸ್ವಾಮಿ.

ಕೊಟ್ಟೂರಿನ ಶ್ರೀ ಗುರುಬಸವೇಶ್ವರ ಸ್ವಾಮಿ, **'ಕೊಟ್ಟೂರೇಶ್ವರ'** ಎಂದೇ ಪ್ರಸಿದ್ಧಿಯಾಗಿ, ಇಂದಿಗೂ ಉಳಿಯುವಂತೆ ನಾಡಿನ ಜನರಲ್ಲಿ ಅತ್ಯಂತ ಆಳವಾಗಿ ಭಕ್ತಿ ಪ್ರಜ್ಞೆ ಮೂಡಿಸಿದ ಗುರುಗಳು ಮುಂದಿನ ಪೀಳಿಗೆಗೂ ಅವರ ಹೆಸರನ್ನುಳಿಸಲು ನಮ್ಮ ಜನಪದರು ತಮ್ಮ ಕರುಳ ಕುಡಿಗಳಿಗೆ ಕೊಟ್ಟೂರೇಶ್ವರನ ಹೆಸರಿಟ್ಟು ಸಂಭ್ರಮಿಸಿದ್ದಾರೆ. ಮಧ್ಯಯುಗದ ಭಕ್ತಿ ಪಂಥದ ಮಾರ್ಗ ಪ್ರವರ್ತಕ ಕೊಟ್ಟೂರೇಶ ಹಿಂದೂ ಧರ್ಮದಲ್ಲಿ ಬಹುತೇಕ ಎಲ್ಲಾ ಹಬ್ಬ ಹರಿದಿನಗಳು ಶುಭ ಮೂಹೂರ್ತದಲ್ಲೂ ನಡೆಯುತ್ತವೆ. ಆದರೆ ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಮಾತ್ರ ಅಶುಭವೆಂದೇ ಪರಿಗಣಿಸಲಾದ ಮೂಲ ನಕ್ಷತ್ರದಲ್ಲಿ ನಡೆಯುತ್ತದೆ. ಆದರೆ ಭಕ್ತಿ ಸಾಗರಕ್ಕೆ ಮಾತ್ರ ಕೊನೆಯಿರದು.

ರಥಗಳು ಒಂದರ್ಥದಲ್ಲಿ ಚಲಿಸುವ ದೇವಾಲಯಗಳು. ಇವು ದೇವಾಲಯದ ಪ್ರತಿರೂಪಗಳೇ ಆಗಿರುತ್ತವೆ. ಕರ್ನಾಟಕದ ಪ್ರಸಿದ್ಧ ರಥೋತ್ಸವಗಳಲ್ಲಿ ಕೊಟ್ಟೂರಿನ ಕೊಟ್ಟೂಶ್ವರ ಸ್ವಾಮಿಯ ರಥೋತ್ಸವವೂ ಒಂದಾಗಿದೆ.

ಬಳ್ಳಾರಿ ಜಿಲ್ಲೆಯ ಜಾತ್ರೆಗಳಲ್ಲಿ ಇದು ಎರಡನೆಯ ಸ್ಥಾನ ಪಡೆದಿದೆ. ಸುಮಾರು ಒಂದು ಲಕ್ಷಕ್ಕೂ ಅಧಿಕ ಸಂಖ್ಯೆಯ ಭಕ್ತ ಜನರು ಇಲ್ಲಿ ಬಂದು ನೆರೆಯುತ್ತಾರೆ.

ಈ ರಥೋತ್ಸವ ಕಾರ್ಯಕ್ರಮವು ಮಾಘ ಶುದ್ಧ ಪಂಚಮಿಯಂದು ಆರಂಭವಾಗಿ ಶಿವರಾತ್ರಿ ಅಮವಾಸ್ಯೆಗೆ ಕೊನೆಯಾಗುತ್ತದೆ. ಮಾಘಶುದ್ಧ ಪಂಚಮಿಯ ದಿನ ತೇರುಗಡ್ಡೆಯನ್ನು ಹೊರಗೆ ಹಾಕುತ್ತಾರೆ. ಆ ದಿನ ಭಕ್ತರು ತೇರುಗಡ್ಡೆ ಹೊರಗೆ ಹಾಕುವಾಗ ಕ್ರಿಯಾ ಮೂರ್ತಿಗಳಿಗೆ ಮತ್ತು ತೇರುಗಡ್ಡೆ ಬತ್ತಿಕಾಯಿಗಳಿಂದ ಹೊಡೆಯುತ್ತಾರೆ. ಕಾರಣ ಸ್ವಾಮಿ ಕೊಟ್ಟೂರಿನಲ್ಲಿ ಹುಚ್ಚನಂತೆ ತಿರುಗಾಡಿದನೆಂದೂ ಆತನಿಗೆ ಹೊಡೆದರೆ ಹೊಡೆತ ಬೀಳುವುದಿಲ್ಲವೆಂಬ ನಂಬಿಕೆಯಿಂದ ಬತ್ತಿ ಕಾಯಿ (ಹೊಂಗೆಮರದ ಕಾಯಿಗಳು) ಗಳಿಂದ ಹೊಡೆಯುವ ಪದ್ಧತಿ ಉಳಿದು ಬಂದಿದೆ ಎನ್ನುತ್ತಾರೆ.

ಮಾಘ ಬಹುಳ ದಶಮಿಯೊಳಗೆ ತೇರು ಕಟ್ಟುವ ಕೆಲಸ ಮುಗಿಸುತ್ತಾರೆ. ಈ ತೇರಿನ ಕಾರ್ಯಕ್ರಮದಲ್ಲಿ ಒಂದೊಂದು ಜಾತಿಯವರು ಒಂದೊಂದು ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಈ ಕಾರ್ಯವನ್ನು ಮಾಡುವ ಎಲ್ಲಾ ಜಾತಿಯವರಿಗೂ ಪಾಳೆಯಗಾರರ ಕಾಲದಲ್ಲಿ ಪಾಳೆಯಗಾರರು ಭೂಮಿಯನ್ನು ದತ್ತಿಯಾಗಿ ಕೊಟ್ಟಿದ್ದಾರೆ.

ಹಿರೇಮಠದ ಧರ್ಮಕರ್ತರಿಗೆ ೩೭ ಎಕರೆ ಎರೆಹೊಲ ಎಂಟು ಎಕರೆ ಗದ್ದೆಯನ್ನು ದತ್ತಿಯಾಗಿ ಕೊಟ್ಟಿದ್ದಾರೆ. ಬಡಿಗೇರನಿಗೆ ೧ ಎಕರೆ ಗದ್ದೆಹೊಲ, ಕಮ್ಮಾರನಿಗೆ ೧ ಎಕರೆ ಗದ್ದೆಹೊಲ, ಮೇಳದವರಿಗೆ ೨ ಎಕರೆ ಗದ್ದೆಹೊಲ, ದೀವಟಿಗೆಯವರಿಗೆ ೨ ಎಕರೆ ಗದ್ದ ಹೊಲ, ಪಾತ್ರದವರಿಗೆ (ನರ್ತಕಿಯರಿಗೆ) ೨ ಎಕರೆ ಗದ್ದೆ ಹೊಲ, ಅಗಸರಿಗೆ ೧ ಎಕರೆ ಗದ್ದೆಹೊಲ, ಅಕ್ಬರ್ ಚಕ್ರವರ್ತಿ ಕೊಟ್ಟ ಖಡ್ಗ ಹಿಡಿಯುವವರಿಗೆ ೪ ಎಕರೆ ಗದ್ದೆ ಹೊಲ ದತ್ತಿಯಾಗಿ ಕೊಟ್ಟಿದ್ದಾರೆ.

ತೇರಿನ ಉತ್ಸವ ಕಾರ್ಯಕ್ರಮಗಳಲ್ಲಿ ಧರ್ಮಕರ್ತರು (ಪೂಜಾರಿಗಳು) ಸ್ವಾಮಿಯ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾರೆ. ಬಡಗಿ ಮತ್ತು ಕಮ್ಮಾರರು ತೇರು ಕಟ್ಟುವ ಕೆಲಸದಲ್ಲಿ ಸಹಾಯಕರಾಗಿರುತ್ತಾರೆ. ದೀವಟಿಗೆಯವರು ದೀವಟಿಗೆ ಹಿಡಿಯುವ ಕೆಲಸ ಮಾಡುತ್ತಾರೆ. ಮೇಳದವರು ಉತ್ಸವದ ಮುಂದೆ ಮೇಳ ಮಾಡುತ್ತಾರೆ. ಪಾತ್ರದವರು ಒಂದು ಕಾಲದಲ್ಲಿ ಉತ್ಸವದ ಮುಂದೆ ನರ್ತನ ಮಾಡುತ್ತಿದ್ದರೆಂದು ಹೇಳುತ್ತಾರೆ. ಆದರೆ ಈಗ ನರ್ತನ ಮಾಡುವ ಪದ್ಧತಿ ಉಳಿದು

ಬಂದಿಲ್ಲ. ಮೇದಾರರು ತೇರಿನ ಮೇಲೆ ಇಡುವ ಬಿದಿರಿನ ಜಲ್ಲೆಯನ್ನು ಕಟ್ಟುತ್ತಾರೆ. ಅಗಸರು ಉತ್ಸವಗಳಲ್ಲಿ ಮಡಿ ಹಾಸುವ ಕೆಲಸ ಮಾಡುತ್ತಾರೆ. ಖಡ್ಗ ಹಿಡಿಯುವ ಮನೆತನದವರಲ್ಲಿ ಜಗಳ ಬಂದಿದ್ದರಿಂದ ಈಗ ಧರ್ಮಕರ್ತರೆ ಖಡ್ಗವನ್ನು ಹಿಡಿಯುತ್ತಾರೆ. ೪ ಎಕರೆ ಗದ್ದೆಯೂ ಕೂಡ ಧರ್ಮಕರ್ತರ ಸ್ವಾಧೀನದಲ್ಲಿದೆ. ತೇರಿನ ಕಾರ್ಯಕ್ರಮದಲ್ಲಿ ತೇರಿನ ಗಡ್ಡೆಗೆ ಕುರುಬರು ಎಣ್ಣೆ ಹಚ್ಚುತ್ತಾರೆ. ಹರಿಜನರು ತೇರಿನ ಗಾಲಿಗಳಿಗೆ ಅಚ್ಚುಗಳಿಗೆ ಎಣ್ಣೆ ಎರೆಯುವುದು, ಏಣಿತಂದು ಹಾಕುವುದು, ಹಲಗೆ ನುಡಿಸುವ ಸೇವೆ, ಬಿದಿರಿನ ಜಲ್ಲೆಯನ್ನು ರಥದ ಮೇಲೆ ಏರಿಸುವುದು ರಥ ಎಳೆಯುವಾಗ ಗಾಲಿಗೆ ಎದ್ದ ಹಾಕುವುದು ಇವೆಲ್ಲ ಕೆಲಸಗಳನ್ನು ಮಾಡುತ್ತಾರೆ. ಕುರುಬರಿಗೆ ಮತ್ತು ಹರಿಜನರಿಗೆ ಮಾತ್ರ ರಾಜರು ಯಾವ ಭೂಮಿಯನ್ನು ದತ್ತಿಯಾಗಿ ಕೊಟ್ಟಿಲ್ಲ. ಈ ರೀತಿಯಾಗಿ ರಥೋತ್ಸವ ಕಾರ್ಯಕ್ರಮದಲ್ಲಿ ಎಲ್ಲಾ ಜಾತಿಯವರು ಭಾಗಿಗಳಾಗಿ ಕಾರ್ಯ ನಿರ್ವಹಿಸುತ್ತ ಬಂದಿದ್ದಾರೆ.

ಈ ರಥೋತ್ಸವಕ್ಕಿಂತ ಮುಂಚಿತವಾಗಿ ನಾಲ್ಕು ದಿನ ದಿನ ಉತ್ಸವಗಳು ನಡೆಯುತ್ತವೆ. ಇದರಲ್ಲಿ ಮೂರು ಅಂಕಣದ ಸಣ್ಣ ತೇರನ್ನು (ಉಚ್ಚಯ್ಯ) ಕಟ್ಟಿ ಸ್ವಾಮಿಯ ಮೂರ್ತಿಯನ್ನು ಕೂಡಿಸಿ ಉತ್ಸವಗಳನ್ನು ಮಾಡುತ್ತಾರೆ. ಕಾರ್ತೀಕೋತ್ಸವದಂತೆ ನಡೆಯುವ ನಾಲ್ಕು ದಿನಗಳ ಈ ಉತ್ಸವದಲ್ಲಿ ಸ್ವಾಮಿಯು ಕ್ರಮವಾಗಿ ಹಿರೇಮಠದಿಂದ ಹೊರಟು ಮೂರು ಕಲ್ಲುಮಠ, ತೊಟ್ಟಿಲುಮಠ, ಗಚ್ಚಿನಮಠಕ್ಕೆ ಹೋಗಿ ದರ್ಶನ ಕೊಟ್ಟು ಮರಳಿ ಹಿರೇಮಠಕ್ಕೆ ಬರುತ್ತದೆ.

೧. ನಾಗರೋತ್ಸವ : ಮೂರು ಅಂಕಣಗಳ ಸಣ್ಣ ತೇರಿನಲ್ಲಿ ಸ್ವಾಮಿಯು ನಾಗಸರ್ಪದ ಮೇಲೆ ಕುಳಿತು ಉತ್ಸವಕ್ಕೆ ಹೊರಡುತ್ತಾನೆ.

೨. ನವಿಲೋತ್ಸವ : ಸ್ವಾಮಿಯು ನವಿಲಿನ ಮೇಲೆ ಉತ್ಸವಕ್ಕೆ ಹೊರಡುತ್ತಾನೆ.

೩. ಗಜೋತ್ಸವ : ಸ್ವಾಮಿಯು ಆನೆಯ ಮೇಲೆ ಕುಳಿತು ಉತ್ಸವಕ್ಕೆ ಹೊರಡುತ್ತಾನೆ.

೪. ಬಸವೋತ್ಸವ : ಸ್ವಾಮಿಯು ನಂದಿಯ ಮೇಲೆ ಕುಳಿತು ಉತ್ಸವಕ್ಕೆ ಹೊರಡುತ್ತಾನೆ.

ಮೊದಲಿನ ಮೂರು ಉತ್ಸವಗಳಿಗಿಂತ ಈ ಬಸವೋತ್ಸವ ಹೆಚ್ಚಿನ ವಿಶೇಷತೆಯಿಂದ ಕೂಡಿದೆ. ಇದರಲ್ಲಿ ವಿಶೇಷವಾಗಿ ಎರಡು ಪಂಚ ದೀವಟಿಗೆಗಳನ್ನು ಹಚ್ಚಿ ಹಿಡಿದಿರುತ್ತಾರೆ.

ಐದನೆಯ ಅಥವಾ ಕೊನೆಯ ಉತ್ಸವವೇ ರಥೋತ್ಸವ. ಇದು ಮಾಘ ಬಹುಳ ದಶಮಿಯ ದಿನ ಮೂಲ ನಕ್ಷತ್ರ ಕೂಡಿದಾಗ ಮಾತ್ರ ನಡೆಯುತ್ತದೆ. ಏಕೆಂದರೆ ಕೊಟ್ಟೂರೇಶ್ವರ ಸ್ವಾಮಿ ಇದೇ ದಿನ ಜೀವಸಮಾಧಿಗೆ ಹೋದರು ಅದರ ಪ್ರತೀಕವಾಗಿ ರಥೋತ್ಸವ ಜರುಗುತ್ತದೆ. ಆ ದಿನ ಮೂಲ ನಕ್ಷತ್ರ ಕೂಡಿದಾಗ ಧರ್ಮಕರ್ತರು ಸ್ವಾಮಿ ಹೊರಡಿಸುವುದನ್ನು ಸ್ವಲ್ಪ ತಡಮಾಡಿದರೆ ಸ್ವಾಮಿಯು ಆರ್ಭಟವಾಗಿ ಅವಸರವಾಗಿ ನೂಕುತ್ತಾ ಹೋಗುತ್ತಾನೆ. ಎನ್ನುವ ಹೆದರಿಕೆ ಇರುವುದರಿಂದ ಸಮಯಕ್ಕೆ ಸರಿಯಾಗಿ ಸ್ವಾಮಿಯನ್ನು ಹೊರಡಿಸುತ್ತಾರೆ. ಹಿರೇಮಠದಿಂದ ಮುಂದೆ ಖಡ್ಗ, ಹಿಂದೆ ಸ್ವಾಮಿಯನ್ನು ತಂದು ಪಲ್ಲಕ್ಕಿಯಲ್ಲಿ ಕೂಡಿಸಿ ಹೊರಡಿಸುತ್ತಾರೆ. ವಾದ್ಯಮೇಳಗಳ ಮೂಲಕ ಪಲ್ಲಕ್ಕಿಯಲ್ಲಿ ಸ್ವಾಮಿ ಮೂರ್ತಿಯು ರಥವೇರಲು ಬರುವಾಗ ಹರಿಜನ ಕೇರಿಯ ಹತ್ತಿರ ಬಂದ ಕೂಡಲೇ ಕೊಟ್ಟೂರೇಶ್ವರ ಸ್ವಾಮಿಯ ದೇವದಾಸಿ ಭಕ್ತಳಾದ ಹಿರೇಮನೆ ಕರಿಯಮ್ಮ ಎಂಬಾಕೆ ತನ್ನ ಮಗಳು ಉಡುಸಲಮ್ಮನ ಜೊತೆಗೆ ಬಂದು ಪಲ್ಲಕ್ಕಿಯಲ್ಲಿ ಹೊರಟಿರುವ ಸ್ವಾಮಿಯ ಮೂರ್ತಿಗೆ ಕಳಸ ಮತ್ತು ಧೂಪಾರ್ತಿ ಬೆಳಗುತ್ತಾಳೆ. ಈಕೆಯದು ವಂಶಪಾರಂಪರ್ಯವಾಗಿ ಉಳಿದುಕೊಂಡು ಬಂದ ಸೇವೆಯಾಗಿದೆ. ಕೊಟ್ಟೂರೇಶ್ವರ ಸ್ವಾಮಿಯ ಜಾತ್ಯಾತೀತತೆಗೆ ಇದೊಂದು ಪಕ್ಕ ಉದಾಹರಣೆಯಾಗಿದೆ. ರಥೋತ್ಸವದಂದು ಊರಿನ ಹರಿಜನ ಮಹಿಳೆಯೊಬ್ಬಳು ಆರತಿ ಬೆಳಗದೆ ಉತ್ಸವ ಮೂರ್ತಿ ರಥವನ್ನೇರದು ಕೆಳವರ್ಗದ ನಿರ್ದಿಷ್ಟ ಮನೆತನದ ಮಹಿಳೆಯ ಈ ಆರತಿಯೇ ರಥೋತ್ಸವದ ಪ್ರಮುಖ ಘಟನೆ. ಇದು ನೂರಾರು ವರ್ಷದಿಂದ ತಪ್ಪದೇ ನಡೆಯುತ್ತಾ ಬಂದಿದೆ. ಭಕ್ತರು ಇದನ್ನು ಪ್ರತ್ಯಕ್ಷವಾಗಿ ಪರಾಮರಿಸಿ ಪರೀಕ್ಷಿಸಬಹುದು.

ಈ ಮಹಿಳೆಯು ಪ್ರತಿನಿತ್ಯ ಸ್ನಾನ ಮಾಡಿ ತನ್ನ ಮನೆಯಲ್ಲಿರುವ ಸ್ವಾಮಿಯ ಭಾವಚಿತ್ರಕ್ಕೆ ಪೂಜೆ ಮಾಡುತ್ತಿರುತ್ತಾಳೆ. ಈ ಮಹಿಳೆ ರಥೋತ್ಸವದ ಸಂದರ್ಭದಲ್ಲಿ ನಾಗರೋತ್ಸವದಿಂದ ರಥೋತ್ಸವದವರೆಗೆ ಅಂದರೆ ಐದು ದಿನಗಳವರೆಗೆ ಊಟ ಮಾಡುವುದಿಲ್ಲ. ಹಣ್ಣು ಹಾಲು ಮಾತ್ರ ಸ್ವೀಕರಿಸುತ್ತಾಳೆ.

ರಥೋತ್ಸವದ ದಿನದಂದು ಹಿರೇಮಠದ ವತಿಯಿಂದ ಹೊಸಸೀರೆ, ಕುಪ್ಪಸ ಕೊಟ್ಟ ಮೇಲೆ ಸ್ನಾನ ಮಾಡಿ ಹೊಸ ಬಟ್ಟೆಧರಿಸಿ ರಥವೇರಲು ಪಲ್ಲಕ್ಕಿಯಲ್ಲಿ ಹೊರಟ ಸ್ವಾಮಿಗೆ ಕಳಸವನ್ನು ಬೆಳಗುವುದು ಪ್ರತಿವರ್ಷದ ಪದ್ಧತಿಯಾಗಿದೆ. ರಥೋತ್ಸವ ಮುಗಿದ ಮೇಲೆ ಸ್ವಾಮಿಯು ಮರಳಿ ಮಠಕ್ಕೆ ಬಂದ ಮೇಲೆ ಊಟ ಮಾಡುತ್ತಾಳೆ.

ಈ ರೀತಿಯಾಗಿ ಸ್ವಾಮಿಯು ಪಲ್ಲಕ್ಕಿಯಲ್ಲಿ ಒಂದು ಮೂರು ಸುತ್ತು ಸುತ್ತುವರಿದು ಐದು ಅಂಕಣಗಳಿಂದ ಕೂಡಿದ ಎತ್ತರವಾದ ರಥವನ್ನು ಏರುವಾಗ ಭಕ್ತರ ಸಡಗರವೇ ಸಡಗರ. ಎಲ್ಲರೂ ಭಕ್ತಿಪೂರ್ವಾಕವಾಗಿ ಬಾಳೆಹಣ್ಣುಗಳನ್ನು ಎಸೆಯುತ್ತಿರುತ್ತಾರೆ. ರಥ ಮುಂದೆ ಸಾಗುವಾಗ ಎಲ್ಲ ಭಕ್ತರು ತೇರಿನ ಕಳಸವನ್ನು ನೋಡುತ್ತಿರುತ್ತಾರೆ. ಕಾರಣ ಕಳಸವು ಯಾವ ಕಡೆ ವಾಲುತ್ತದೆಯೋ ಆ ಕಡೆ ಮಳೆ ಬೆಳೆ ಚನ್ನಾಗಿ ಆಗುತ್ತದೆ. ಎನ್ನುವ ನಂಬಿಕೆ ಇದೆ. ರಥೋತ್ಸವದ ಮುಂದೆ ಮುಂದೆ ಡೊಳ್ಳು ಕುಣಿತ, ಸಂಬಾಳ, ಮೇಳ, ನಂದಿಕೋಲು ಕುಣಿತ ನೋಡಲು ತುಂಬಾ ಚನ್ನಾಗಿರುತ್ತದೆ. ಈ ರೀತಿ ರಥೋತ್ಸವ ನಡೆದ ಮೂರನೆಯ ದಿನ ಇಡೀ ರಾತ್ರಿ ನಿಂತ ತೇರಿನ ಮುಂದೆ ಭಕ್ತರು ಸಂಬಾಳ ನಂದಿಕೋಲಿನ ಮಜಲು ಮಾಡುತ್ತಾರೆ. ಆಗ ಕ್ರಿಯಾಮೂರ್ತಿಗಳು, ಧರ್ಮಕರ್ತರು, ಭಕ್ತರು ಇರುತ್ತಾರೆ. ಇಂದಿನಿಂದ ಒಂದು ವಾರದ ಕಾಲ ಕೊಟ್ಟೂರಿನಲ್ಲಿ ಜಾತ್ರೆಯ ಸಡಗರವೋ. . . ಸಡಗರ, ಸಂಭ್ರಮವೋ. . . ಸಂಭ್ರಮ. ಈ ರೀತಿಯಾಗಿ ವರ್ಷದ ಉದ್ದಕ್ಕೂ ಕೊಟ್ಟೂರೇಶ್ವರ ಸ್ವಾಮಿಯ ಧಾರ್ಮಿಕ ಆಚರಣೆಗಳು ನಡೆಯುತ್ತವೆ.

ಈ ರಥೋತ್ಸವ ದಿನದಂದು ಆಗುವಂತ ವೈಶಿಷ್ಟ್ಯ .

- ಮಗುವೊಂದರ ಜನನ
- ಆಕಳ ಕರುವಿನ ಜನನ
- ವ್ಯಕ್ತಿಯೊಬ್ಬರ ಮರಣ
- ಆಕಳ ಹಾಲಿನ ಗಿಣ್ಣ
- ಹುಟ್ಟು ಸಾವಿನ ಸಮ್ಮಿಲನ
- ಹರಿಜನ ಸ್ತ್ರೀ ಆರತಿ ನೀಲಾಂಜನ
- **'ಹರಹರ ಮಹಾದೇವ ಕೊಟ್ಟೂರೇಶ್ವರ ದೊರೆಯೇ, ನಿನಗಾರು ಸರಿಯೇ, ಸರಿ ಎಂದವರ ಹಲ್ಲು ಮುರಿಯೇ ಬಹುಪರಾಕ್'** ಎಂಬ ಘೋಷಧ್ವನಿ.

೫:೪. ಕಾರ್ತಿಕೋತ್ಸವ :

ಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವವು ವಿಶೇಷವಾದ ರೀತಿಯಲ್ಲಿ ನಡೆದು ಬಂದಿದೆ. ಪ್ರತಿವರ್ಷ ದೀಪಾವಳಿ ಪಾಡ್ಯದಿಂದ ಆರಂಭವಾಗಿ ಹೊಸ್ತಿಲ ಹುಣ್ಣಿಮೆಯ ಸಮೀಪದ ಸೋಮವಾರದಂದು ಮುಗಿಯುತ್ತದೆ. ಸುಮಾರು ಒಂದುವರೆ ತಿಂಗಳ ಅವಧಿಯಲ್ಲಿ ಪ್ರತಿ ಸೋಮವಾರ ಮತ್ತು ಗುರುವಾರ ರಾತ್ರಿ ಸಾಮಾನ್ಯ ರೀತಿಯ ಕಾರ್ತಿಕೋತ್ಸವ ನಡೆಯುತ್ತದೆ. ಸೋಮವಾರದ ಕಾರ್ತಿಕೋತ್ಸವ ಹರಪನಹಳ್ಳಿ ಸೋಮಶೇಖರ ನಾಯಕನ ಹೆಸರಿನಲ್ಲಿ ಸಂಕಲ್ಪವಾಗಿ ನಡೆಯುತ್ತದೆ. ಗುರುವಾರದ ಕಾರ್ತಿಕೋತ್ಸವ ಚಿತ್ರದುರ್ಗದ ಮದಕರಿ ನಾಯಕನ ಹೆಸರಿನಲ್ಲಿ ಸಂಕಲ್ಪವಾಗಿ ನಡೆಯುತ್ತದೆ. ಈ ಇಬ್ಬರು ನಾಯಕರು ಕೊಟ್ಟೂರೇಶ್ವರ ಸ್ವಾಮಿಯ ಮಠಕ್ಕೆ ದತ್ತಿ ಕೊಟ್ಟಿರುವುದರಿಂದ ಇವರ ಹೆಸರಿನಲ್ಲಿ ಸಂಕಲ್ಪ ಮಾಡಿಕೊಂಡು ಕಾರ್ತಿಕೋತ್ಸವಗಳು ನಡೆಯುತ್ತವೆ ಎಂದು ಊರು ಹಿರಿಯರ ಅಭಿಪ್ರಾಯ ಪಡುತ್ತಾರೆ. ಅಲ್ಲದೆ ಮದಕರಿನಾಯಕನು ಕೊಟ್ಟೂರೇಶ್ವರನಿಗೆ ಭಕ್ತಿಪೂರ್ವಕವಾಗಿ ಕೊಟ್ಟ ದಂತದ ಪಲ್ಲಕ್ಕಿ ಇಂದಿಗೂ ಹಿರೇಮಠದಲ್ಲಿ ಇದೆ. ಇನ್ನೊಂದು ವಿಶೇಷ ಸಂಗತಿ ಎಂದರೆ ಅಷ್ಟಾವರಣದ ಪೂಜಾ ಮೂರ್ತಿಯೇ ಉತ್ಸವ ಮೂರ್ತಿಯಾಗಿ ಮಠದಿಂದ ಹೊರಡುತ್ತದೆ.

ಕಾರ್ತೀಕೋತ್ಸವ ನಡೆಯುವ ರೀತಿ :

ಊರಿನ ಗೌಡ, ಶಾನುಭೋಗ, ಬಣಕಾರ ಇವರ ಸಮಕ್ಷಮದಲ್ಲಿ ಕಾರ್ತಿಕೋತ್ಸವ ಹಿರೇಮಠದಿಂದ ಆರಂಭವಾಗುತ್ತದೆ. ಮಠದ ಗರ್ಭಗುಡಿಯಿಂದ ಸ್ವಾಮಿ ಹೊರಡುವುದಕ್ಕಿಂತ ಮುಂಚಿತವಾಗಿ ಧರ್ಮ ಕರ್ತರೊಬ್ಬರು ಅಕ್ಬರ್ ಚಕ್ರವರ್ತಿ ಕೊಟ್ಟಿರುವ ಖಡ್ಗವನ್ನು ಹಿಡಿದು ಮುಂದೆ ತರುತ್ತಾರೆ. ಆ ಖಡ್ಗವನ್ನು ಮೊದಲು ಉತ್ಸವದಲ್ಲಿ ಗೌಡರ ಮನೆತನಕ್ಕೆ ಸೇರಿದವರು ಹಿಡಿಯುತ್ತಿದ್ದರು. ಇತ್ತೀಚೆಗೆ ಅವರವರಲ್ಲಿಯೇ ಭಿನ್ನಾಭಿಪ್ರಾಯ ಬಂದಿದ್ದರಿಂದ ಧರ್ಮಕರ್ತರು ಹಿಡಿಯುತ್ತಾರೆ. ನಂತರ ಸ್ವಾಮಿಯ ಮೂರ್ತಿಯನ್ನು ಮಂಗಳ ವಾದ್ಯಾಗಳ ಮೂಲಕ ಘೋಷಣೆಗಳನ್ನು ಕೂಗುತ್ತಾ ಗದ್ದುಗೆಯಿಂದ ಹೊರಗೆ ತಂದು ಪಲ್ಲಕ್ಕಿಯಲ್ಲಿ ಕೂಡಿಸುತ್ತಾರೆ. ತಕ್ಷಣವೇ ಮಠದ ಬಾಗಿಲನ್ನು ಮುಚ್ಚುತ್ತಾರೆ.

ರಾತ್ರಿ ೧೦ ಗಂಟೆಗೆ ಹಿರೇಮಠದಿಂದ ಆರಂಭವಾದ ಉತ್ಸವವು ಮೊದಲು ಕರಿಗಲ್ಲಿನ ಮೇಲೆ ಹಾಯ್ದು ಮೂರುಕಲ್ಲು ಮಠದ ಸಮೀಪ ಬರುತ್ತದೆ. ಇಲ್ಲಿ ಮೂರುಕಲ್ಲು ಮಠದ ಸ್ವಾಮಿಯ ಗದ್ದುಗೆಗೆ ಧರ್ಮಕರ್ತರು ದೀವಟಿಗೆ ಹಿಡಿದುಕೊಂಡು ಹೋಗಿ ದೀಪಹಚ್ಚಿ ಬಿನ್ನಹ ಮಾಡಿ ಸ್ವಾಮಿಯನ್ನು ಕರೆತರುವ ಪದ್ದತಿ ಮಾಡುತ್ತಾರೆ. ಅಲ್ಲಿಂದ ಹೊರಟ ಸ್ವಾಮಿಯ ಉತ್ಸವ ತೊಟ್ಟಿಲು ಮಠದ ಕಡೆಗೆ ಬರುತ್ತದೆ. ಅಲ್ಲಿ ಸ್ವಾಮಿಯು ತೊಟ್ಟಿಲ ಮಠದ ಧರ್ಮಕರ್ತರಿಂದ ವೀಳೆಯವನ್ನು ಸ್ವಿಕರಿಸುತ್ತಾನೆ. ಕಾರಣ ಮೊದಲು ತೊಟ್ಟಿಲ ಮಠವು ಭಕ್ತಳಾದ ನಿಂಬಿಯಕ್ಕನ ಮನೆಯಾಗಿದ್ದು ಸುಮಾರು ೧೨೦ ವರ್ಷಗಳ ಹಿಂದೆ ಭಕ್ತರು ಆ ಮನೆಯನ್ನು ಮಠವಾಗಿ ಪರಿವರ್ತನೆ ಮಾಡಿದರು ಮತ್ತು ಅಷ್ಟಾವರಣದ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದರೆಂದು ಹೇಳುತ್ತಾರೆ. ಈಗಲೂ ನಿಂಬಿಯಕ್ಕನ ವಂಶಜರಾದ ಶೆಟ್ಟಿ ಮೂಗಣ್ಣ ಮತ್ತು ಅವರ ಸಹೋದರರು ತೊಟ್ಟಿಲ ಮಠದ ಧರ್ಮಕರ್ತರಾಗಿ ಸ್ವಾಮಿಯ ಪೂಜೆಮಾಡುತ್ತಾರೆ. ಮಕ್ಕಳಿಲ್ಲದ ನಿಂಬಿಯಕ್ಕ ಕೊಟ್ಟೂರೇಶ್ವರನನ್ನು ಮಗುವಿನಂತೆ ಜೋಪಾನ ಮಾಡಿದ ಮನೆಯಾಗಿರುವುದರಿಂದ ಈ ಮನೆಯಲ್ಲಿ ಸ್ವಾಮಿಯು ಉತ್ಸವದ ಮೂಲಕ ಹೋಗುವಾಗ ವೀಳೆಯವನ್ನು ಸ್ವೀಕರಿಸುತ್ತಾರೆ.

ನಿಂಬಿಯಕ್ಕನ ವಂಶದವರಿಂದ ವೀಳೆಯವನ್ನು ಸ್ವೀಕರಿಸಿದ ಮೇಲೆ ಸ್ವಾಮಿಯ ಉತ್ಸವವು ಜೀವಸಮಾಧಿ ಹೊಂದಿದ ಗಚ್ಚಿನ ಮಠಕ್ಕೆ ಹೊಗುತ್ತದೆ. ಅಲ್ಲಿ ಸ್ವಾಮಿಯನ್ನು ಗರ್ಭಗುಡಿಯ ಮುಂದೆ ಒಂದು ಮಂಚ ಹಾಕಿ, ತಡಿ ಮೇಲೆ ಕೂಡಿಸುತ್ತಾರೆ. ಉತ್ಸವದ ಜೊತೆಗೆ ಬಂದಿರುವ ಕ್ರಿಯಾಮೂರ್ತಿಯನ್ನು ಸ್ವಾಮಿಮೂರ್ತಿಯ ಜೊತೆಗೆ ಕೂಡಿಸುತ್ತಾರೆ. ಆಗ ಅರ್ಧಗಂಟೆಯ ಕಾಲ ಸ್ವಾಮಿಯ ಮುಂದೆ ವೀರಭದ್ರ ದೇವರ ಒಡಪುಗಳನ್ನು ಹೇಳುತ್ತಾರೆ. ನಂತರ ಮಠದಲ್ಲಿ ಸ್ವಾಮಿಗೆ ಭಿನ್ನಹ ಮಾಡಿ ಹೊರಡಿಸುತ್ತಾರೆ. ಅಲ್ಲಿಂದ ಸ್ವಾಮಿಯ ಉತ್ಸವ ಪುನಃ ಹಿರೇಮಠಕ್ಕೆ ರಾತ್ರಿ ೧ ಗಂಟೆಗೆ ಬಂದು ಮುಕ್ತಾಯವಾಗುತ್ತದೆ. ಇದೇ ರೀತಿಯಾಗಿ ಒಂದೂವರೆ ತಿಂಗಳುವರೆಗೂ ಬರುವ ಸೋಮವಾರ ಗುರುವಾರಗಳಲ್ಲಿ ಸಾಮಾನ್ಯವಾಗಿ ಕಾರ್ತಿಕೋತ್ಸವ ನಡೆಯುತ್ತಿರುತ್ತವೆ.

ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ನಡೆಯುವ ಕೊನೆಯ ಕಾರ್ತಿಕೋತ್ಸವವು ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಸುತ್ತಲಿನ ಊರುಗಳ ಭಕ್ತರು ಅಧಿಕ ಸಂಖ್ಯೆಯಲ್ಲಿ ನೆರೆದು ಜಾತ್ರೆಯ ಸಡಗರ ನಡೆದಿರುತ್ತದೆ. ಈ ಕೊನೆಯ ದಿನದ ಕಾರ್ತಿಕೋತ್ಸವದ ವಿಶೇಷತೆಯೆಂದರೆ ರಾತ್ರಿ ೮:೩೦ ಕ್ಕೆ ಆರಂಭ, ಲಕ್ಷ ದೀಪೋತ್ಸವ ಬೆಳಕು, ಹಿರೇಮಠದ ಮುಂದೆ ಕೊಬ್ಬರೆ ಸುಡುವುದು, ಸುಮಾರು ೨ ಗಂಟೆಗಳ ಕಾಲ ತೇರು ಬಯಲಲ್ಲಿ ಬಣ್ಣ ಬಣ್ಣದ ಪಟಾಕಿಗಳ ಸಿಡಿಲು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಬೆಳ್ಳಿಯ ರಥೋತ್ಸವ ಇಷ್ಟು ವಿಶೇಷವಾಗಿ ಈ ಕಾರ್ತಿಕೋತ್ಸವದಲ್ಲಿ ಕಂಡು ಬರುತ್ತದೆ.

ಊರಿನ ಪ್ರಮುಖ ಬೀದಿಯ ಅಕ್ಕಪಕ್ಕದಲ್ಲಿ ಹಚ್ಚಿದ ಲಕ್ಷ ದೀಪೋತ್ಸವದ ಬೆಳಕು ನೋಡಲು ಎರಡು ಕಣ್ಣುಗಳು ಸಾಲದಾಗಿರುತ್ತವೆ. ಪದ್ದತಿಯಂತೆ ಮುಂದೆ ವೀರಭದ್ರ ಸ್ವಾಮಿಯ ಖಡ್ಗ, ಅದರ ಹಿಂದೆ ಸ್ವಾಮಿಯ ಮೂರ್ತಿಯ ಪಲ್ಲಕ್ಕಿ ವಿಜೃಂಭಣೆಯಿಂದ ಗರ್ಭಗುಡಿಯಿಂದ ಹೊರಟು ಬೆಳ್ಳಿ ರಥದ ತೇರಿನಲ್ಲಿ ನಂದಿಯ ಮೇಲೆ ಕುಳಿತು ಜೊತೆಗೆ ಮಠದ ಕ್ರಿಯಾ ಮೂರ್ತಿಗಳನ್ನು ಕೂಡಿಸಿ ಉತ್ಸವ ಮುಂದೆ ಸಾಗುತ್ತದೆ. ಆ ದಿನ

ಉತ್ಸವದ ಮುಂದೆ ವಿಶೇಷವಾಗಿ ಎರಡು ಪಂಚ ದೀವಟಿಕೆಗಳನ್ನು ಹಚ್ಚಿಕೊಂಡು ಹಿಡಿದಿರುತ್ತಾರೆ. ಆ ದಿನ ಮಾತ್ರ ಸ್ವಾಮಿ ಮಠದಿಂದ ಹೊರಟ ಮೇಲೆ ಮಠದ ಬಾಗಿಲನ್ನು ಮುಚ್ಚುವುದಿಲ್ಲ ಹಿರೇಮಠದ ಮುಂದೆ ಇಡೀ ರಾತ್ರಿ ಭಕ್ತರು ಭಕ್ತಿ ಪೂರಕವಾಗಿ ಒಣ ಕೊಬ್ಬರಿಯನ್ನು ಸುಡುತ್ತಾರೆ. ಯಾವ ಕಾರಣಕ್ಕಾಗಿ ಒಣ ಕೊಬ್ಬರಿಯನ್ನು ಸುಡುತ್ತಾರೆಂಬುದು ಯಾರಿಗೂ ಸರಿಯಾಗಿ ಗೊತ್ತಿಲ್ಲ. ಇದು ಹಿಂದಿನಿಂದ ನಡೆದು ಬಂದ ಪದ್ದತಿಯೆಂದಷ್ಟೆ ಹೇಳುತ್ತಾರೆ. ಸ್ವಾಮಿಯ ಕೊನೆಯ ಈ ಉತ್ಸವವೂ ಸಹ ಪದ್ದತಿಯಂತೆ ಮೊದಲು ಮೂರುಕಲ್ಲು ಮಠ, ಅಲ್ಲಿಂದ ತೊಟ್ಟಿಲುಮಠ ಮುಂದೆ ಗಚ್ಚಿನಮಠಕ್ಕೆ ಹೋಗಿ ಗಚ್ಚಿನ ಮಠದಲ್ಲಿ ಸ್ವಾಮಿಯನ್ನು ಕೂಡಿಸಿ ಭಕ್ತರು ವೀರಭದ್ರ ದೇವರ ಒಡಮುಗಳನ್ನು ಹೇಳುತ್ತಿರುತ್ತಾರೆ. ಇವೆಲ್ಲ ಕಾರ್ಯಕ್ರಮ ಮುಗಿದ ಮೇಲೆ ಬೆಳಗಿನ ಜಾವ ೪ ಗಂಟೆಯ ಸಮಯಕ್ಕೆ ಹಿರೇಮಠಕ್ಕೆ ಬಂದು ಉತ್ಸವ ಮುಕ್ತಾಯವಾಗುತ್ತದೆ.

ಒಟ್ಟಾರೆಯಾಗಿ ರಥೋತ್ಸವ ಹಾಗೂ ಪಲ್ಲಕ್ಕಿ ಮತ್ತು ಕಾರ್ತಿಕೋತ್ಸವವು ಇಲ್ಲಿನ ವಿಶೇಷ ಉತ್ಸವಗಳಾಗಿದ್ದು ಇವಲ್ಲದೆ ಇನ್ನು ಕೆಲವು ಜನಪದರು ಆಚರಿಸುವ ಯುಗಾದಿ, ನಾಗರಪಂಚಮಿ, ದಸರಾ, ದೀಪಾವಳಿ, ಕಾರಹುಣ್ಣಿಮೆ, ಗಣೇಶಚೌತಿ ಹಾಗೂ ಗ್ರಾಮದೇವತೆಯ ಹಬ್ಬಗಳನ್ನು ಸಹ ಇಲ್ಲಿ ಆಚರಿಸಲಾಗುತ್ತದೆ. ಅತೀ ಹೆಚ್ಚು ಒತ್ತನ್ನು ವಿಶೇಷ ಜಾತ್ರೆ–ಮಹೋತ್ಸವಗಳಿಗೆ ನೀಡುವುದು ಇಲ್ಲಿನ ಜನಪದರ ನಂಬಿಕೆ ಹಾಗೂ ಆಚರಣೆಯಾಗಿದೆ. ನಾಡಿನಾದ್ಯಂತ ಆಚರಿಸುವ ಸಾಮಾನ್ಯ ಎಲ್ಲಾ ಹಬ್ಬಗಳು ಇಲ್ಲಿ ಕಂಡು ಬರುತ್ತವೆ.

ಅಡಿ ಟಿಪ್ಪಣಿಗಳು :

೧. ಕೊಟ್ಟೂರು ಜನಪದರ ಜನಪದ ಹಾಡುಗಳು

೨. ಕೊಟ್ಟೂರು ಜನಪದರ ಜನಪದ ಮುತ್ತಿಗೆ ಪದ

೩. ಪಿ.ಎಂ. ಬಸವಲಿಂಗಯ್ಯ ಉಪನ್ಯಾಸಕರು, **'ಕೊಟ್ಟೂರೇಶ್ವರ ರಥೋತ್ಸವ'** ಪುಸ್ತಕ **ಪರಿಪೂರ್ಣ**, ೨೦೦೫, ಪ್ರಕಾಶನ ಪ್ರಣಪ ಪ್ರತಿಷ್ಠಾನ– ಬೆಂಗಳೂರು, ಪುಠ ಸಂಖ್ಯೆ ೧೦೭–೧೧೦.

೪. ಪೂಜಾರ ಕೊಟ್ರಪ್ಪ, ಉಪನ್ಯಾಸಕರು, **'ಕಾರ್ತಿಕೋತ್ಸವ'** ಪುಸ್ತಕ, **ಪರಿಪೂರ್ಣ** ೨೦೦೫, ಪ್ರಕಾಶನ ಪ್ರಣವ ಪ್ರತಿಷ್ಠಾನ ಬೆಂಗಳೂರು ಪುಠಸಂಖ್ಯೆ ೧೧೧, ೧೧೨, ೧೧೨,

ಅಧ್ಯಾಯ : ಆರು

ಸಮಕಾಲೀನತೆ ಮತ್ತು ಕೊಟ್ಟೂರು.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಇಂದು **'ಕೊಟ್ಟೂರು'** ಒಂದು ಮುಖ್ಯ ಪಟ್ಟಣವಾಗಿದ್ದು, ಭೌಗೋಳಿಕವಾಗಿ ಕರ್ನಾಟಕದ ಕೇಂದ್ರವಾದ ಹರಿಹರದಿಂದ ಕೇವಲ ೭೦ ಕಿ.ಮೀ. ದೂರದ ಆಯಕಟ್ಟಿನ ಪ್ರದೇಶದಲ್ಲಿದೆ. ಧಾರ್ಮಿಕ ಕೇಂದ್ರವೆಂದೂ ಹೆಚ್ಚು ಪ್ರಸಿದ್ಧವಾಗಿದ್ದರೂ ಇದು ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಸಾಕಷ್ಟು ಹೆಸರು ಮಾಡಿದೆ. ಆರ್ಥಿಕ ದೃಷ್ಟಿಯಿಂದ ಪ್ರಮುಖ ವಾಣಿಜ್ಯ ಕೇಂದ್ರವಾಗಿರುವ ಎಲ್ಲಾ ಅವಕಾಶಗಳಿದ್ದರೂ ಅವುಗಳಿಂದ ವಂಚಿತವಾಗಿರುವುದು ಒಂದು ವಿಪರ್ಯಾಸವೇ ಸರಿ. ಆದರೆ ಇದೀಗ ಬದಲಾವಣೆಯ ಗಾಳಿ ಬೀಸುತ್ತಿದ್ದು ಕೊಟ್ಟೂರಿಗೆ ವಾಣಿಜ್ಯ ದೃಷ್ಟಿಯಿಂದ ತೀವ್ರಬೆಳವಣಿಗೆ ಸಾಧಿಸಲು ಅನುಕೂಲವಾಗುವ ಕೆಲವು ಯೋಜನೆಗಳು ಅನುಷ್ಠಾನ ಗೊಳ್ಳುತ್ತಿದ್ದು ಇನ್ನು ಹಲವು ಯೋಜನೆಗಳು ಜಾರಿಗೊಂಡರೆ ಕೊಟ್ಟೂರು ನಿಸ್ಸಂಶಯವಾಗಿ ರಾಜ್ಯದ ಮಹತ್ವದ ವಾಣಿಜ್ಯ ಕೇಂದ್ರವಾಗಿ ರೂಪಗೊಳ್ಳಲು ಹೆಚ್ಚು ಸಮಯ ಬೇಕಿಲ್ಲ.

ಇಲ್ಲಿನ ಜನರ ಆರ್ಥಿಕ ಅವಶ್ಯಕತೆಗಳು ಅಭಿವೃದ್ಧಿಯ ಸಾಮರ್ಥ್ಯಗಳ ಬಗ್ಗೆ ಒಂದೊಂದಾಗಿ ತಿಳಿಯುವುದು ಒಳ್ಳೆಯದು. ಇವುಗಳನ್ನು ಐತಿಹಾಸಿಕ, ಸಾಂಸ್ಕೃತಿಕ, ಆಡಳಿತಾತ್ಮಕ, ವಾಣಿಜ್ಯ ಮತ್ತು ಅವಶ್ಯಕ ಎಂದು ವಿಂಗಡಿಸಿ ನೋಡಬಹುದು.

೬:೧. ಐತಿಹಾಸಿಕ :

೧೯ನೇ ಶತಮಾನದ ಮಹಾನ್ ಸಂತ ಕೊಟ್ಟೂರೇಶ್ವರರು ಬಾಳಿ, ಬದುಕಿ, ಜೀವಂತ ಸಮಾಧಿಯಾದ ಕೊಟ್ಟೂರು ಅದಕ್ಕೂ ಹಿಂದೆಯೇ ವ್ಯಾಪಾರದ ಕೇಂದ್ರವಾಗಿತ್ತೆಂದು ಬಾಗಳಿ ಶಿಲಾಶಾಸನದಿಂದ ತಿಳಿಯುತ್ತದೆ. ಹರಪನಹಳ್ಳಿ ನಾಯಕರ ಕಾಲದಲ್ಲಿ ಸೈನಿಕ ಕೇಂದ್ರವಾಗಿದ್ದ ಕೊಟ್ಟೂರು ಬ್ರಿಟೀಷ್ ಆಡಳಿತ ಕಾಲದಲ್ಲಿ ವಾಣಿಜ್ಯ ಕೇಂದ್ರವಾಗಿ ಬೆಳೆದು ಬಂದಿದ್ದರಿಂದ ೧೯೦೫ ರಲ್ಲಿ ರೈಲ್ವೆ ಮಾರ್ಗ ನಿರ್ಮಿಸಿ ಇಲ್ಲಿಂದ ಹತ್ತಿ, ಹತ್ತಿಬೀಜ ಮತ್ತು ಬಟ್ಟೆ, ಎಣ್ಣೆಕಾಳುಗಳು, ತಂಬಾಕು, ಈರುಳ್ಳಿ ಮುಂತಾದವುಗಳನ್ನು ದೇಶ ವಿದೇಶಗಳಿಗೆ ಸಾಗಿಸುತ್ತಿದ್ದರು. ಹಾಗೆ ನೋಡಿದರೆ ಸ್ವಾತಂತ್ರ್ಯ ನಂತರವೇ ಕೊಟ್ಟೂರಿನ ಅಭಿವೃದ್ಧಿಗೆ ಮಂಕು ಹಿಡಿದಂತೆ ತೋರುತ್ತದೆ.

೬:೨. ಸಾಂಸ್ಕೃತಿಕ :

ಒಂದು ಪ್ರದೇಶದ ಅಭಿವೃದ್ಧಿಯಲ್ಲಿ ಅಲ್ಲಿನ ಸಾಂಸ್ಕೃತಿಕ ಅಂಶಗಳೂ ಸಾಕಷ್ಟು ಪ್ರಭಾವ ಬೀರುತ್ತವೆಯಾದ್ದರಿಂದ ಈ ಅಂಶಗಳನ್ನು ಅ) ಧಾರ್ಮಿಕ, ಆ) ಶೈಕ್ಷಣಿಕ, ಇ) ಪ್ರವಾಸಿ ಕೇಂದ್ರಗಳಾಗಿ ವಿಭಾಗಿಸಿ ಪರಿಣಾಮ ಮತ್ತು ಸಾಧ್ಯತೆಗಳನ್ನು ವಿಶ್ಲೇಷಿಸಲಾಗಿದೆ.

ಅ. ಧಾರ್ಮಿಕ ಅಂಶಗಳು :

ಒಂದೇ ಊರಿನಲ್ಲಿ ಒಬ್ಬನೇ ಸಂತನ ಐದು ದೇವಾಲಯಗಳಿರುವುದು, ಒಬ್ಬ ಹಿಂದೂ ಸಂತನಿಗೆ ಮುಸ್ಲಿಂರಂತೆ ದಿನಕ್ಕೆ ಐದು ಪೂಜೆಗಳು ನಡೆಯುವುದು ಮತ್ತು ದೇವಸ್ಥಾನಗಳಲ್ಲಿ ಶಿಲಾಮೂರ್ತಿಗಳ ಬದಲು ವೀರಶೈವಧರ್ಮದ ಅಷ್ಟಾವರಣಗಳನ್ನು (ವಿಭೂತಿ, ರುದ್ರಾಕ್ಷಿ, ಗಂಧ ಇತ್ಯಾದಿ) ಒಂದು ಡಬ್ಬಿಯಲ್ಲಿರಿಸಿ, ಅವುಗಳನ್ನೆ ಪೂಜಿಸುವ ಪರಿಪಾಟವಿರುವ ಮೂಲ ನಕ್ಷತ್ರವಿದ್ದಾಗಲೇ (ಮೂಢನಂಬಿಕೆಗಳಿಗೆ ವಿರುದ್ಧವಾಗಿ) ರಥೋತ್ಸವ ಜರುಗುವ ಮತ್ತು ಹರಿಜನ ಕೇರಿಯ ನೈವೇದ್ಯ ಸ್ವೀಕರಿಸಿ ರಥವೇರುವ ವೈಶಿಷ್ಟ್ಯಗಳಲ್ಲಿ ಇರುವ ಏಕೈಕ ಕ್ಷೇತ್ರವೆಂದರೆ ಕೊಟ್ಟೂರು ಮಾತ್ರ.

ಇಷ್ಟೆಲ್ಲಾ ವೈಶಿಷ್ಟ್ಯಗಳಿರುವ ಈ ಊರನ್ನು ಸರಕಾರ **"ಶ್ರೀಕ್ಷೇತ್ರ"** ವೆಂದು ಪರಿಗಣಿಸಿ ಸಾರಿಗೆ ಸಂಪರ್ಕ, ವಸತಿ ಸೌಕರ್ಯಗಳನ್ನು ನೀಡಿದರೆ ಕೊಟ್ಟೂರಿನ ಆರ್ಥಿಕಾಭಿವೃದ್ಧಿಗೆ ಇನ್ನೊಷ್ಟು ಒತ್ತಾಸೆ ನೀಡಿದಂತಾಗುತ್ತದೆ.

ಆ. ಪ್ರವಾಸಿ ಕೇಂದ್ರ :

ಮೇಲೆ ತಿಳಿಸಿರುವ ಹಲವು ವೈಶಿಷ್ಟ್ಯಗಳಿಂದಾಗಿ ಕೊಟ್ಟೂರು ಪ್ರತಿನಿತ್ಯ ಸಹಸ್ರಾರು ಭಿಕ್ತಾಧಿಗಳನ್ನು ಸೆಳೆಯುತ್ತದೆ. ಇಲ್ಲಿನ ರಥೋತ್ಸವ ಮತ್ತು ಕಾರ್ತಿಕೋತ್ಸವಗಳಂದು ಎರಡರಿಂದ ಮೂರು ಲಕ್ಷ ಜನ ಭಕ್ತಾದಿಗಳು ಸೇರುತ್ತಾರೆ. ಹೀಗೆ ಕೊಟ್ಟೂರು ಸ್ವತಃ ಯಾತ್ರಾಸ್ಥಳವಾಗಿದೆಯಲ್ಲದೆ ಸುತ್ತ ಮುತ್ತಲೂ ಸಾಕಷ್ಟು ಪ್ರವಾಸಿ ಸ್ಥಳಗಳಿದ್ದು ಅವುಗಳನ್ನು ಅಭಿವೃದ್ದಿ ಪಡಿಸಿದರೆ ಕೊಟ್ಟೂರು ದೊಡ್ಡ ಪ್ರವಾಸಿ ಕೇಂದ್ರವಾಗಿ ಬೆಳೆಯಬಲ್ಲದು.

ಇ. ಶೈಕ್ಷಣಿಕ ಕೇಂದ್ರ :

ಪ್ರಾಥಮಿಕ ಹಂತದಿಂದ ಪದವಿ ಹಂತದವರೆಗೂ ಕೊಟ್ಟೂರಿನಲ್ಲಿ ಒಳ್ಳೆಯ ಶಿಕ್ಷಣವೇ ಇದೆ. ರಾಜ್ಯದಲ್ಲಿಯೇ ಪ್ರಚಾರವು ಸಹ ಇದೆ. ವಿಪರ್ಯಾಸವೆಂದರೆ ಇಲ್ಲಿ ವೃತ್ತಿಪರ ಶಿಕ್ಷಣಗಳಾದ ವೈದ್ಯಕೀಯ, ಇಂಜಿನಿಯರಿಂಗ್, ಬಿ.ಬಿ.ಎಂ., ಎಂ.ಬಿ.ಎ. ಮತ್ತು ಎಂ.ಎಸ್.ಡ.ಬ್ಯೂ ಇತ್ಯಾದಿ ಕೋರ್ಸುಗಳು ಇಲ್ಲಿಯೇ ಸಿಗುವಂತಾಗಬೇಕು ಮತ್ತು ವಸತಿಶಾಲೆ ಮತ್ತು ಹಾಸ್ಟಲ್‌ಗಳಾಗಬೇಕು.

ಹೀಗೆ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಹೊಂದಿರುವ ಕೊಟ್ಟೂರು ತನ್ನ ಧಾರ್ಮಿಕ, ಶೈಕ್ಷಣಿಕ ಮತ್ತು ಪ್ರವಾಸಿ ಸಾಮರ್ಥ್ಯಗಳನ್ನು ಬೆಳೆಸಿ ಬಳಸಿಕೊಂಡರೆ ಆರ್ಥಿಕ ಅಭಿವೃದ್ಧಿ ಸಾಧಿಸಲು ಸುಲಭವಾಗಬಹುದು.

೬:೩. ಆಡಳಿತಾತ್ಮಕ ಆಶಯಗಳು :

ಈಗಿನ ರಾಜಕೀಯ ನಾಯಕರು ಆಶ್ಚರ್ಯದಿಂದ ಕೇಳುವ ಸಾಮಾನ್ಯ ಪ್ರಶ್ನೆಯೆಂದರೆ, ಕೊಟ್ಟೂರು ತಾಲೂಕು ಅಲ್ಲವೆ ? ಎಂದು, ವಾಸ್ತವವಾಗಿ ಕೂಡ್ಲಿಗಿ ತಾಲೂಕಿಗೆ ಸೇರಿದ್ದರೂ ಕೂಡಾ ಕೊಟ್ಟೂರು ಕೂಡ್ಲಿಗಿಗಿಂತ ಸಾಕಷ್ಟು ದೊಡ್ಡದಾಗಿ ಬೆಳೆದಿದೆ. ಆದರೂ ಕೂಡ ತಾಲೂಕು ಸ್ಥಳವಲ್ಲ ಎಂಬ ಒಂದೇ ಕಾರಣಕ್ಕಾಗಿ ಅವಕಾಶಗಳಿಂದ ವಂಚಿತವಾಗಿದೆ.

೨೦೦೧ರ ಜನಗಣತಿಯಂತೆ ೨೪,೦೦೦ಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಕೊಟ್ಟೂರು ಹೊಂದಿದ್ದು ಹತ್ತಿರದ ಹಳ್ಳಿಗಳನ್ನು ಸೇರಿಸಿ ೫೦೦ ಚ.ಮೈಲು ವಿಸ್ತೀರ್ಣದ ಹೊಸ ತಾಲೂಕು ಮಾಡಬಹುದು, ೧೯೮೫ರಲ್ಲಿ ಅಂದಿನ ಜಿಲ್ಲಾಧಿಕಾರಿ **ಶ್ರೀ. ಸುಧೀರ್ ಕುಮಾರ್** ಅವರು ಕೊಟ್ಟೂರನ್ನು ತಾಲೂಕು ಮಾಡುವಂತೆ ಶಿಫಾರಸ್ಸು ಮಾಡಿದ್ದರು, ಕೊಟ್ಟೂರು ಕೇವಲ **'ಕೊಟ್ಟ'** ಊರಾಗಿದೆಯೇ ಹೊರತು 'ತೆಗೆದುಕೊಂಡ' ಊರಾಗಿಲ್ಲ. ಇಲ್ಲಿನ ಜನರ ಹೋರಾಟದ ಮನೋಭಾವನೆಯ ಕೊರತೆಯಿಂದಾಗಿ ಇನ್ನೂ ತಾಲೂಕಾಗದೆ ಹಾಗೆಯೇ ಉಳಿದಿದ್ದು ಈ ಒಂದು ಕೆಲಸವಾದರೆ ಕೊಟ್ಟೂರಿನ ಬೆಳವಣಿಗೆಗೆ ಗರಿ ಮೂಡುತ್ತದೆ.

೬:೪. ಕೈಗಾರಿಕೆಗಳು :

ಬ್ರಿಟೀಷ್ ಆಡಳಿತಾವಧಿಯಲ್ಲಿ ತೀವ್ರವಾಗಿ ಪ್ರಾರಂಭಗೊಂಡ ಉದ್ದಿಮೆಗಳು ನಂತರ ಅಷ್ಟಾಗಿ ಬೆಳವಣಿಗೆ ಕಾಣದೆ ಇರುವುದು ಇಲ್ಲಿನ ವಿಶೇಷವಾಗಿದೆ. ಈಗ ಇಲ್ಲಿ ಒಂದು ಕಾಟನ್ ಸ್ಪಿನ್ನಿಂಗ್ ಮಿಲ್, ೨ ಪ್ರಸ್ಸಿಂಗ್‌ಮಿಲ್, ಹತ್ತು ಜೆನ್ನಿಂಗ್ ಮತ್ತು ಡಿಕಾರ್ಟಿ ಕೇಟರ್‌ಗಳು, ೮–೧೦ ಶೇಂಗಾ ಡಿಕಾಡಿಕೇಟರ್‌ಗಳು, ೫–೬ ಸಾಮಿಲ್‌ಗಳು ಮಾತ್ರವಿದ್ದು ಮೊದಲಿದ್ದ ಕೆಲವು ಕಾಟನ್ ಮತ್ತು ಶೇಂಗಾ ಎಣ್ಣೆ ಮಿಲ್‌ಗಳು ಮುಚ್ಚಿಹೋಗಿವೆ.

೬:೫. ಹೋಟೆಲ್ ಉದ್ಯಮ :

ಕೊಟ್ಟೂರು ಎಂದೊಡನೆ ನೆನಪಾಗುವುದು ಇಲ್ಲಿನ ಬಾಯಲ್ಲಿ ನೀರೂರಿಸುವ ಬಿಸಿ ಬಿಸಿ ಮಿರ್ಚಿ ಇಲ್ಲಿ ಒಂದು ವಾಡಿಕೆ ಪ್ರಚಲಿತವಿದೆ. **'ಒಂದು ಕಲ್ಲನ್ನು ಯಾವ ದಿಕ್ಕಿಗೂ ಎಸೆದರೆ ಮಿರ್ಚಿ ಅಂಗಡಿ ಮೇಲೆ ಇಲ್ಲವೇ 'ಕೊಟ್ರೇಶಿ' ಎಂಬ ಹೆಸರಿನ ಮನೆಯ ಮೇಲೆ ಬೀಳುತ್ತದೆ'** ಎಂಬುದು ಹಾಗೆ ನೋಡಿದರೆ ಇಲ್ಲಿ ಹೆಜ್ಜೆಗೊಂದರಂತೆ ಸಿಗುವ ಮಿರ್ಚಿ ಹೋಟೆಲ್‌ಗಳು ಜನರ ಜಿಹ್ವಾಚಪಲತೆಯನ್ನು ತಣಿಸುವ, ಜಠರಾಗ್ನಿಯನ್ನು ತೃಪ್ತಿಪಡಿಸುವುದರ ಜೊತೆಗೆ ಸಾವಿರಾರು ಜನರಿಗೆ ಉದ್ಯೋಗ ಒದಗಿಸಿವೆ. ಇಲ್ಲಿನ ಹೋಟೆಲ್‌ಗಳಲ್ಲಿ ಪ್ರತಿನಿತ್ಯ ಕನಿಷ್ಠ ೫೦ ಚೀಲ ಮಂಡಕ್ಕಿ, ೩ ಕ್ವಿಂಟಲ್ ಹಸಿ ಮೆಣಸಿನಕಾಯಿ, ೫ ಕ್ವಿಂಟಲ್ ಕಡಲೆ ಬೇಳೆ ಹಿಟ್ಟು ೨–೩ ಬ್ಯಾರಲ್ ಎಣ್ಣೆ ಖರ್ಚಾಗುತ್ತವೆಂದರೆ ಇಲ್ಲಿನ ಲಕ್ಷಾಂತರ ರೂಪಾಯಿಗಳ ವ್ಯಾಪಾರದ ಚಿತ್ರಣ ದೊರೆಯಬಹುದು.

ಉತ್ತರ ಕರ್ನಾಟಕದಲ್ಲಿ ಮಂಡಾಳು–ಮೆಣಸಿನಕಾಯಿ ಸಾಮಾನ್ಯವಾದರೂ ಕೊಟ್ಟೂರಿನ ಮಿರ್ಚಿಗೆ ತನ್ನದೇ ವಿಶಿಷ್ಟರುಚಿ, ಆಕಾರ, ಬಣ್ಣ ಮತ್ತು ಘಮ ಘಮವೆನಿಸುವ ಪರಿಮಳಗಳಿವೆ. ಒಟ್ಟಿನಲ್ಲಿ ಪಂಚೇಂದ್ರಿಯಗಳನ್ನು ತಣಿಸುವ ಕೊಟ್ಟೂರಿನ 'ಮಿರ್ಚಿ' ಎಂಬ ಮಾಯಾಂಗನೆಯ ಸೆಳೆತದಿಂದ ತಪ್ಪಿಸಿಕೊಳ್ಳುವುದು ಎಂಥವರಿಗೂ ಅಸಾಧ್ಯ. ಆದರೆ ಬೆಳಗಾಂ, ಕುಂದಾ, ಧಾರವಾಡದ ಪೇಡಗಳಂತೆ ಇಲ್ಲಿನ ಮಿರ್ಚಿಗಳನ್ನು ತಯಾರಿಸಿದ ನಂತರ ಕಾಯ್ದಿರಿಸುವುದಾಗಲಿ ಅಥವಾ ಸಾಗಿಸುವುದಾಗಲಿ ಸಾಧ್ಯವಿಲ್ಲ. ಇದನ್ನು ಇಲ್ಲಿಯೇ ಬಂದು ಬಿಸಿ ಬಿಸಿಯಾಗಿಯೇ ಸವಿಬೇಕು.

೬:೬. ಬೀಜೋತ್ಪಾದನಾ ಕೃಷಿ :

ಕೊಟ್ಟೂರು ಹಾಗೂ ಸುತ್ತ ಮುತ್ತಲಿನ ಹಳ್ಳಿಗಳ ವಾಣಿಜ್ಯ ಅಭಿವೃದ್ಧಿಯಲ್ಲಿ ಇಲ್ಲಿನ ಸೀಡ್ಸ ಪ್ರೊಡಕ್ಷನ್‌ನ ಪಾತ್ರ ದೊಡ್ಡದು. ಒಂದೊಮ್ಮೆ ಬಡತನದ ಬೇಗೆಯಲ್ಲಿದ್ದ ಇಲ್ಲಿನ ರೈತರಿಗೆ ಹೆಣ್ಣು ಕೊಡಲು ಪರವೂರಿನವರು ಹಿಂದೆಮುಂದೆ ನೋಡುತ್ತಿದ್ದರು. ಆದರೆ ಇಂದು ಹಳ್ಳಿಯ ರೈತನ ಜೀವನ ಮಟ್ಟ ಸುಧಾರಿಸಿದ್ದು, ಪ್ರತಿ ಮನೆಯ ಮುಂದೆ ಟ್ರಾಕ್ಟರ್‌ಗಳು, ಮೋಟರ್ ಸೈಕಲ್‌ಗಳು, ಮನೆಯಲ್ಲಿ ಟಿ.ವಿ, ಫ್ರಿಜ್ ಮುಂತಾದ ಆಧುನಿಕ ಸೌಕರ್ಯದ ವಸ್ತುಗಳು ಕಂಡು ಬರುತ್ತಿವೆ. ಇದಕ್ಕೆ ಕಾರಣ ಬೀಜೋತ್ಪಾದನೆ.

೬:೭. ಕೊಟ್ಟೂರಿನ ಕೃಷಿ ಮಾರುಕಟ್ಟೆ :

ಕೊಟ್ಟೂರಿನ **'ವಾಲ್‌ಸ್ಟ್ರೀಟ್'** ಅಥವಾ ಆರ್ಥಿಕ ಕೇಂದ್ರವೆಂದರೆ ಇಲ್ಲಿನ ಎ.ಪಿ.ಎಂ.ಸಿ. ಇದು ಜಿಲ್ಲೆಯ ಮೂರನೇ ದೊಡ್ಡ ಮಾರುಕಟ್ಟೆಯಾಗಿದ್ದು, ವಾರ್ಷಿಕ ಸುಮಾರು ೩೦೦ ಕೋಟಿ ರೂ.ಗಳ ವಹಿವಾಟು ನಡೆಸುತ್ತದೆ. ಕೊಟ್ಟೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳ ರೈತರ ಕೃಷಿ ಉತ್ಪನ್ನಗಳಿಗೆ ಇದೇ ದೊಡ್ಡ ಮಾರುಕಟ್ಟೆಯಾಗಿದ್ದು ಶೇಂಗಾ, ಹತ್ತಿ ಮತ್ತು ಮೆಕ್ಕೇಜೋಳಗಳ ಪ್ರಮುಖ ಮಾರುಕಟ್ಟೆಯಾಗಿದೆ.

ಇಲ್ಲಿನ ಎಸ್.ಬಿ.ಎಂ. ಕಾರ್ಪೋರೇಷನ್ ಬ್ಯಾಂಕ್, ಬಿ.ಡಿ.ಸಿ.ಸಿ. ಬ್ಯಾಂಕ್, ತುಂಗಭದ್ರ ಗ್ರಾಮೀಣ ಬ್ಯಾಂಕ್ ಮತ್ತು ಪಿ.ಎಲ್.ಡಿ. ಬ್ಯಾಂಕ್‌ಗಳು ಹಾಗೂ ಹತ್ತಾರು ಖಾಸಗಿ ಫೈನಾನ್ಸ್ ಕಾರ್ಪೋರೇಷನ್‌ಗಳು, ೨೫–೩೦ ದೇಶಿಯ ಬ್ಯಾಂಕ್‌ಗಳು ಇಂದು ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆಸುತ್ತಿರುವುದಕ್ಕೆ ಮುಖ್ಯ ಕಾರಣ ಇಲ್ಲಿನ ರೈತರು ಮತ್ತು ಎ.ಪಿ.ಎಂ.ಸಿ. ಎಂದರೆ ತಪ್ಪಿಲ್ಲ.

೬:೮. ಸಾಹಿತ್ಯ ಶಿಖರ :

ಕೊಟ್ಟೂರಿನ ಸಾಹಿತ್ಯ ಶಿಖರವೆಂದೆ ಪ್ರಸಿದ್ಧರಾದ ಕುಂ.ವೀರಭದ್ರಪ್ಪನವರು ೧೯೫೩ರ ಅಕ್ಟೋಬರ್ ೧ ರಂದು ತಂದೆ ಹಾಲಪ್ಪ, ತಾಯಿ ಕೊಟ್ರಮ್ಮ ಇವರ ಮಗನಾಗಿ ಹುಟ್ಟಿದ್ದು ಕೊಟ್ಟೂರಿನಲ್ಲಿಯೇ. ಅವರು ಬೆಳೆದದ್ದು, ಅವರು ಸಾಹಿತ್ಯ ಗ್ರಹಿಸಿದ್ದು, ಅವರು ಸಾಹಿತ್ಯ ಸಂದೇಶ ನೀಡಿದ್ದು ಕೊಟ್ಟೂರಿನ ಪರಿಸರದಲ್ಲಿಯೇ.

ಪ್ರಾಥಮಿಕ ಹಂತದಿದ್ದ ಪ್ರೌಢಶಾಲಾ ಹಂತದವರೆಗೂ ಈ ಊರಿನಲ್ಲಿಯೇ ವಿದ್ಯಾಭ್ಯಾಸ ಮಾಡಿ ಎಂ.ಎ. ಕನ್ನಡ ಮೈಸೂರಿನಲ್ಲಿ ಪೂರೈಸಿದರು. **'ದೀವಿ ಸೀಮೆಯ ಹಾಡು'** ಈ ಕೃತಿಯಿಂದ ಹಿಡಿದು ಅದರ ಮೂರು ತಲೆಮಾರಿನ ಶ್ಯಾಮಣ್ಣನನ್ನು ದಾಟಿ ಅರಮನೆಯ ಬಾಗಿಲಿಗೆ ನಿಂತಿದೆ ಅವರ ಸಾಹಿತ್ಯ.

ಕೊಟ್ಟೂರಿನ ಕೀರ್ತಿ ಶಿಖರ ವೆಂದೇ ಪ್ರಸಿದ್ಧರಾದ ಕುಂ.ವಿ.ಸಸಸ ಅವರಿಗೆ ಪ್ರಶಸ್ತಿಗಳ ಸರಮಾಲೆಯ ಆಗರವೇ ಅವರ ಕೀರ್ತಿಗೆ ಕಾರಣವಾಗಿದೆ.

'ಕಪ್ಪು' ಕಾದಂಬರಿಗೆ ೧೯೮೩ ರ ಕರ್ನಾಟಕ ಸಾಹಿತ್ಯ ಅಕಾಡಮಿ ಪುರಸ್ಕಾರ.

'ಬೇಲಿ ಮತ್ತು ಹೊಲ' ಕಾದಂಬರಿಗೆ ೧೯೮೭ ರಲ್ಲಿ ವರ್ಧಮಾನ ಉದಯೋನ್ಮುಕ ಪ್ರಶಸ್ತಿ

'ಡೋಮ ಮತ್ತಿತರ ಕಥೆಗಳು' ಕಥಾ ಸಂಕಲನಕ್ಕೆ ೨೯೮೭ ರ ವಾಸುದೇವ ಭೂಪಾಲಂ ಪ್ರಶಸ್ತಿ .

'ಭಗವತಿ ಹಾಡು' ಕಥಾ ಸಂಕಲನಕ್ಕೆ ೧೯೯೦ರ ಮುದ್ದಣ್ಣ ರತ್ನಕರ ಪ್ರಶಸ್ತಿ.

'ಕೊಟ್ರ ಹೈಸ್ಕೂಲಿಗೆ ಸೇರಿದ್ದು' ಕಾದಂಬರಿಗೆ ೧೯೯೪ರ ಮುದ್ದಣ್ಣ ರತ್ನಕರ ಪ್ರಶಸ್ತಿ ಲಭಿಸಿದೆ.

'ಅರಮನೆ' ಕಾದಂಬರಿಗೆ ಫೆಬ್ರವರಿ ೨೦, ೨೦೦೮ ರಂದು ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು ಅವರಿಗೆ ಸಂದಿವೆ.

ಅಲ್ಲದೆ ಅವರ 'ಬೇಲಿಯ ಹೂಗಳು', 'ಕೊಟ್ರ ಹೈಸ್ಕೂಲಿಗೆ ಸೇರಿದ್ದು' ಕಾದಂಬರಿಗಳು ಚಲನಚಿತ್ರ ರೂಪದಲ್ಲಿ ಬಂದು ಪ್ರೇಕ್ಷಕರನ್ನಷ್ಟೇ ಅಲ್ಲ, ವಿಮರ್ಶಕರನ್ನು ಗಮನ ಸೆಳೆದು ಪ್ರಶಸ್ತಿಗೆ ಪಾತ್ರವಾಗಿವೆ. ಅವರ ಕಥೆಗಳಾಧಾರಿತ ಚಿತ್ರಗಳಾದ 'ಮನ ಮೆಚ್ಚಿದ ಹುಡುಗಿ', 'ದೊರೆ' ಮುಂತಾದವುಗಳು ಚಿತ್ರರಸಿಕರನ್ನು ಬೆರಗುಗೊಳಿಸಿ ಇವರಿಂದ ಇನ್ನೂ ಇಂತಹ ಕಥೆಗಳನ್ನು ನಿರೀಕ್ಷಿಸುವಂತೆ ಮಾಡಿದೆ.

ಹೀಗೆ ಗ್ರಾಮೀಣ ಪ್ರದೇಶವಾದ ಕೊಟ್ಟೂರಿನಲ್ಲಿದ್ದುಕೊಂಡೆ ಕೊಟ್ಟೂರಿನ ಕೀರ್ತಿಕಳಶವನ್ನು ರಾಷ್ಟ್ರದಲ್ಲಿ ಮಾತ್ರವಲ್ಲ ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಸೃಜನ ಶೀಲತೆಯಿಂದ ಗಮನ ಸೆಳೆದಿದ್ದಾರೆ. ಕ್ರಿ.ಶ.೧೧೧೨ರಲ್ಲಿ ಬದುಕಿದ್ದಾರೆಂಬ ಮಲ್ಲಪರಾಜ ಅವರು ಸಹ ಕೊಟ್ಟೂರಿನ ಪರಿಸರದಲ್ಲಿಯೇ ಹುಟ್ಟಿ ಬೆಳೆದ ಕವಿಯಾಗಿದ್ದಾರೆ.

೬.೯. ಆರೋಗ್ಯ ಕೇಂದ್ರ :

೧೯೬೪ ರಂದು ಸ್ಥಾಪನೆಯಾದ 'ಸಮುದಾಯ ಆರೋಗ್ಯ ಕೇಂದ್ರ'ವು ಇಂದಿನ ವರೆಗೂ ಕೆಲಸ ನಿರ್ವಹಿಸುತ್ತಾ ಬಂದಿದೆ. ಹಾಲಿ ೨೦೦೧ ರಿಂದ ಡಾ॥ ವೀರಣ್ಣ ವೈದ್ಯರು, ಡಾ॥ ಅರುಣ ಕುಮಾರ್ ಹಾಗೂ ಡಾ॥ ಸುಲೋಚನಾ ವೈದ್ಯರು ಎರವಲು ಸೇವೆಯಲ್ಲಿ ಇದ್ದಾರೆ. ದಿನದ ೨೪ ಗಂಟೆಯೂ ಹೆರಿಗೆ ಸೌಲಭ್ಯ ಉಂಟು ಇಲ್ಲಿ ಒಂದು ದಿನಕ್ಕೆ ೫ ರಿಂದ ೧೦ ಜನ ಮಹಿಳೆಯರು ಹೆರಿಗೆ ಆಗುತ್ತಿದ್ದಾರೆ.

ಈ ಆರೋಗ್ಯ ಕೇಂದ್ರದಲ್ಲಿ ಸಂತಾನ ಹರಣ ಚಿಕಿತ್ಸೆಯು ಉಂಟು. ಕಣ್ಣಿನ ವೈದ್ಯರ ಕೊರತೆ ಇದೆ. ಎಕ್ಸರೆ ಇದೆ. ರಕ್ತ ಮತ್ತು ಮೂತ್ರ ಪ್ರಯೋಗ ಪರೀಕ್ಷೆ ಇದೆ, ಮಲೇರಿಯಾ ಮತ್ತು ಕ್ಷಯ ರೋಗಿಗಳ ಚಿಕಿತ್ಸೆ ಇದೆ, ಇಡೀ ತಾಲೂಕಿನಲ್ಲಿ ಈ ರೋಗದ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತದೆ.

ಲಸಿಕೆ ಕಾರ್ಯಕ್ರಮ :

ಆರು ಮಾರಕ ರೋಗಗಳಿಗೆ, (ಬಾಲ್ಯಕ್ಷಯ, ಗಂಟಲು ಬೇನೆ, ನಾಯಿಕೆಮ್ಮು, ಧನುರ್ವಾಯ, ದಡಾರ ಮತ್ತು ಪೋಲಿಯೋ) ಜಾಂಡಿಸ್ (ಕಾಮಲೆರೋಗ) 'ಬಿ' ವೈರಸ್ ಮೆದುಳು ಜ್ವರದ ವಿರುದ್ದ ಲಸಿಕೆ ಇದೆ. ಕುಷ್ಠರೋಗದ ಕಾಯಿಲೆಗೆ ಉಚಿತ ವೈದ್ಯಕೀಯ ಇದೆ. ಐ.ಸಿ.ಟಿ.ಸಿ.–ಇದೆ. (ಸಮಗ್ರ ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರ) ಎ.ಐ.ಡಿ.ಎಸ್. ೧ ಮತ್ತು ೨ ಪರೀಕ್ಷೆ ಉಚಿತವಾಗಿವೆ. ಹೀಗೆ ತಿಂಗಳ ವಿಶೇಷ ದಿನಗಳಂದು ಆಚರಣೆ ಹಾಗೂ ಕಾರ್ಯಕ್ರಮಗಳು ಇರುತ್ತವೆ.

ಇಷ್ಟೆಲ್ಲಾ ವ್ಯವಸ್ಥೆ ಇರುವ ಈ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇನ್ನೂ ಕೊರತೆ ಎದ್ದು ಕಾಣುತ್ತದೆ. ಏಕೆಂದರೆ ೧೦೦ ಹಾಸಿಗೆಗಳ ಆಸ್ಪತ್ರೆ ಇಲ್ಲಿ ಅವಶ್ಯವಾಗಿ ಬೇಕಾಗಿರುವುದು ಇಲ್ಲಿನ ಜನರ ಅಶಯವಾಗಿದೆ.

ಹೀಗೆ ಇಷ್ಟೆಲ್ಲಾ ವಿವರಗಳ ನೀಡಿಕೆ ಇಲ್ಲಿನ ಪರಿಸ್ಥಿತಿ ಅದರಲ್ಲೂ ಆರ್ಥಿಕ ಪರಿಸ್ಥಿತಿ ತುಂಬಾ ಚನ್ನಾಗಿದೆ ಎಂದೇನೂ ಅಲ್ಲ. ಕಡು ಬಡತನ, ನಿರುದ್ಯೋಗ, ಉದ್ಯಮ ಶೀಲತೆಯ ಕೊರತೆ ಮತ್ತು ಮುಖ್ಯವಾಗಿ ಆರ್ತಿಕ ಸಮಾನತೆ ಮತ್ತು ಶೋಷಣೆಗಳು

ತುಂಬಾ ಅಪಾಯಕಾರಿ ಮಟ್ಟದಲ್ಲಿವೆ. ಈ ಎಲ್ಲವೂ ಹೆಪ್ಪುಗಟ್ಟಿ ಸ್ಫೋಟಗೊಂಡ ಘಟನೆಗಳು ಇಲ್ಲಿ ನಡೆದಿವೆ. ೧೨ ವರ್ಷಗಳ ಹಿಂದೆ ಎ.ಪಿ.ಎಂ.ಸಿ. ದಲ್ಲಾಳಿಗಳು ಮತ್ತು ಗೊಬ್ಬರದ ಅಂಗಡಿಗಳ ಮಾಲೀಕರೆಲ್ಲ ಸೇರಿ ರೈತರನ್ನು ಶೋಷಿಸುತ್ತಿದ್ದಾರೆ ಎಂಬ ಸಮಸ್ಯೆ ತೀವ್ರ ರೂಪತಾಳಿ ಪ್ರಾರಂಭವಾದ ಗಲಭೆ ಅಥವಾ ಕ್ರಾಂತಿಯಲ್ಲಿ ಇಲ್ಲಿನ ಎ.ಪಿ.ಎಂ.ಸಿ. ಕಛೇರಿ ಮತ್ತು ಎಲ್ಲಾ ರಸಗೊಬ್ಬರದ ಅಂಗಡಿಗಳನ್ನು ಧ್ವಂಸಮಾಡಿ ಸುಟ್ಟುಹಾಕಿದ ಮತ್ತು ಗೋಲಿಬಾರ್ ನಲ್ಲಿ ಇಬ್ಬರು ಮಡಿದ ಘಟನೆ ಅಸಮಾನತೆಯ ಪರಿಣಾಮಗಳನ್ನು ಹೊರಹಾಕಿದೆ. ರೈತರ ಕೋಪ ಮತ್ತು ಅಸಹಾಯಕತೆ ಹೇಗೆ ದಾವಾನಲವಾಗಿ ಸುಡಬಲ್ಲದು ಎಂಬುದನ್ನು ನಿರೂಪಿಸಿತು ಇದು ಇಲ್ಲಿನ ಆರ್ಥಿಕ ಇತಿಹಾಸದ ಹೋರಾಟದ ಮಹತ್ವದ ಮೈಲಿಗಲ್ಲು ಎಂದು ದಾಖಲಿಸಬಹುದು. ಆದರೆ ಈಗಲೂ ಪರಿಸ್ಥಿತಿ ಅಷ್ಟೇನೂ ಬದಲಾಗಿಲ್ಲವೆಂಬುದನ್ನು ಅಷ್ಟೇ ವಿಷಾದದಿಂದ ಹೇಳಬೇಕಾಗಿದೆ.

ಅಡಿ ಟಿಪ್ಪಣಿಗಳು :

೧. ಜಿ. ಶಶಿಕಿರಣ, ಉಪನ್ಯಾಸಕರು, **'ಕೊಟ್ಟೂರು ನವನಿರ್ಮಾಣದತ್ತ'** ಪುಸ್ತಕ **'ಪರಿಪೂರ್ಣ'** ೨೦೦೫, ಪ್ರಕಾಶನ ಪ್ರಣವ ಪ್ರಕಾಶನ ಬೆಂಗಳೂರು. ಪುಟಸಂಖ್ಯೆ ೧೫೫–೧೬೨.

೨. ಎ.ಪಿ.ಎಂ.ಸಿ. ಕಾರ್ಯದರ್ಶಿಗಳು– ಕೊಟ್ಟೂರು.

೩. ಸಮುದಾಯ ಆರೋಗ್ಯಕೇಂದ್ರದ ವೈದ್ಯಾಧಿಕಾರಿಗಳು ಡಾ॥ ವೀರಣ್ಣ ಕೊಟ್ಟೂರು.

೪. ಕುಂ.ವಿ. ಕವಿಗಳು ಕೊಟ್ಟೂರು.

೫. ಆ.ಸಿ.ಹಿರೇಮಠ ಪ್ರಚಾರ್ಯರು, ಕೊಟ್ಟೂರೇಶ್ವರ ಮಹಾವಿದ್ಯಾಲಯ, ಕೊಟ್ಟೂರು.

ಅಧ್ಯಾಯ : ಏಳು

ಉಪಸಂಹಾರ :

'ಕೆಟ್ಟು ಪಟ್ಟಣ ಸೇರು' ಎಂಬ ನಾಡು ನುಡಿಯಂತೆ ಪಾಶ್ಚಾತ್ಯ ಸಂಸ್ಕೃತಿ ಹಾಗೂ ಪ್ರಭಾವಿ ಸಮೂಹ ಸಂವಹನ ಮಾಧ್ಯಮಗಳಾದ ರೇಡಿಯೋ, ದೂರದರ್ಶನ, ಚಲನಚಿತ್ರ, ಕಂಪ್ಯೂಟರ್ ಹಾಗೂ ಪತ್ರಿಕೆಗಳ ಪ್ರಭಾವದಿಂದ ಇತರ ಹಳ್ಳಿಗಳಂತೆ ಕೊಟ್ಟೂರು ಕೂಡ ಮೊದಲಿನ ಭವ್ಯ ಪರಂಪರೆಯಿಂದ ದೂರ ಸರಿಯುತ್ತಲಿದೆ ಎಂದು ಹೇಳಬಹುದು. ಅಲ್ಲದೆ ವಾಣಿಜ್ಯವಾಗಿ, ಶೈಕ್ಷಣಿಕವಾಗಿ ಹಾಗೂ ವ್ಯಾಪಾರಿಕವಾಗಿ ಅತ್ಯಂತ ಅಭಿವೃದ್ಧಿಯ ಪಥದಲ್ಲಿ ನಡೆಯುತ್ತದೆ ಎಂದು ಹೇಳಬಹುದು.

'ಕೊಟ್ಟೂರು ಗ್ರಾಮ ಅಧ್ಯಯನ' ಎಂಬ ಸಂಶೋಧನಾ ಸಂಪ್ರಬಂಧದ ವ್ಯಾಪ್ತಿ ಏಳು ಅಧ್ಯಾಯಗಳಿಂದ ಕೂಡಿದೆ. ಈ ಗ್ರಾಮ ಅಧ್ಯಯನಕ್ಕೆ ಮೂಲ ಪ್ರೇರಣೆ ಹಾಗೂ ಉದ್ದೇಶ, ಸ್ವರೂಪ, ವ್ಯಾಪ್ತಿಯನ್ನು ಮೊದಲನೆ ಅಧ್ಯಾಯದಲ್ಲಿ ತಿಳಿಸಲಾಗಿದೆ. ಅಂದರೆ ಇದರಲ್ಲಿ ಮುಖ್ಯವಾಗಿ ಈ ಅಧ್ಯಯನದ ಪರದಿಯನ್ನು ಸಂಕ್ಷಿಪ್ತವಾಗಿ ತಿಳಿಸಲು ಪ್ರಯತ್ನಿಸಲಾಗಿದೆ.

ಕೊಟ್ಟೂರಿನ ಭೌಗೋಳಿಕ ಹಾಗೂ **'ಕೊಟ್ಟೂರು'** ಎಂಬ ನಾಮಪದದ ಪದನಿಮಿತ್ತ ಹಾಗೂ ಐತಿಹ್ಯ, ಪುರಾಣಗಳಲ್ಲಿ ವ್ಯಕ್ತವಾದ ನಾಮ ನಿರ್ದೇಶನ ಅಲ್ಲದೇ ಶಾಸನಗಳಲ್ಲಿ ಇದರ ಪ್ರಸ್ತಾಪ ಹೇಗೆ ಬಂದಿದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಎರಡನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕೊಟ್ಟೂರು ಜನಪದರ ನೆಲೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಂದರೆ ಇಲ್ಲಿನ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಜೀವನವನ್ನು ಸಂಪೂರ್ಣವಾಗಿ ತಿಳಿಸಲಾಗಿದೆ. ಈ ಗ್ರಾಮ ಅಧ್ಯಾಯನದ ಕೇಂದ್ರ ಬಿಂದುವಾದ **'ಕೊಟ್ಟೂರು ಮಠಗಳ ಶೈವ ಪರಂಪರೆ'** ಎಂಬ ನಾಲ್ಕನೇ ಅಧ್ಯಾಯದಲ್ಲಿ ಪಂಚ ಮಠಗಳ ಅಂದರೆ ಮೂರು ಕಲ್ಲುಮಠ, ಹಿರೇಮಠ, ತೊಟ್ಟಿಲುಮಠ, ಗಚ್ಚಿನಮಠ ಹಾಗೂ ಮರಿಮಠಗಳ ಸ್ಥಾಪನೆ, ಬೆಳವಣಿಗೆ, ಕಾರಣ ಇತ್ಯಾದಿ ಅಂಶಗಳನ್ನು ನಿಖರವಾಗಿ ವಿವರಿಸುವುದು ಸೂಕ್ತವೆನಿಸಿದೆ.

ಇನ್ನೂ ಅಧ್ಯಾಯ ಐದರಲ್ಲಿ ಕೊಟ್ಟೂರಿನ ಜನಪದರ ಸೂಕ್ತ ಆಚರಣೆಗಳಾದ ಕಾರ್ತಿಕೋತ್ಸವ, ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವಗಳ ಆಚರಣೆಯನ್ನು ಸೂಕ್ತವಾಗಿ ಎಳೆ ಎಳೆಯಾಗಿ ಹಂಚಿ ವಿವರಿಸಿರುವುದು ಗಮನಾರ್ಹವಾದ ಅಂಶವೇ ಸರಿ.

ಆರನೇ ಅಧ್ಯಾಯದಲ್ಲಿ **'ಸಮಕಾಲೀನತೆ ಮತ್ತು ಕೊಟ್ಟೂರು'** ಎಂಬ ವಿಷಯದಲ್ಲಿ ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಕೃಷಿ, ಬೀಜೋತ್ಪಾದನೆ ಹಾಗೂ ಆಚರಣೆಗಳ ಸ್ಥಿರ ಪರಿಚಯವನ್ನು ಸೂಕ್ತವಾಗಿ ಇಲ್ಲಿ ವಿವರಿಸಲಾಗಿದೆ. ಹೆಚ್ಚಾಗಿ ಇಲ್ಲಿ ಕೊಟ್ಟೂರು ಇಂದು ಹೇಗಿದೆ? ಮುಂದೆ ಏನು ಆಗಬೇಕು? ಎಂಬುದರ ಸಂಕ್ಷಿಪ್ತ ವಿವರವನ್ನು ತಿಳಿಸಿರುವುದು ಗಮನಾರ್ಹ ಅಂಶವಾಗಿ ಕಂಡುಬರುತ್ತದೆ.

ಕೊಟ್ಟೂರಿನ ಸಮೀಪದ ಉಜ್ಜಿನಿ ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾಗಿದೆ. ಅಲ್ಲದೆ ಪೌರಾಣಿಕ, ಐತಿಹಾಸಿಕ ಹಿನ್ನೆಲೆಗಳನ್ನು ಹೊಂದಿ ಗಮನಾರ್ಹವಾಗಿದೆ. ಸಂಗೀತ, ಸಾಹಿತ್ಯ, ನೃತ್ಯ, ನಾಟಕ ರಸಿಕತೆಗಳ ಸಂವಾದಿಯಾಗಿದೆ. ಈ ಕೊಟ್ಟೂರು ಕವಿಗಳ, ಸಾಹಿತಿಗಳ, ದೇವಾಲಯಗಳ ಆಗರವಾಗಿದೆ. ಸ್ವಾತಂತ್ರ್ಯಕ್ಕಾಗಿ, ಕರ್ನಾಟಕ ರಾಜ್ಯದ ಏಕೀಕರಣಕ್ಕಾಗಿ ಹೋರಾಡಿದ ಸ್ವಾತಂತ್ರ್ಯ ವೀರರ, ರಾಜಕಾರಣಿಗಳ ಬೀಡಾಗಿದೆ. ಹಾಗೆಯೇ ಜನತೆಯನ್ನು ಸನ್ಮಾರ್ಗಕ್ಕೆ ಹಚ್ಚಿದ ಸಂತರ, ಭಕ್ತರ ಪುಣ್ಯಕ್ಷೇತ್ರವೂ ಆಗಿದೆ. ಅವರ ಗುಣಸಂಪನ್ನತೆಯ ಸಾತ್ವಿಕತೆಯ ತವರೂರಾಗಿದೆ. ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತ್ಯಿಕ ವ್ಯಾಪಾರ, ವಾಣಿಜ್ಯ, ಕಲಾಕೇಂದ್ರವೂ ಆಗಿದೆ. ಶರಣರ ದಿವ್ಯ ತೇಜಸ್ಸು ಘನೀಧೂತವಾಗಿದೆ ಗಂಗೆಯಲ್ಲಿ ಮಿಂದು ಪವಿತ್ರರಾದಂತೆ ಕೊಟ್ಟೂರಿನ ಭವ್ಯ ಶ್ರೀಗುರು ಕೊಟ್ಟೂರೇಶ್ವರನ ದರ್ಶನ ಮಾಡಿದವರು, ಭಕ್ತಿ ಭಾವನೆಯನ್ನು ಹೃದಯ ಮಂದಿರದಲ್ಲಿ ತುಂಬಿಕೊಂಡು ಆ ಭೂತಪೂರ್ವ ಅನುಭವವನ್ನು ಕಂಡು ಕೊಂಡಿದ್ದರು. ಸರ್ವಧರ್ಮ ಸಮನ್ವಯ ಶಿವಯೋಗ ಪ್ರಾರ್ಥನಾ ಯೋಗದಿಂದ ಸಮ್ಮಿಳತವಾದ ಊರು ವೈವಿಧ್ಯತೆಯಲ್ಲಿ ಏಕತೆ ಹೊಂದಿದೆ.

ಹೀಗೆ ಕೊಟ್ಟೂರಿನಲ್ಲಿ ವರ್ಷಕ್ಕೆ ಶ್ರೀ ಚಿಕ್ಕಮರಡಿ, ಶ್ರೀ ಚಿರಬಿಮೂಗಣ್ಣ, ಶ್ರೀ ಕೊಟ್ರಮ್ಮ, ಶ್ರೀ ಗುರುಕೊಟ್ಟೂರೇಶ್ವರ ಜಾತ್ರೆಗಳಾಗುತ್ತವೆ. ನಿಜಭಕ್ತರಿಗೆ ವರವಕೊಡುವ

ಕೊಟ್ಟೂರು ಶಿವಲಾಂಛನದಿಂದ ಕೂಡಿದೆ. ಸನ್ಮಾರ್ಗ ತೋರುವ ದೀವಟಿಗೆ ಆಗಿದೆ. ಸರ್ವಮಾನ್ಯ, ಸರ್ವಧರ್ಮ ಸಮನ್ವಯ, ಸರ್ವರಿಗೂ ಆಶ್ರಯ ಕೊಡುತ್ತಾ ಬಂದಿದೆ. ಊರದೇವಿ ಶ್ರೀಕೊಟ್ರಮ್ಮ ದೇವಿ ಮತ್ತು ಶ್ರೀ ಶೈವಮತತತ್ವ ಪ್ರತಿಪಾದಕ ಶ್ರೀ ಕೊಟ್ಟೂರು ಬಸವೇಶ್ವರ ಈ ಎರಡು ಜಾತ್ರೆಗಳಿಗು ಅವಿನಾವಭಾವ ಸಂಬಂಧವಿದೆ. ಶ್ರಾವಣಮಾಸದಲ್ಲಿ ಶ್ರೀ ಕೊಟ್ರಮ್ಮದೇವಿ ಜಾತ್ರೆ ಆದರೆ ಮಾಘಮಾಸದಲ್ಲಿ ಶ್ರೀ ಕೊಟ್ಟೂರೇಶ್ವರ ಜಾತ್ರೆ ಆಗುತ್ತದೆ. ಲಕ್ಷಾನುಗಟ್ಟಲೆ ಧಾರ್ಮಿಕರು ಬಂದು ಸ್ವಾಮಿಯ ದರ್ಶನ ಪಡೆಯುತ್ತಾರೆ. ಅನೇಕ ಧಾರ್ಮಿಕ, ಸಾಹಿತ್ಯಿಕ, ಸಂತೋಷಕರ ಚಟುವಟಿಕೆಗಳು ನಾಟಕ, ಬಯಲಾಟ, ಸಾಂಗತ್ಯಗಳು ಕಾರ್ತಿಕೋತ್ಸವವೋ ಜರುಗುತ್ತವೆ.

ಒಟ್ಟಾರೆಯಾಗಿ ವೀರಶೈವ ಧರ್ಮದ ರಕ್ಷಣೆಗಾಗಿ ದಲಿತರ ಏಳಿಗೆಗಾಗಿ ಹಿಂದೂ ಮುಸ್ಲಿಂರ ಭಾವೈಕ್ಯತೆಗಾಗಿ, ಜಾತ್ಯಾತೀತ ಜನರ ಸಂಗಮಕ್ಕಾಗಿ ಆತ್ಮ ಕಲ್ಯಾಣ ಸಾಧಿಸಿರುವ ಈ ವೈರಾಗ್ಯ ಮೂರ್ತಿಯ ನಿರ್ಮಲ ಕೀರ್ತಿಯು ಅಂದಿಗೂ ಉಂಟು, ಇಂದಿಗೂ ಉಂಟು, ಮುಂದೆಂದಿಗೂ ಉಂಟು ಎಂಬ ಚಿನ್ಮಯ ಚೈತನ್ಯ ಜ್ಯೋತಿಯ ಸರ್ವ ಜನಾಂಗದವರ ಹೃದಯಗಳಲ್ಲಿ ಬೆಳಗುತ್ತಲಿದೆ ಎಂದು ಹೇಳಬಹುದು.

ಅಡಿ ಟಿಪ್ಪಣಿಗಳು :

೧. ಜಿ. ಶಶಿಕಿರಣ, ಉಪನ್ಯಾಸಕರು, **'ಕೊಟ್ಟೂರು ನವ ನಿರ್ಮಾಣದತ್ತ'** ಪುಸ್ತಕ **'ಪರಿಪೂರ್ಣ'** ೨೦೦೫, ಪ್ರಕಾಶನ ಪ್ರಣವ ಪ್ರಕಾಶನ ಬೆಂಗಳೂರು. ಪುಟಸಂಖ್ಯೆ ೧೫೫-೧೬೨.

೨. ಬಿ.ಎಸ್. ವೀರಭದ್ರಪ್ಪ ಮಾಜಿ ಶಾಸಕರು, ಕೊಟ್ಟೂರು .

೩. ಎಂ.ಎಂ.ಜೆ. ಸ್ವರೂಪಾನಂದ ವಕೀಲರು, ಕೊಟ್ಟೂರು.

೪. ಕುಂ.ವಿ. ಕವಿಗಳು, ಕೊಟ್ಟೂರು.

೫. ಆರ್.ಸಿ. ಹಿರೇಮಠ್ ಪ್ರಚಾರ್ಯರು, ಕೊಟ್ಟೂರೇಶ್ವರ ಮಹಾವಿದ್ಯಾಲಯ, ಕೊಟ್ಟೂರು.



ಗ್ರಂಥ ಋಣ

೧. ಬಸವ ಲಿಂಗಕವಿ **'ಶ್ರೀ ಕೊಟ್ಟೂರು ಬಸವೇಶ್ವರ ಚಾರಿತ್ರ್ಯ'** ಶ್ರೀಕೊಟ್ಟೂರೇಶ್ವರ ಕಲ್ಯಾಣ ಮಂಟಪ ಸಮಿತಿ (ರಿ), ಕೊಟ್ಟೂರು. ೨೦೦೧

೨. ಡಾ॥ ಕೊಟ್ರಸ್ವಾಮಿ ಎ.ಎಂ.ಎಂ. **'ಪರಿಪೂರ್ಣ'** ಪ್ರಣವ ಪ್ರತಿಷ್ಠಾನ ಬೆಂಗಳೂರು, ೨೦೦೫

೩. ಬಿ.ಶೇಷಾದ್ರಿ, **'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ'** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೪. ಡಾ॥ ರಾಮ ಇಟ್ಟಣ್ಣವರ **'ಹಲಗಲಿ ಗ್ರಾಮ ಜಾನಪದ'** ವೀರಶೈವ ಅಧ್ಯಯನ ಅಕಾಡೆಮಿ ಬೆಳಗಾವಿ. ೧೯೯೫.

೫. ಎಸ್.ಎಂ.ರುದ್ರಯ್ಯ, ಕೊಟ್ಟೂರು, **'ಶ್ರೀ ಗುರುಬಸವ ರಾಜೀಯಂ'** ಪಲ್ಲವಿ ಪ್ರಕಾಶನ ಕೊಟ್ಟೂರು ೨೦೦೫.

೬. ಎಚ್.ಎನ್.ಕೊಟ್ರಪ್ಪ, **'ಶ್ರೀ ಗೋಣಿ ಬಸವೇಶ್ವರ'** ಐತಿಹಾಸಿಕ ನಾಟಕ, ಇಂಚರ ಪ್ರಕಾಶನ, ಹರಾಳು, ೨೦೦೫.

೭. ಎಂ.ಎಂ.ಹುಡೇದ, **'ವಿದ್ಯಾಶಿಖರ'** ಸ್ಮರಣ ಸಂಚಿಕೆ ಶ್ರೀ ಜಿ.ಸಿದ್ದಬಸವನಗೌಡ ಕೊಟ್ಟೂರು, ೧೯೯೬.

೮. ಡಾ॥ ಡಿ.ವಿ.ಪರಮಶಿವಮೂರ್ತಿ, **'ಸಾಹಿತ್ಯ ಕರ್ನಾಟಕ'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭.

೯. ಶ್ರೀವಿಶ್ವನಾಥ ಅಡಿಗ, **'ಜಂಗಮ'** ಸ್ಮರಣ ಸಂಚಿಕೆ ಸ್ವಾಗತ ಸಮಿತಿ, ಕೊಟ್ಟೂರು, ೨೦೦೬.

೧೦.ಅರ್ಜುನ ಯು.ಗೊಳಸಂಗಿ, **'ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ'** ಮಲ್ಲಿಕಾರ್ಜುನ ಪ್ರಕಾಶನ, ಗೊಳಸಂಗಿ, ೧೯೯೫.

೧೧.ಈಶ್ವರನ್ ಹಿರೇಮಲ್ಲೂರ ಕೆ. **'ಭಾರತದ ಹಳ್ಳಿಗಳು'** ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು, ೧೯೭೨.

೧೨.ಗೋವಿಂದರಾಜು.ಟಿ. **'ಚನ್ನದೇವಿ ಅಗ್ರಹಾರ ಜಾನಪದೀಯ ಅಧ್ಯಯನ'**, ತಳಗವಾಡಿ ಪ್ರಕಾಶನ, ಮೈಸೂರು, ೧೯೯೮.

೧೩.ಚನ್ನಣ್ಣ ವಾಲೀಕಾರ, **'ಒಂದು ಗ್ರಾಮದ ಜಾನಪದೀಯ ಅಧ್ಯಯನ'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೧.

೧೪.ಚನ್ನಣ್ಣ ವಾಲೀಕಾರ, **'ಜಾನಪದ ಲೋಕ'**, ದ.ಬಂಡಾಯ ಪ್ರಚಾರಸಮಿತಿ, ಗುಲ್ಬರ್ಗಾ, ೨೯೯೩.

೧೫.ಜೋಗನ್ ಶಂಕರ್ **'ಗ್ರಾಮಸಮಾಜ'** ಜೀವ ಪ್ರಕಾಶನ, ಮೈಸೂರು, ೨೯೯೫.

೧೬.ಮರುಳ ಸಿದ್ಧಯ್ಯ ಎಚ್.ಎಂ. **'ಗ್ರಾಮೋನ್ನತಿ'** ಸ್ವತ್ತ ಪ್ರಕಾಶನ, ಇಟ್ಟಗಿ, ೧೯೯೦.

೧೭.ರಂಗಸ್ವಾಮಿ.ಬಿ. **'ಹುಟ್ಟಿದ ಹಳ್ಳಿ ಹಳ್ಳದ ಹಾಡು'**, ಪ್ರಸಾರಾಂಗ, ಮೈಸೂರು, ವಿ.ವಿ., ಮೈಸೂರು ೧೯೩೩.

Sl. No.	WRITER	BOOK	PUBLISH	YEAR.
01	Srinivas. m.n	Indias villagers.	Asia publisting house Bombay	2996
02	Srinivas. m.n	The Remembered village	Oxford university press, Bombay	1976.
03	Johan gatting	Theory and methoks at social Research	S.ahand L.T.D. Ramnagar, New-Delli	1967
04	Karmarkar	The Religions at India.	Lanovala	
05	Promod kumar	Folk loras and Rituals in Triballite.	Abhineva Publications	1984
06	Redfield Rabort and Alfonso villa Rajas	A maya village.	Phootrix bookx Chicago	1962

ವಕ್ತೃ ವಿವರ

ಕ್ರ ಸಂ	ಸ್ಥಳ	ಹೆಸರು	ಜಾತಿ	ವೃತ್ತಿ	ವಯಸ್ಸು
೧.	ಕೊಟ್ಟೂರು	ಪಿ.ಎಂ.ಬಸವಲಿಂಗಯ್ಯ	ವೀರಶೈವ	ಉಪನ್ಯಾಸಕರು	೩೮
೨	ಕೊಟ್ಟೂರು	ಹೆಚ್.ಎಂ.ರುದ್ರಮುನಿ ಅಯ್ಯ	ವೀರಶೈವ	ನಿವೃತ್ತ ಶಿಕ್ಷಕರು	೭೦
೩	ಕೊಟ್ಟೂರು	ಹಿರೇಮಠ	ವೀರಶೈವ	ಪ್ರಾಚಾರ್ಯರು	೬೦
೪	ಕೊಟ್ಟೂರು	ಸತೀಶ ಪಟೇಲ್	ವೀರಶೈವ	ಇ.ಟಿ.ವಿ.	೩೦
೫	ಕೊಟ್ಟೂರು	ಕುಂ.ವಿ	ಕುಂಬಾರ	ಲೇಖಕರು	೬೧
೬	ಕೊಟ್ಟೂರು	ಸಿ.ಹೆಚ್.ಎಂ. ಕೊಟ್ರಯ್ಯ	ವೀರಶೈವ	ನಿವೃತ್ತ ಉಪನ್ಯಾಸಕರು	೬೦
೭	ಕೊಟ್ಟೂರು	ಬಿ.ಎಸ್. ವೀರಭದ್ರಪ್ಪ	ವೀರಶೈವ	ಮಾಜಿ ಶಾಸಕರು	೭೦
೮	ಕೊಟ್ಟೂರು	ಎಂ.ಎಂ.ಜೆ. ಸ್ವರೂಪಾನಂದ	ವೀರಶೈವ	ವಕೀಲರು	೬೫
೯	ಕೊಟ್ಟೂರು	ಎಂ.ಎಂ.ಜೆ. ಹರ್ಷವರ್ದನ್	ವೀರಶೈವ	ಮುಖಂಡರು	೫೦
೧೦	ಕೊಟ್ಟೂರು	ಹಿ.ಮಾ.ಬಸವರಾಜ	ವೀರಶೈವ	ಪತ್ರಕರ್ತರು	೭೫
೧೧	ಕೊಟ್ಟೂರು	ಪೂಜಾರ್ ಕೊಟ್ರಪ್ಪ	ವೀರಶೈವ	ಉಪನ್ಯಾಸಕರು	೫೮
೧೨	ಕೊಟ್ಟೂರು	ಬಿ.ಸಿ.ವಿಶ್ವಮೂರ್ತಿ	ವೀರಶೈವ	ನಿವೃತ್ತ ಶಿಕ್ಷಕರು	೬೦
೧೩	ಎಂ.ಬಿ. ಐಯ್ಯನಹಳ್ಳಿ	ಎನ್.ಎಂ.ರವಿಕುಮಾರ್	ವೀರಶೈವ	ಉಪನ್ಯಾಸಕರು	೪೦
೧೪	ಕೊಟ್ಟೂರು	ಕೆಂಚಪ್ಪ	ನಾಯಕ	ಸ್ನಾತಕ ಪದವಿದರ	೨೮
೧೫	ಕೊಟ್ಟೂರು	ಹನುಮಂತಪ್ಪ	ಎಸ್.ಸಿ	ಸುಣ್ಣಗಾರ	೫೫
೧೬	ಗಜಾಪುರ	ಭೀಮಣ್ಣ	ಎಸ್.ಸಿ	ಪತ್ರಕರ್ತರು	೩೫
೧೭	ಕೊಟ್ಟೂರು	ಡಾ॥ನಾಗಭೂಷಣ	ವೀರಶೈವ	ಆಡಳಿತಾಧಿಕಾರಿಗಳು	೫೦
೧೮	ಹರಪನಹಳ್ಳಿ	ಸದಾಶಿವಪ್ಪ	ವೀರಶೈವ	ವ್ಯಾಪಾರ	೬೦
೧೯	ಕೊಟ್ಟೂರು	ಗಿರೀಶ್ ಬಿ.ವಿ.	ವೀರಶೈವ	ಪಿ.ಎಸ್.ಐ	೩೨
೨೦	ಕೊಟ್ಟೂರು	ಕಾಮಶೆಟ್ಟಿ ಕೊಟ್ರೇಶ್	ವೀರಶೈವ	ಅಧ್ಯಕ್ಷರು ಪ.ಪಂ	೩೩

೨೧	ಕೆ.ಟಿ.ಆರ್	ಆರ್.ಎಂ.ಎಸ್. ವೀರಯ್ಯ	ವೀರಶೈವ	ಮುಖ್ಯಾಧಿಕಾರಿಗಳು	೫೦
೨೨	ಕೆ.ಟಿ.ಆರ್.	ಡಾ॥ವೀರಣ್ಣ	ಎಸ್.ಸಿ.	ವೈದ್ಯಾದಿಕಾರಿಗಳು	೩೫
೨೩	ಕೊಟ್ಟೂರು	ತೆಗ್ಗಿನಕೇರಿ ಕೊಟ್ರೇಶ್	ಎಸ್.ಸಿ	ಶಿಕ್ಷಕರು	೩೩
೨೪	ಕೊಟ್ಟೂರು	ಮರಿಸ್ವಾಮಿ	ಎಸ್.ಸಿ	ಕಾರ್ಯಕರ್ತರು	೩೨
೨೫	ದಾವಣಗೆರೆ	ಹೆಚ್.ಗಿರಿಜಮ್ಮ	ವೀರಶೈವ	ಸಾಹಿತಿ	೩೫
೨೬	ಕೊಟ್ಟೂರು	ಈಶ್ವರಯ್ಯ ಪಿ.ಎಂ	ವೀರಶೈವ	ಶಿಕ್ಷಕರು	೪೫
೨೭	ಕೊಟ್ಟೂರು	ಸಿದ್ದಲಿಂಗನ ಗೌಡ	ವೀರಶೈವ	ಪ.ಪಂ.ಅಧ್ಯಕ್ಷರು	೬೫
೨೮	ಕೊಟ್ಟೂರು	ಸಿ.ಹೆಚ್.ಎಂ.ಮಂಜುನಾಥಯ್ಯ	ವೀರಶೈವ	ನಿವೃತ್ತ ಸ್ಕೂಲ್ ಇನ್ಸ್‌ಪೆಕ್ಟರ್	೭೦

ಛಾಯಚಿತ್ರಗಳು




ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಮಹಾದ್ವಾರ




ಮೂರುಕಲ್ಲು ಮಠ–ಕೊಟ್ಟೂರು



[illegible] —[illegible]ಟ್ಟೂರು



[illegible]



ತೊಟ್ಟ[illegible] –ಕೊಟ್ಟೂರು



ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಗೆ ಅಕ್ಬರ್ ದೊರೆ ಕೊಟ್ಟ ಮಣಿಮಂಚ



ಬೆಳ್ಳಿರಥ– ಶ್ರೀ ಕ್ಷೇತ್ರ ಕೊಟ್ಟೂರು



ಶ್ರೀ ಮರಿಕೊಟ್ಟೂರೇಶ್ವರ ಸ್ವಾಮಿ ಮಠ–ಕೊಟ್ಟೂರು



ಗದ್ದೆಕಲ್ಲೇಶ್ವರ ಗುಡಿ–ಕೊಟ್ಟೂರು



ಕನ್ನಿಕಾಪರಮೇಶ್ವರ ದೇವಸ್ಥಾನ–ಕೊಟ್ಟೂರು



ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಮಹಾರಥದ ಗಡ್ಡೆ